14TH JULY 2005

ಕರ್ನಾಟಕ ವಿಧಾನ ಸಭೆ

ಗುರುವಾರ 14ನೇ ಜುಲೈ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ವಿತ್ತೀಯ ಕಾರ್ಯಕಲಾಪ

ವಿಷಯ : 2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ (ಬೇಡಿಕೆಗಳ ಸಂಖ್ಯೆ : 1– ಕೃಷಿ ಮತ್ತು ತೋಟಗಾರಿಕೆ, 23–ಕಾರ್ಮಿಕ ಮತ್ತು 17 – ಶಿಕ್ಷಣ)

ಶ್ರೀ ಕೆ. ರಘುಪತಿ ಭಟ್ (ಉಡುಪಿ) :– ಮಾನ್ಯ ಅಧ್ಯಕ್ಷರೆ, ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತು ಶಿಕ್ಷಣ ಕ್ಷೇತ್ರದ ಬಗ್ಗೆ ಮಾತನಾಡಬೇಕೆಂದು ಯೋಚನೆ ಮಾಡಿದಾಗ ಸದನದಲ್ಲಿ ಉನ್ನತ ಹಾಗೂ ಪ್ರೌಢ ಶಿಕ್ಷಣ ಸಚಿವರು ಇಬ್ಬರೂ ಇಲ್ಲ.

ಅಧ್ಯಕ್ಷರು :– ಮಾನ್ಯ ಸಚಿವರು ಬರುತ್ತಾರೆ. ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :– ಸದನದಲ್ಲಿ ಮಂತ್ರಿಗಳು ಇಲ್ಲವಲ್ಲ! ಸಂಬಂಧಪಟ್ಟ ಮಂತ್ರಿಗಳು, ಅಧಿಕಾರಿಗಳು ಇಲ್ಲ, ಯಾರೂ ನೋಟ್ ಮಾಡಿಕೊಳ್ಳುತ್ತಾರೆ? ಕಾರ್ಮಿಕ, ಶಿಕ್ಷಣ ವಿಷಯಗಳಿವೆ. ಶಿಕ್ಷಣ ಕ್ಷೇತ್ರದ ಮೇಲೆ ಈಗ ಚರ್ಚೆಯಾಗುತ್ತಿದೆ. ಈಗ ನಾಲ್ಕು ಇಲಾಖೆಗಳಿವೆ, ಒಬ್ಬ ಇಲಾಖೆಯ ಮಂತ್ರಿಗಳಾದರೂ ಇರಬೇಕಲ್ಲವೆ? ಗೌರವಾನ್ವಿತ ಸದಸ್ಯರು ಮಾತನಾಡುವಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೆ ಹೇಗೆ? ಕೃಷಿ ಬಹಳ ಮುಖ್ಯವಾದುದು, ಕೈಗಾರಿಕೆ, ಶಿಕ್ಷಣ, ಕಾರ್ಮಿಕ ಹೀಗೆ ನಾಲ್ಕು ಇಲಾಖೆಗಳ ಪೈಕಿ ಒಬ್ಬರಾದರೂ ಮಂತ್ರಿಗಳು ಸದನದಲ್ಲಿ ಇರಬೇಕು. ಸದಸ್ಯರಿಗೆ ಒಂದು ಘನತೆ ಗೌರವ ಬೇಡವೇ?

ಅಧ್ಯಕ್ಷರು :– ಆಯಿತು. ನೀವು ಕುಳಿತುಕೊಳ್ಳಿ. ನಾನು ಸಂಬಂಧಪಟ್ಟ ಸಚಿವರನ್ನು ನಾನು ಕರೆಸುತ್ತೇನೆ. ಅಧಿಕಾರಿಗಳು ಇದ್ದಾರೆ. ನೀವು ಮಾತನಾಡಿ.

ಶ್ರೀ ಕೆ. ರಘುಪತಿ ಭಟ್ :- ಮಾನ್ಯ ಅಧ್ಯಕ್ಷರೆ, ಇವತ್ತು ಶಿಕ್ಷಣ ಕ್ಷೇತ್ರದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಕಾರ್ಜೋಳ ಗೋವಿಂದ ಮಕಟಪ್ಪ (ಮುಧೋಳ್) :- ಸದನದಲ್ಲಿ ಶಿಕ್ಷಣ ಮುಂತಾದ ವಿಷಯಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಇದ್ದಾರೆ ಹೇಳಿ. ಕೃಷಿ, ಶಿಕ್ಷಣ, ಕಾರ್ಮಿಕ ಇಲಾಖಾಧಿಕಾರಿಗಳು ಇಲ್ಲ. ಸರ್ಕಾರದ ಸಂಬಳ ತೆಗೆದುಕೊಂಡು ಕೆಲಸವನ್ನು ಮಾಡುವವರು ಈ ಸದನಕ್ಕೆ ಬರುವುದಿಲ್ಲವೆಂದರೆ ಹೇಗೆ? ಓಟು ಹಾಕಲಿಕ್ಕೆ ಎಂ.ಎಲ್.ಎ/ಮಂತ್ರಿಗಳು ಹೋಗಿದ್ದಾರೆ, ಅಧಿಕಾರಿಗಳು ಏಕೆ ಸದನದಲ್ಲಿಲ್ಲ? ಅವರಿಗೆ ನೀವು ಸಂಬಳ ಕೊಡುವುದಿಲ್ಲವೇ?

ಅಧ್ಯಕ್ಷರು :- ಆಯಿತು, ನೋಡಿ ಮುಖ್ಯಮಂತ್ರಿಗಳು, ಕಾರ್ಮಿಕ ಮಂತ್ರಿಗಳು ಬಂದಿದ್ದಾರೆ. ಉಳಿದವರಿಗೆ ಸದನಕ್ಕೆ ಬರಲಿಕ್ಕೆ ಹೇಳಿಕಳುಹಿಸಿದ್ದೇನೆ, ಬರುತ್ತಾರೆ. ತಾವು ಮಾತನಾಡಿ.

ಶ್ರೀ ಕೆ. ರಘುಪತಿ ಭಟ್ :- ಇವತ್ತು ಶಿಕ್ಷಣ ಕ್ಷೇತ್ರವನ್ನು ಬೇರೆ ಇಲಾಖೆಗಳಿಗೆ ಹೋಲಿಸಿದರೆ ಎಷ್ಟು ಆದ್ಯತೆಯನ್ನು ಸರ್ಕಾರ ಕೊಡಬೇಕಾಗಿತ್ತು, ಅಷ್ಟು ಆದ್ಯತೆ ಸಿಗುತ್ತಿಲ್ಲ. ಅದರಲ್ಲೂ ಪ್ರಾಥಮಿಕ ಶಿಕ್ಷಣ ಕಡಿಮೆ ಆದ್ಯತೆಯನ್ನು ಸರ್ಕಾರ ಕೊಡುತ್ತಿದೆಯೆಂಬ ವಿಚಾರದ ಬಗ್ಗೆ ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯಲಿಕ್ಕೆ ಇಚ್ಛಿಸುತ್ತೇನೆ. ಶಿಕ್ಷಕರು ಎಂದರೆ ನಮ್ಮ ದೇಶದ ಸಂಸ್ಕೃತಿಯಲ್ಲಿ ವಿಶೇಷವಾದ ಗೌರವವನ್ನು ಕೊಡಲಾಗಿದೆ. ಮಾತೃ, ಪಿತೃ ನಂತರ ಆಚಾರ್ಯ ದೇವೋಭವ ಎಂದು ಹೇಳುವಂತಹ ಸ್ಥಾನವನ್ನು ಕೊಟ್ಟಂತಹ ಸಂದರ್ಭದಲ್ಲಿ ಸರ್ಕಾರದಿಂದ ನಿಗದಿತ ಸಮಯದಲ್ಲಿ ಈವತ್ತು ಶಿಕ್ಷಕರಿಗೆ ಸರಿಯಾದ ಸಂಬಳವನ್ನು ಕೊಡದಿರುವಂತಹ ಸಂದರ್ಭಗಳು ಬಹಳಷ್ಟಿವೆ. ತಿಂಗಳ ಕೊನೆಯ ವಾರದಲ್ಲಿ ಸಂಬಳ ಬರದೆ ತೊಂದರೆಯನ್ನು ಅನುಭವಿಸುತ್ತಿರುವುದನ್ನು ನಾವು ಇತ್ತೀಚಿನ ದಿನಗಳಲ್ಲಿ ನೋಡಿದ್ದೇವೆ. ಇದು ಸರ್ಕಾರಿ ಶಾಲೆಗಳಲ್ಲಿರುವ ಶಿಕ್ಷಕರ ಪರಿಸ್ಥಿತಿಯಾದರೆ ಇನ್ನೂ ಅನುದಾನ ರಹಿತ ಶಾಲೆಯ ಶಿಕ್ಷಕರಿಗೆ ಸಂಬಳವನ್ನು ಕೊಡಲಿಕ್ಕೆ ಸರ್ಕಾರ ಬದ್ಧವಲ್ಲವೆಂದು ಬರೆಸಿಕೊಂಡಿರುವುದರಿಂದ ಅವರಿಗೆ ಇವತ್ತು ಭದ್ರತೆಯನ್ನು ಸರ್ಕಾರ ಮಾಡಿಲ್ಲ. ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಶಾಲೆಗಳ ವಿಷಯದಲ್ಲಿ ಸರ್ಕಾರ ತಾರತಮ್ಯ ಮಾಡಬಾರದು. ಶಿಕ್ಷಕರ ವಿಷಯದಲ್ಲಿ ಅನುದಾನರಹಿತ, ಅನುದಾನಿತ ಶಾಲೆಗಳೆಂದು ತಾರತಮ್ಯ ಮಾಡಬಾರದು. ಮೊನ್ನೆ ಮಾಧುಸ್ವಾಮಿಯವರು ಮಾತನಾಡಿದ ಸಂದರ್ಭದಲ್ಲಿ ಅನುದಾನಿತ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸಲಿಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆಂದು ಸಚಿವರು ಭರವಸೆಯನ್ನು ಕೊಟ್ಟಿದ್ದನ್ನು ನಾನು ಈ ಸಂದರ್ಭದಲ್ಲಿ

ಸ್ವಾಗತಿಸುತ್ತೇನೆ. ಹಿಂದೆ ಕೆಲವು ಶಾಲೆಗಳಲ್ಲಿ ನಿವೃತ್ತರಾದ, ಸ್ವಯಂನಿವೃತ್ತರಾದ ಶಿಕ್ಷಕರ ಖಾಲಿ ಹುದ್ದೆಗಳಿಗೆ ಪುನಃ ಶಿಕ್ಷಕರನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯಿರಲಿಲ್ಲ. ಆದರೆ, ಸರ್ಕಾರ ಮೊನ್ನೆ ಸದನದಲ್ಲಿ, ಆ ರೀತಿ ಖಾಲಿಯಾದ ಹುದ್ದೆಗಳಿಗೆ ಶಿಕ್ಷಕರನ್ನು ತೆಗೆದುಕೊಳ್ಳುವ ಭರವಸೆಯನ್ನು ಕೊಟ್ಟಿರುವುದು ಬಹಳ ಸ್ವಾಗತಾರ್ಹವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಇಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಏಕೆಂದರೆ ಶಿಕ್ಷಣ ಎಂದರೆ ಯಾವಾಗ ನಾವು ಮಕ್ಕಳಿಗೆ ಸರಿಯಾದ ಶಿಕ್ಷಣವನ್ನು ಕೊಡುತ್ತೇವೆಯೋ ಆಗ ಸ್ವಾಸ್ಥ್ಯ ಸಮಾಜವನ್ನು ಕಟ್ಟಬಹುದೆಂಬ ವಿಶ್ವಾಸವಿರುತ್ತದೆ. ಅನುದಾನಿತ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಒತ್ತಾಯಿಸುತ್ತೇನೆ ಹಾಗೂ ಅನುದಾನರಹಿತ ಶಾಲೆಗಳಿಗೂ ಕೂಡ ಶಿಕ್ಷಕರಿಗೆ ಒಂದು ಕನಿಷ್ಠ ವೇತನ ಭದ್ರತೆಯನ್ನು ಕೊಡುವಂತಹ ದೃಷ್ಟಿಯಿಂದ ಸ್ವಲ್ಪ ವೇತನದ ವ್ಯವಸ್ಥೆಯನ್ನು ಮಾಡಬೇಕೆಂದು ಒತ್ತಾಯಿಸುತ್ತೇನೆ. ಶಿಕ್ಷಕರ ಪರಿಸ್ಥಿತಿ ಈ ರೀತಿಯಿದ್ದರೆ ನಮ್ಮ ಶಿಕ್ಷಣ ಇಲಾಖೆಯಿಂದ ದಿವಸಕ್ಕೊಂದು ಹೊಸ ಹೊಸ ಆದೇಶಗಳು ಬರುತ್ತಿರುತ್ತವೆ. ಇದರಿಂದ ಶಿಕ್ಷಕರಿಗೆ ಇವತ್ತು ಯಾವ ದೃಷ್ಟಿಯಲ್ಲಿ ಹೋಗಬೇಕೆಂಬುದೇ ಅರ್ಥವಾಗದಾಗಿದೆ. ಆದ್ದರಿಂದ ಸರಿಯಾದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಪ್ರತಿ ವರ್ಷವು ಬದಲಾವಣೆಯನ್ನು ಮಾಡದೇ ಸಮಾನವಾಗಿ ಇದನ್ನು ತೆಗೆದುಕೊಂಡು ಹೋಗುವಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ವಿದ್ಯಾರ್ಥಿಗಳ ಪರಿಸ್ಥಿತಿಯೂ ಕೂಡ ಬೇರೆಯದಾಗಿದೆ. ಇವತ್ತು ನಮ್ಮ ಮಕ್ಕಳಲ್ಲಿ ನಾವು ತಾರತಮ್ಯ ತರುವಂತಹ ವ್ಯವಸ್ಥೆಯಿದೆ. ಇವತ್ತು ಅನುದಾನಿತ, ಅನುದಾನರಹಿತ ಹಾಗೂ ಸರ್ಕಾರಿ ಶಾಲೆಗಳಿಗೆ ಹೋಗುವ ಮಕ್ಕಳು ಒಂದೇ ಇರುತ್ತಾರೆ. ಅಣ್ಣತಮ್ಮಂದಿರು, ಒಂದೇ ಬದಿಯ ಮನೆಯ ಮಕ್ಕಳು ಅಧ್ಯಾಪಕ, ಆಡಳಿತ ಚೆನ್ನಾಗಿದೆಯೆಂದು ಆ ಶಾಲೆಗೆ ಹೋಗುತ್ತಿರುತ್ತಾರೆ, ಆದರೆ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ ಕೊಡುವಾಗ ಆ ವಿದ್ಯಾರ್ಥಿಗಳಲ್ಲೇ ತಾರತಮ್ಯ ನಡೆಯುತ್ತಿದೆ. ಅನುದಾನಿತ ಅಥವಾ ಅನುದಾನರಹಿತ ಶಾಲೆಗಳವರಿಗೆ ಯಾವುದೇ ವ್ಯವಸ್ಥೆಯಿಲ್ಲ. ಆದರೆ ಸರ್ಕಾರಿ ಶಾಲೆಗಳಲ್ಲಿ ಎಲ್ಲಾ ವ್ಯವಸ್ಥೆಯಿದೆ. ಇವತ್ತು ಒಂದು ಲೆಕ್ಕದಲ್ಲಿ ಅನುದಾನರಹಿತ ಹಾಗೂ ಅನುದಾನಿತ ಶಾಲೆಗಳನ್ನು ನಡೆಸುವ ಶಿಕ್ಷಣ ಸಂಸ್ಥೆಗಳನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ ಇವತ್ತು ವಿಶೇಷವಾಗಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಯಾವುದೇ ಶುಲ್ಕವನ್ನು ತೆಗೆದುಕೊಳ್ಳದೆ, ಸರ್ಕಾರ ಮಾಡುವಂತಹ ಕೆಲಸವನ್ನು ಈ ಸಂಸ್ಥೆಗಳು ಮಾಡುತ್ತಿವೆ. ಆ ಸಂಸ್ಥೆಯನ್ನು ನಡೆಸುವುದು ಕಷ್ಟವಿರುವ ಸಂದರ್ಭದಲ್ಲಿ ಈ ವಿದ್ಯಾರ್ಥಿಗಳಲ್ಲಿ ತಾರತಮ್ಯ ಮಾಡಿದ ಕಾರಣ ಅನುದಾನರಹಿತ ಮತ್ತು ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಎದ್ದುಕಾಣುತ್ತಿದೆ. ಇದರಿಂದ ಎಷ್ಟೋ ಶಾಲೆಗಳು ಮುಚ್ಚುವಂತಹ ಪರಿಸ್ಥಿತಿಯಲ್ಲಿವೆ.

ಇಂಗ್ಲೀಷ್ ಮೀಡಿಯಮ್ ಶಾಲೆಗಳಿಗೆ ಈ ವಿಚಾರ ಸಂಬಂಧಿಸುವುದಿಲ್ಲ. ಏಕೆಂದರೆ ಅವರು ಡೊನೇಷನ್ ತೆಗೆದುಕೊಳ್ಳುತ್ತಾರೆ, ಹೆಚ್ಚಾಗಿ ಶ್ರೀಮಂತ ಮಕ್ಕಳು ಅಲ್ಲಿಗೆ ಹೋಗುವುದರಿಂದ ಏನಾದರೂ ವ್ಯವಸ್ಥೆಯನ್ನು ಮಾಡಬಹುದು. ಆದರೆ ಕನ್ನಡ ಮಾಧ್ಯಮದ ಶಾಲೆಯಿಂದ ಬಹಳಷ್ಟು ತೊಂದರೆಯಿದೆ. ವಿದ್ಯಾರ್ಥಿಗಳಿಗೆ ಸವಲತ್ತುಗಳನ್ನು ಕೊಡುವ ಸಂದರ್ಭದಲ್ಲಿ ಯಾವುದೇ ತಾರತಮ್ಯ ಮಾಡಬಾರದೆಂದು ಸರ್ಕಾರದಲ್ಲಿ ನಾನು ವಿನಂತಿಸುತ್ತೇನೆ. ಅದು ಅನುದಾನಿತ, ಅನುದಾನರಹಿತ ಅಥವಾ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಠ್ಯಪುಸ್ತಕ ವಿತರಣೆಯಲ್ಲಾಗಲಿ ಯಾವುದೇ ತಾರತಮ್ಯ ಮಾಡಬಾರದು. ಬೇರೆಲ್ಲಾ ವಿಷಯಗಳಲ್ಲಿ ಸಮಾನವಾಗಿ ಸವಲತ್ತುಗಳನ್ನು ಒದಗಿಸಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ. ಇನ್ನೊಂದು ವಿಷಯ ಇಲ್ಲಿ ಚರ್ಚೆಗೆ ಬಂದಿದೆ. ಬಹಳಷ್ಟು ಸದಸ್ಯರು ಅದರ ಬಗ್ಗೆ ಪ್ರತಿಪಾದನೆಯನ್ನು ಮಾಡಿದ್ದಾರೆ. ಮೇಲ್ಮನೆಯಲ್ಲೂ ಕೂಡ ಇದರ ಬಗ್ಗೆ ಗಂಭೀರವಾಗಿ ಚರ್ಚೆಯಾಗಿದೆಯೆಂದು ನಾನು ಭಾವಿಸುತ್ತೇನೆ. ನಾನೂ ಸಹ ಅದಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಒಂದನೇ ತರಗತಿಯಿಂದ ಇಂಗ್ಲೀಷ್ ಅನ್ನು ಕಲಿಸಬೇಕೆಂಬ ಬಗ್ಗೆ ಸರ್ಕಾರ ವಿಶೇಷವಾಗಿ ಕ್ರಮವನ್ನು ಕೈಗೊಳ್ಳಬೇಕು. ಗ್ರಾಮೀಣ ಮಕ್ಕಳಿಗೆ ಇಂಗ್ಲೀಷ್ ಶಿಕ್ಷಣ ಕೊಡುವುದನ್ನು ಬಿಟ್ಟುಬಿಡಬೇಕೆಂದರೆ, ರಾಜ್ಯದ ಯಾವುದೇ ಮಕ್ಕಳಿಗೆ ಈ ಶಿಕ್ಷಣ ಸಿಗುವುದಿಲ್ಲವೆಂದರೆ ತೊಂದರೆಯಿಲ್ಲ, ಆದರೆ ಇವತ್ತು ನಗರ ಪ್ರದೇಶಗಳಲ್ಲಿ ಇಂಗ್ಲೀಷ್ ಮೀಡಿಯಮ್‌ನಲ್ಲಿ ಕಲಿತು ಬಂದ ಮಕ್ಕಳು ಇಂಗ್ಲೀಷ್ ಶಿಕ್ಷಣದಲ್ಲಿ ಪರಿಣಿತರಾಗಿರುತ್ತಾರೆ. ಆರ್ಥಿಕವಾಗಿ ಹಿಂದುಳಿದಿರುವ ಮಕ್ಕಳು ಕಲಿಯುವ ಶಾಲೆಗಳಲ್ಲಿ 5ನೇ ತರಗತಿಯವರಿಗೆ ಇಂಗ್ಲೀಷ್ ಶಿಕ್ಷಣವಿರುವುದಿಲ್ಲ. ನಾವು ಇವತ್ತು ಕನ್ನಡವನ್ನು ಕಲಿಸಬಾರದೆಂದಲ್ಲ. ಕನ್ನಡವನ್ನು ಮಾತೃ ಭಾಷೆಯಾಗಿ ಉಳಿಸಿಕೊಳ್ಳಬೇಕು. ಅದರೊಂದಿಗೆ ಇವತ್ತು ಅಗತ್ಯವಾಗಿರುವಂತಹ ಇಂಗ್ಲೀಷ್ ಶಿಕ್ಷಣವನ್ನು 1ನೇ ತರಗತಿಯಿಂದಲೇ ಪ್ರಾರಂಭಿಸುವಂತಹದು ಅತ್ಯಂತ ಸ್ವಾಗತಾರ್ಹವಾದಂತಹ ಬೆಳವಣಿಗೆಯಾಗಿದೆ. ಬಹಳ ವರ್ಷಗಳಿಂದ ನಮ್ಮ ಹೆಚ್ಚಿನ ಶಾಸಕರು ಈ ವಿಷಯದ ಮೇಲೆ ಬೇಡಿಕೆಯನ್ನು ಮಂಡಿಸುತ್ತಿದ್ದರೂ ಇವತ್ತು ಸರ್ಕಾರ ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿರುವುದು ನಮಗೆ ಸಂತೋಷ ತಂದಿರುವಂತಹ ವಿಚಾರವಾಗಿದೆ. ಸಚಿವರು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವ ಸಂದರ್ಭದಲ್ಲಿ ಇದನ್ನು ಮಾಡುತ್ತೇವೆಂದು ಹೇಳಿದ್ದಾರೆ. ಹಾಗಾಗಿ ಸರ್ಕಾರ ಇದನ್ನು ಬರುವ ವರ್ಷದಿಂದಲೇ ಪ್ರಾರಂಭಿಸಬೇಕೆಂಬ ಒತ್ತಾಯವನ್ನು ನಾನು ಮಾಡುತ್ತೇನೆ. ಈ ಇಂಗ್ಲೀಷಿನ ಜೊತೆಗೆ ನಮ್ಮ ಜಿಲ್ಲೆಯಲ್ಲಿ ಒಂದು ಒಳ್ಳೆಯ ಕಾರ್ಯಕ್ರಮವನ್ನು ನಮ್ಮ ಜಿಲ್ಲೆಯ ಶಿಕ್ಷಣ ಇಲಾಖೆ ಮಾಡುತ್ತಿದೆ. ಇದನ್ನು ಇಡೀ ರಾಜ್ಯದಲ್ಲಿ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಒಂದನೇ ತರಗತಿಯಿಂದ ಯೋಗ ಮತ್ತು ನೈತಿಕ ಶಿಕ್ಷಣವನ್ನು ಕಲಿಸುವ ವ್ಯವಸ್ಥೆಯನ್ನು

ನಮ್ಮ ಉಡುಪಿ ಜಿಲ್ಲೆಯಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಅತ್ಯಂತ ಯಶಸ್ವಿಯಾಗಿ ಮಾಡುತ್ತಿದ್ದಾರೆ. ನಮ್ಮ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಗ್ರಾಮೀಣಾಭಿವೃದ್ಧಿ ಸಂಸ್ಥೆಯವರು ನಡೆಸುವ ಅವರದ್ದೇ ಆದಂತಹ ಒಂದು ಸಂಸ್ಥೆ ಇದೆ. ಅದರಲ್ಲಿ ಯೋಗ ಮತ್ತು ನೈತಿಕತೆಯ ಶಿಕ್ಷಣವನ್ನು ಕಲಿಸಿಕೊಡಲಾಗುತ್ತಿದೆ. ಅವರು ನಮ್ಮ ಎಲ್ಲಾ ನೈತಿಕತೆಯ ನೊಂದು ಸಬ್ಜೆಕ್ಟ್‌ನ್ನು ಕಲಿಸಿಕೊಡುವುದನ್ನು ಮಾಡುತ್ತಿದ್ದಾರೆ. ನಾನು ಇವತ್ತು ಸರ್ಕಾರದ ಗಮನ ಸೆಳೆಯುವಂಥಾದ್ದು ಏನೆಂದರೆ ಇದನ್ನು ಇಡೀ ರಾಜ್ಯದಲ್ಲಿ ಮಾಡಬೇಕಾಗಿದೆ. ಏಕೆಂದರೆ ಇವತ್ತು ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಎಂದು ಕೇಳಿದರೆ ಕೇವಲ ಉದ್ಯೋಗ ಹೊಂದಲಿಕ್ಕೋಸ್ಕರ ಮಾತ್ರ ವಿದ್ಯಾಭ್ಯಾಸ ಅಲ್ಲ. ಇವತ್ತು ವಿದ್ಯಾಭ್ಯಾಸ ಮಕ್ಕಳ ಮುಂದಿನ ಭವಿಷ್ಯದಲ್ಲಿ ಅವರ ನಡವಳಿಕೆ ಮತ್ತು ಅವರು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳಾಗಿ ಬೆಳೆಯಬೇಕಾದರೆ ನೈತಿಕ ಶಿಕ್ಷಣವೂ ಸಹ ಬಹಳ ಅವಶ್ಯಕತೆ ಇದೆ. ಅದನ್ನು ಒಂದನೇ ತರಗತಿಯಿಂದ ನಮ್ಮ ಉಡುಪಿ ಜಿಲ್ಲೆಯಲ್ಲಿ ಹೇಗೆ ನಾವು ಮಾದರಿಯಾಗಿ ಮಾಡುತ್ತಿದ್ದೇವೆಯೋ ಹಾಗೆಯೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯು ಮಾಡಬೇಕು. ಉಡುಪಿ ಜಿಲ್ಲೆಯ ಅಧಿಕಾರಿಗಳನ್ನು ಕರೆಸಿ ಅಥವಾ ಬೇರೆ ಬೇರೆ ಸಂಸ್ಥೆಗಳ ಮುಖ್ಯಸ್ಥರನ್ನು ಕರೆಸಿ ಇವತ್ತು ನಮ್ಮ ಜಿಲ್ಲೆಯಲ್ಲಿ ಧರ್ಮಸ್ಥಳದ ಸಂಸ್ಥೆಯವರು ಮಾಡುತ್ತಿರುವ ಹಾಗೆ ಬೇರೆ ಬೇರೆ ಸಂಸ್ಥೆಯವರು ಸಹ ಈ ವ್ಯವಸ್ಥೆಯನ್ನು ಇಡೀ ನಮ್ಮ ರಾಜ್ಯದಲ್ಲಿ ಮಾಡಿದರೆ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಇದರಿಂದ ಬಹಳಷ್ಟು ಪ್ರಯೋಜನ ಆಗಬಹುದು ಎಂದು ನಾನು ನನ್ನ ಒಂದು ಒತ್ತಾಯವನ್ನು ಈ ಸರ್ಕಾರದ ಮುಂದೆ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದಹಾಗೆ, ಈ ಸರ್ಕಾರದ ಹೊಸ ಹೊಸ ನಿಯಮಗಳು ಬರುವುದರಿಂದ ಇವತ್ತು ಬಹಳ ತೊಂದರೆಗಳು ಆಗುತ್ತಿದೆ. ನಮ್ಮ ಮಕ್ಕಳಿಗೆ ಈಗ ಹೊಸದಾಗಿ ತ್ರೈಮಾಸಿಕದ ಒಂದು ಶಿಕ್ಷಣ ಪದ್ಧತಿಯನ್ನು ಮಾಡಿದ್ದಾರೆ. ಇದನ್ನು ಯಾವು ದೃಷ್ಟಿಯಲ್ಲಿ, ಯಾವ ವಿದ್ಯಾರ್ಥಿಗಳ ದೃಷ್ಟಿಯನ್ನಿಟ್ಟುಕೊಂಡು ಮಾಡಿದರೋ ನನಗೆ ಗೊತ್ತಾಗುವುದಿಲ್ಲ. ಇವತ್ತು ಮೂರೇ ತಿಂಗಳಲ್ಲಿ ಪರೀಕ್ಷೆ ನಡೆಸುವ ಬಗ್ಗೆ ಈಗಾಗಲೇ ನಮ್ಮ ಬೇರೆ ಸದಸ್ಯರು ಅದನ್ನು ಪ್ರಸ್ತಾಪ ಮಾಡಿದರು. ಮೂರು ತಿಂಗಳಲ್ಲಿ ಅವರಿಗೆ ಒಂದು ಪರೀಕ್ಷೆ ಎಂದು ಹೇಳಿದರೆ ಇನ್ನೂ ನಮ್ಮಲ್ಲಿ ಎಷ್ಟೋ ಶಾಲೆಗಳಿಗೆ ಪಠ್ಯಪುಸ್ತಕವೇ ಬರಲಿಲ್ಲ. ಅದರಲ್ಲೂ ವಿಶೇಷವಾಗಿ ಅನುದಾನಿತ ಶಾಲೆಗಳಿಗೆ. ಸರ್ಕಾರಿ ಶಾಲೆಗಳಿಗೆ ಮಾತ್ರ ಪಠ್ಯಪುಸ್ತಕಗಳು ಬಂದಿವೆ. ಅನುದಾನಿತ ಶಾಲೆಗಳಿಗೆ ಪಠ್ಯಪುಸ್ತಕಗಳೇ ಬರಲಿಲ್ಲ. ಇನ್ನು ಒಂದು ತಿಂಗಳಲ್ಲಿ ಅವರು ಒಂದು ಇಡೀ ತ್ರೈಮಾಸಿಕ ಪರೀಕ್ಷೆಯನ್ನು ನಡೆಸಬೇಕಾಗಿದೆ. ಇದರಿಂದ ಸರ್ಕಾರ ಮತ್ತೊಂದಷ್ಟು ತೊಂದರೆಯನ್ನು ನಮ್ಮ ವಿದ್ಯಾರ್ಥಿಗಳಿಗೆ ಮಾಡುತ್ತಿದೆ. ಇನ್ನೊಂದು ಬಹಳ ಗಂಭೀರವಾದ ವಿಷಯವೇನೆಂದರೆ ಪ್ರಾಯಶಃ ಇದು ನಮ್ಮ ದೇಶಕ್ಕೆ ಸಂಬಂಧಪಟ್ಟಂತಹ

ಶಿಕ್ಷಣ ಪದ್ಧತಿಯಲ್ಲ. ಇದು ವಿದೇಶಗಳಿಗೆ ಈ ಶಿಕ್ಷಣ ಪದ್ಧತಿ ಅನುಗುಣವಾಗಬಹುದು. ಆದರೆ ನಮ್ಮ ದೇಶಕ್ಕೆ ಇದು ಹೇಳುವಂತಾದ್ದು ಅಲ್ಲ ಎಂಬುದು ನನ್ನ ವಾದವಾಗಿದೆ. ಏಕೆಂದರೆ ನಾನು ಸಣ್ಣವನಿದ್ದಾಗ ನಾನು ಒಂದನೇ ತರಗತಿಯಲ್ಲಿ ಕಲಿಯುತ್ತಿದ್ದಂತಹ ಪದ್ಯಗಳು ಇರಬಹುದು ಅಥವಾ ಯಾವುದಾದರೂ ಪಾಠಗಳ ಬಗ್ಗೆ ಇವತ್ತಿಗೂ ಅದನ್ನು ನಾವು ಏನಾದರೂ ಓದಿದರೆ ಹಿಂದೆ ನಾನು ಕಲಿತಿದ್ದೇನೆ ಎಂದು ಹೇಳುವಂತಾದ್ದು ನೆನಪಾಗುತ್ತದೆ. ಅಂದರೆ ನಾವು ಜೂನ್ ಜುಲೈನಲ್ಲಿ ಕಲಿತಂತಾದ್ದು ನಮಗೆ ಮಾರ್ಚ್‌ಯಲ್ಲಿ ಪರೀಕ್ಷೆ ಎಂದು ಹೇಳುವಾಗ ನಮಗೆ ಅಷ್ಟರವರೆಗೂ ನೆನಪು ಇಟ್ಟುಕೊಳ್ಳಬೇಕು ಎಂದು ಆ ವಿದ್ಯಾರ್ಥಿಗಳಿಗೆ ಭಯ ಇರುತ್ತದೆ. ಅದಕ್ಕೆ ಅವರು ಉರು ಹೊಡೆಯುತ್ತಿದ್ದಾರು. ಅದನ್ನು ಅವರು ಕಲಿಯುತ್ತಿರುತ್ತಾರೆ. ಇದನ್ನು ನೀವು ಮೂರೇ ತಿಂಗಳಲ್ಲಿ ಪರೀಕ್ಷೆ ಮಾಡಿಬಿಟ್ಟರೆ ಅವರು ಮತ್ತೆ ಅದನ್ನು ಮರೆತುಬಿಡುತ್ತಾರೆ. ಇವತ್ತು ಎಲ್ಲಾ ವಿದ್ಯಾರ್ಥಿಗಳಲ್ಲಿ ಇರುವಂತಾದ್ದು ಸಹಜ ಗುಣ ಏನು ಎಂದು ಹೇಳಿದರೆ ಪರೀಕ್ಷೆಗೋಸ್ಕರ ಮಾತ್ರ ಅವರು ಓದುವಂತಾದ್ದು, ಇವತ್ತು ಮೂರು ತಿಂಗಳಲ್ಲಿ ಪರೀಕ್ಷೆ ಮುಗಿಯಿತು ಎಂದು ಹೇಳಿದರೆ ಒಂದು ವರ್ಷ ಇಡೀ ಅವರು ಅದನ್ನು ನೆನಪು ಇಟ್ಟುಕೊಳ್ಳುವುದಿಲ್ಲ. ಇನ್ನು ಅವರು ಒಂದನೇ ತರಗತಿಯಲ್ಲಿ ಎರಡನೇ ತರಗತಿಯಲ್ಲಿ ಏನು ಕಲಿತಿದ್ದಾರೆ ಅದನ್ನು ಐದು ವರ್ಷಗಳಾದ ಮೇಲೆ ಕೇಳಿದರೆ ಅವರಿಗೆ ಗೊತ್ತಿಲ್ಲವೆಂದು ಹೇಳುವಂಥ ಪರಿಸ್ಥಿತಿ ಇದೆ. ಇವತ್ತು ಏನಾಗಿದೆ ಎಂದು ಹೇಳಿದರೆ ಐ ಎ ಎಸ್ ಆಫೀಸರ್‌ಗಳು ಯಾರಾದರೂ ವಿದೇಶದಲ್ಲಿ ಅಧ್ಯಯನ ಮಾಡಿಕೊಂಡು ಬಂದವರು ವಿದೇಶದಲ್ಲಿ ಓದಿ ಬಂದವರು ಇವತ್ತು ಈ ಒಂದು ಶಿಕ್ಷಣ ಪದ್ಧತಿಯನ್ನು ನಮ್ಮ ದೇಶದಲ್ಲಿ ನಮ್ಮ ವಿದ್ಯಾರ್ಥಿಗಳ ಮೇಲೆ ಹೇರುತ್ತಿದ್ದಾರೆ. ಇದರಿಂದ ನಮ್ಮ ವಿದ್ಯಾರ್ಥಿಗಳಿಗೆ ಎಷ್ಟು ತೊಂದರೆ ಇದೆ ಎನ್ನುವುದನ್ನು ಅವರು ಆಲೋಚನೆ ಮಾಡುತ್ತಿಲ್ಲ. ಕನಿಷ್ಟ ಪಕ್ಷ ಇವತ್ತು ಈ ಯೋಜನೆ ಬಂದಿರುವುದರಿಂದ ಸೆಮಿಸ್ಟರ್ ಯೋಜನೆಯಾದರೂ ತೊಂದರೆ ಇಲ್ಲ. ನನ್ನ ಒಂದು ವಾದ ಏನಿದೆ ಅಂದರೆ ಇದನ್ನು ಹಿಂದೆ ಇದ್ದ ಹಾಗೆ ಸೆಮಿಸ್ಟರ್ ಪದ್ಧತಿಯನ್ನಾದರೂ ಮಾಡಿದರೆ ನಮ್ಮ ವಿದ್ಯಾರ್ಥಿಗಳಿಗೆ ಕೇವಲ ಶಿಕ್ಷಣ ಎಂದು ಹೇಳಿದರೆ ಪಾಸಾಗಲಿಕ್ಕೆ ಮಾತ್ರ ಶಿಕ್ಷಣವಲ್ಲ, ನಾವು ಸಾಮಾಜಿಕವಾಗಿ ಅವರ ಮನಸ್ಸನ್ನು ತೊಡಗಿಸುವಂತಾದ್ದು, ಅವರಿಗೆ ನೆನಪಿನಶಕ್ತಿಯನ್ನು ಹೆಚ್ಚಿಸುವಂತಾದ್ದು, ನಮ್ಮ ಮಕ್ಕಳಿಗೆ ಇದನ್ನು ಕಲಿಸುವಂಥಾದ್ದು ಶಿಕ್ಷಣದಲ್ಲಿ ಬಹಳ ಪ್ರಾಮುಖ್ಯವಾದಂತಾದ್ದು ಆಗಬೇಕು. ಆದ್ದರಿಂದ ಈ ತ್ರೈಮಾಸಿಕ ಶಿಕ್ಷಣ ಪದ್ಧತಿಯನ್ನು ನಮ್ಮ ವಿದ್ಯಾರ್ಥಿಗಳಿಗೆ ಗುಣಮಟ್ಟ ಬಹಳಷ್ಟು ಕಡಿಮೆಯಾಗುತ್ತದೆ ಎಂದು ಹೇಳುವಂಥಾದ್ದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಇವತ್ತು ಇನ್ನೊಂದು ಹೊಸದಾಗಿ ಸುತ್ತೋಲೆಯನ್ನು ಕಳುಹಿಸುತ್ತಿದ್ದಾರೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ, ಹತ್ತನೇ ತರಗತಿಯ ಪರೀಕ್ಷೆಯವರೆಗೆ

60/40 ಮಾನದಂಡದ ಮೇಲೆ ಪರೀಕ್ಷೆಯನ್ನು ನಡೆಸುವುದು ಎಂದು ಹೇಳುವಂತಾದ್ದು, ಇದರಲ್ಲಿ ಶೇಕಡ 60 ಭಾಗ ಮೂರು ನಾಲ್ಕು ಪ್ರಶ್ನೆಗಳು ಇರುತ್ತದೆಯಲ್ಲ ಅದರಲ್ಲಿ ಒಂದನ್ನು ಆಯ್ಕೆ ಮಾಡಬೇಕು ಎಂದು ಹೇಳುವಂಥಾದ್ದು, ಅಥವಾ ಹಿಂದೆಯೆಲ್ಲಾ Fill up the blanks ಎಂದು ಹೇಳುವಂತಹ ಪ್ರಶ್ನೆಗಳು ಇತ್ತು. ಇವತ್ತು ಹೊಸದಾಗಿ ಅವರಿಂದ ಬಂದಂತಹ ಆದೇಶದ ಪ್ರಕಾರ ಅದರಲ್ಲಿ ಶೇಕಡ 60ರ ಮಾರ್ಕಗಳಿಗೆ, ಒಂದು ವಿಷಯವನ್ನು ಕೊಡುತ್ತಾರೆ ಅದಕ್ಕೆ ಎ,ಬಿ,ಸಿ,ಡಿ ಎಂದು ಹಾಕುತ್ತಾರೆ; ಇದರಲ್ಲಿ ಸರಿ ಉತ್ತರ ಯಾವುದು ಎಂದು ಟಿಕ್ ಮಾಡಿ ಎಂದು ಹೇಳುತ್ತಾರೆ. ಇದರಲ್ಲಿ ಏನು ಎಂದು ಹೇಳಿದರೆ ನಮ್ಮ ಮಕ್ಕಳಿಗೆ ಅವರ ವಿದ್ಯಾಭ್ಯಾಸದ ನೆನಪಿನ ಶಕ್ತಿಯನ್ನು ಕಡಿಮೆ ಮಾಡುವಂತಾದ್ದು ಆಗಿದೆ. ಏಕೆಂದರೆ ಈ ಅಮಿತಾಬಚನ್‌ರವರ ಕೌನ್ ಬನೇಗಾ ಕರೋಡಪತಿ ಎಂದು ಏನು ದೂರದರ್ಶನ ಕಾರ್ಯಕ್ರಮ ಬರುತ್ತಿತ್ತು; ಅದರಲ್ಲಿ ಈ ನಾಲ್ಕರಲ್ಲಿ ಯಾವುದನ್ನಾದರೂ ಗುರುತಿಸಿ ಎಂದು ಹೇಳುತ್ತಿದ್ದರು. ಅದು ಸಾಧ್ಯವಾಗದಿದ್ದರೆ ಯಾರನ್ನಾದರೂ ಅಲ್ಲಿದ್ದಂತಹ ಪ್ರೇಕ್ಷರನ್ನು ಕೇಳುವುದು, ಅದು ಸರಿಯಾಗಲಿಲ್ಲವೆಂದರೆ ಫೋನ್ ಮಾಡಿ ಕೇಳುವಂತಾದ್ದು, ಈ ರೀತಿಯ ಶಿಕ್ಷಣವನ್ನು ಏನಾದರೂ ಸರ್ಕಾರ ತರುತ್ತದೆಯೇ ಎನ್ನುವಂತಹ ಭಯ ಶುರುವಾಗಿದೆ. ಏಕೆಂದರೆ ವಿದ್ಯಾರ್ಥಿಗಳಿಗೆ ಅಲ್ಲಿ ಯಾವುದೂ ಗೊತ್ತಾಗಲಿಲ್ಲ ಅಂದರೆ ಫೋನ್ ಮಾಡಿ ಕೇಳುವುದು, ಇವತ್ತು ಎಲ್ಲಾ ವಿದ್ಯಾರ್ಥಿಗಳಿಗೂ ಮೊಬೈಲ್ ಫೋನ್ ಕೊಡುತ್ತಿದ್ದೇವೆ. ಫೋನ್ ಮಾಡಿ ಮನೆಯವರ ಹತ್ತಿರ ಈ ಪ್ರಶ್ನೆಗೆ ಉತ್ತರ ಯಾವುದು ಎಂದು ಕೇಳುವಂತಹ ಪರಿಸ್ಥಿತಿಯನ್ನು ತರುತ್ತಾರೋ ಏನೋ, ಇಂತಹ ಶಿಕ್ಷಣದ ಅವಶ್ಯಕತೆ ನಮಗೆ ಇದೆಯೇ ಎಂದು ನಾವು ಆಲೋಚನೆ ಮಾಡಬೇಕಾಗಿದೆ. ಇದರಿಂದ ನಿಜವಾಗಿಯು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಏಕೆಂದರೆ ನಮ್ಮ ಮಕ್ಕಳಿಗೆ ಸುಲಭವಾಗಿ ಕಲಿಯುವಂತಾದ್ದು ಅಂದರೆ ಅವರು ಹಿಂದೆ ಬೀಳುವಂತಹ ಸಂದರ್ಭದಲ್ಲಿ ಇದು ಯಾವುದಾದರೊಂದನ್ನು ನನ್ನ ನಸೀಬು ಪ್ರಕಾರ ಟಿಕ್ ಮಾಡಿದರೆ ನಡೆಯುತ್ತದೆ ಎಂದು ಹೇಳುವಂತಹ ಒಂದು ಮನೋಭಾವನೆ ಅವರಲ್ಲಿ ಬರುತ್ತದೆ. ಆದ್ದರಿಂದ ಯಾವುದೇ ಕಾರಣಕ್ಕೆ ಮಾನ್ಯ ಅಧ್ಯಕ್ಷರೆ, ಸರ್ಕಾರದಲ್ಲಿ ನನ್ನ ವಿನಂತಿ ಏನೆಂದರೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೊಸದಾಗಿ ಒಂದು ಯಾವ ಪರೀಕ್ಷಾ ಪದ್ಧತಿಯನ್ನು ತರುತ್ತಿದ್ದಾರೆ ಅದನ್ನು ಈ ವರ್ಷ ತರಬಾರದು ವಿಶೇಷವಾಗಿ ಚರ್ಚೆ ಮಾಡಿ ಅದನ್ನು ಅನುಷ್ಠಾನಕ್ಕೆ ತರಬೇಕು. ನಾನು ತಿಳಿದುಕೊಂಡ ಪ್ರಕಾರ ಶಿಕ್ಷಣ ಇಲಾಖೆಯ ಹೆಚ್ಚಿನ ಅಧಿಕಾರಿಗಳು ಮತ್ತು ಶಿಕ್ಷಕರಂತೂ ಇದಕ್ಕೆ ಬಹಳ ವಿರೋಧವಿದ್ದಾರೆ. ಇದರಿಂದ ಏನಾಗುತ್ತದೆಂದರೆ, ಈ ಕಾಪಿ ಮಾಡುವಂತಹ ವಿದ್ಯಾರ್ಥಿಗಳಿಗೆ ಬಹಳ ಪ್ರಯೋಜನವಾಗುತ್ತದೆ. ಕೈ ಸನ್ನೆ ಮಾಡಿಕೊಂಡು ಹೇಳಬಹುದು. ಒಂದನೇ ಪ್ರಶ್ನೆಗೆ ಮೂರನೇಯದೋ ಅಥವಾ ಎರಡನೆಯದೋ ಎಂದು ಹೇಳಿಕೊಂಡು

ಶೇಕಡ 60 ರಷ್ಟು ಅಂಕ ಎಂದು ಹೇಳಿದರೆ ಕಾಪಿ ಮಾಡುವಂತಹ ವಿದ್ಯಾರ್ಥಿಗಳಿಗೆ ನಾವು ಪ್ರಚೋದನೆ ಕೊಟ್ಟ ಹಾಗೆ ಆಗುತ್ತದೆ. ಯಾವುದೇ ಕಾರಣಕ್ಕೆ ಇದನ್ನು ಮಾಡಬಾರದು, ಹಿಂದೆ ಇದ್ದಂತಹ ಪದ್ಧತಿಯನ್ನೇ ಮಾಡಬೇಕು. ಇವತ್ತು ಇಲ್ಲಿ ಯಾರೋ ಅಧಿಕಾರಿಗಳು ಕುಳಿತುಕೊಂಡು ಮಾಡಿರುವುದರಿಂದ ನಮಗೆ ಬಹಳ ತೊಂದರೆಯಾಗುತ್ತದೆ. ಅದರಲ್ಲೂ ವಿಶೇಷವಾಗಿ ನಮ್ಮ ಉಡುಪಿ ಜಿಲ್ಲೆ ಶಿಕ್ಷಣದಲ್ಲಿ ಪಿಯುಸಿಯಲ್ಲಿ ಇರಬಹುದು ಅಥವಾ ಎಸ್‌ಎಸ್‌ಎಲ್‌ಸಿ ಯಲ್ಲಿ ಇರಬಹುದು ಪ್ರಥಮ ಸ್ಥಾನವನ್ನು ಪಡೆದಂತಹ ಜಿಲ್ಲೆಯಾಗಿದೆ. ನಮ್ಮ ವಿದ್ಯಾರ್ಥಿಗಳು ನಿಜವಾಗಿಯೂ ಬಹಳ ಕಷ್ಟಪಟ್ಟು ಕಲಿಯುವಂತಹವರು, ಅವರು ನಮ್ಮ ಜಿಲ್ಲೆಯಲ್ಲಿ ಕಾಪಿ ಮಾಡುವಂತಹ....

ಶ್ರೀ ಅರಗ ಜ್ಞಾನೇಂದ್ರ :– ಮಾನ್ಯ ಅಧ್ಯಕ್ಷರೇ, ಶಿಕ್ಷಣ ಮಂತ್ರಿಗಳೇ ಇಲ್ಲ. ಏಕೆಂದರೆ ಶಿಕ್ಷಣದ ಮೇಲೆ ಚೆನ್ನಾಗಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು :– ಈ ವಿಷಯವನ್ನು ಆಗಲೇ ಎತ್ತಿದ್ದಾರೆ. ನಾನು ಸಚಿವರನ್ನು ಕರೆಯುವುದಕ್ಕೆ ಕಳುಹಿಸಿದ್ದೇನೆ. ನೀವು ಕುಳಿತುಕೊಳ್ಳಿ. ಬೇಗ ಮುಗಿಸಿ.

ಶ್ರೀ ಕೆ. ರಘುಪತಿ ಭಟ್ :– ಮಾನ್ಯ ಅಧ್ಯಕ್ಷರೇ ಸರ್ವಶಿಕ್ಷಣ ಅಭಿಯಾನದಲ್ಲಿ ಇವತ್ತು ಶಾಲೆಗಳಿಗೆ ಕೊಠಡಿಗಳನ್ನು ಕೊಡುತ್ತಿದ್ದಾರೆ. ಇದು ಸ್ವಾಗತಾರ್ಹವಾಗಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ಸರ್ಕಾರಿ ಶಾಲೆಗಳಿಗೆ ಸಿಗುವಂತಾದ್ದು ಆಗಿದೆ. ಆದರೆ ಅನುದಾನಿತ ಶಾಲೆಗಳಿಗೆ ಕೊನೆಯ ಪಕ್ಷ ಇವತ್ತು ಅದನ್ನು ವಿಸ್ತರಣೆ ಮಾಡಬೇಕು. ಅನುದಾನಿತ ಶಾಲೆಗಳಿಗೆ ಸರ್ವ ಶಿಕ್ಷಣ ಅಭಿಯಾನವನ್ನು ವಿಸ್ತರಣೆ ಮಾಡಬೇಕು. ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಅಲ್ಲಿಯು ಸಹ ಅನುಷ್ಠಾನಕ್ಕೆ ತರಬೇಕು. ಮತ್ತು ಹೆಚ್ಚಿನ ಕಡೆಗಳಲ್ಲಿ ಇವತ್ತು ಕೊಠಡಿಗಳು ಇಲ್ಲ. ಇವತ್ತು ಕೆಲವು ಕಡೆ ಏನಿದೆ ಎಂದು ಹೇಳಿದರೆ, ನಗರ ಪ್ರದೇಶಗಳಲ್ಲಿ ಹೇಗಿದೆ ಎಂದು ಹೇಳಿದರೆ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚುವಂತಹ ಪರಿಸ್ಥಿತಿ ಇದೆ. ಅಲ್ಲಿ ಶಾಲೆಗಳಿಗೆ ಮಕ್ಕಳೇ ಬರುತ್ತಿಲ್ಲ. ಇನ್ನು ಗ್ರಾಮಾಂತರ ಪ್ರದೇಶಕ್ಕೆ ಹೋದರೆ ಅಲ್ಲಿ ಮಕ್ಕಳು ಬರುತ್ತಿದ್ದರೂ ಅಲ್ಲಿ ಕನ್ನಡ ಮಾಧ್ಯಮ ಶಾಲೆಗಳಿಗೆ ಬೇಕಾದಂತಹ ವ್ಯವಸ್ಥೆ ಇಲ್ಲ. ಆದ್ದರಿಂದ ಕೊಠಡಿಗಳನ್ನು ಹೆಚ್ಚಿಸಲಿಕ್ಕೆ, ಸರ್ವಶಿಕ್ಷಣ ಅಭಿಯಾನದ ಜೊತೆಗೆ ಸರ್ಕಾರವೂ ವಿಶೇಷವಾದಂತಹ ಕಾರ್ಯಕ್ರಮವನ್ನು ಮಾಡಬೇಕು. ಅನುದಾನಿತ ಶಾಲೆಗಳಿಗೂ ಇದನ್ನು ವಿಸ್ತರಿಸುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎನ್ನುವಂತಹ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇನ್ನು ನಮ್ಮ ಬಹಳ ದೊಡ್ಡ ಸಮಸ್ಯೆ ಅಂದರೆ ನಮ್ಮ ಉಡುಪಿ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಿಂದ ಡಿಡಿಪಿಐ ಇಲ್ಲ. ಉಪ ನಿರ್ದೇಶಕರನ್ನು ನಮ್ಮಲ್ಲಿ

ನೇಮಕ ಮಾಡಿಲ್ಲ. ಮಾನ್ಯ ಅಧ್ಯಕ್ಷರೇ, ನಾವು ಮಾನ್ಯ ಸಚಿವರ ಹತ್ತಿರ ಬಹಳಷ್ಟು ಸಲ ಕೇಳಿಕೊಂಡೆವು. ಯಾರಾದರೂ ಒಬ್ಬರನ್ನು ಹಾಕಿ ನಮಗೆ ಅವರು ಇವರು ಎಂದು ಅಲ್ಲ. ಯಾರೋ ಒಬ್ಬರು ಒಳ್ಳೆಯ ಶಿಕ್ಷಣ ತಜ್ಞರನ್ನು ಡಿಡಿಪಿಐ ಆಗಿ ಮಾಡಿಕೊಡಿ ಎಂದು ಕೇಳಿದೆವು. ಇವತ್ತು ನಮ್ಮಲ್ಲಿ ಪ್ರಭಾರ ಡಿಡಿಪಿಐ ಅವರನ್ನು ನೇಮಿಸಿದ್ದಾರೆ ಅವರು 1994ನೇ ಇಸವಿಯಲ್ಲಿ ಬಿಇಒ ಪೋಸ್ಟನ್ನು ಹೊಂದಿದವರು. ಅವರಿಗಿಂತ ಜಾಸ್ತಿ ಸೇವಾ ಅರ್ಹತೆ ಇರುವವರು ಇದ್ದಾರೆ. 1984ನೇ ಬ್ಯಾಚ್‌ನವರಿಗೆ ಇವತ್ತು ಪ್ರಭಾರವನ್ನು ಕೊಡಲಿಲ್ಲ. 1994ನೇ ಬ್ಯಾಚ್‌ನವರಿಗೆ ಕೊಟ್ಟಿದ್ದಾರೆ, ಅಂದರೆ ರಾಜಕೀಯ ಪ್ರಭಾವವನ್ನು ಬೆಳೆಸಿಕೊಂಡು ಇವತ್ತು ಡಿಡಿಪಿಐ ಆದವರು ಇವತ್ತು ಅಲ್ಲಿ ಏನು ವರ್ಗಾವಣೆ ಸಂದರ್ಭದಲ್ಲಿ ದಂಧೆ ನಡೆಯುತ್ತಿದೆ. ನಮಗೆ ನಮ್ಮಂತಹ ಉಡುಪಿಯಂತಹ ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆಯ ವರ್ಗಾವಣೆಯಲ್ಲಿ ದಂಧೆ ಆಗುತ್ತಿದೆ ಎಂದು ಹೇಳುವಂಥಾದ್ದು ಪ್ರಾಯಶಃ ನಮ್ಮ ಜಿಲ್ಲೆಯ ಎಲ್ಲಾ ಶಾಸಕರಿಗೂ ಗೊತ್ತಿದೆ. ನಾವು ಕಣ್ಣು ಮುಚ್ಚಿ ಕುಳಿತುಕೊಳ್ಳುವಂತಹ ಪರಿಸ್ಥಿತಿಯಾಗಿದೆ. ನಾವು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ. ಪಿಯುಸಿಯಲ್ಲಿ ಇರಬಹುದು, ಎಸ್.ಎಸ್.ಎಲ್.ಸಿ ಯಲ್ಲಿ ಇರಬಹುದು, ಎರಡು ವರ್ಷದಿಂದ ನಮ್ಮ ಜಿಲ್ಲೆ ಪ್ರಥಮ ಬರುತ್ತಿದೆ. ನಮಗೊಬ್ಬರು ಡಿಡಿಪಿಐ ಅನ್ನು ನೇಮಕ ಮಾಡಿಕೊಡುವುದಕ್ಕೆ ಈ ಸರ್ಕಾರದ ಕೈಯಲ್ಲಿ ಆಗಲಿಲ್ಲ. ಇದು ಯಾವ ಪರಿಸ್ಥಿತಿ ಇದೆ ಅಂದರೆ ಇಲ್ಲಿ ಅವರಿಗೆ ಬೇಕಾದಂತಹ ರಾಜಕೀಯ ಪ್ರಭಾವವನ್ನು ಬೆಳೆಸಿಕೊಂಡು 1994ನೇಯ ಇಸವಿಯ ಬಿ.ಇ.ಒ. ಇವತ್ತು ಡಿ.ಡಿ.ಪಿ.ಐ ಆಗಿ ಮುಂದುವರಿಯುತ್ತಿದ್ದಾರೆ ಎಂದು ಹೇಳಿದರೆ ಇವತ್ತು ಸರ್ಕಾರ ಶಿಕ್ಷಣಕ್ಕೆ ಯಾವ ತರಹದ ಒತ್ತನ್ನು ಕೊಡುತ್ತಿದೆ ಎಂಬುದನ್ನು ನಾವು ಭಾವಿಸಬಹುದು. ಮಾನ್ಯ ಅಧ್ಯಕ್ಷರೇ, ಇನ್ನೊಂದು, ಉನ್ನತ ಶಿಕ್ಷಣ ಸಚಿವರು ಇವತ್ತು ಇರಬೇಕಾಗಿತ್ತು, ಬಹಳ ಒಂದು ದೊಡ್ಡ ಸಮಸ್ಯೆ ಬಡ ವಿದ್ಯಾರ್ಥಿಗಳಿಗೆ ಆಗುತ್ತಿದೆ. ಇದು ನನ್ನ ದೌರ್ಭಾಗ್ಯ ಎಂದು ಭಾವಿಸುತ್ತೇನೆ. ನಾನು ಮಾತನಾಡುವಂತಹ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಚಿವರು ಇಲ್ಲ. ಇಲ್ಲಿ ಇದ್ದಂತಹ ಅಧಿಕಾರಿಗಳಾದರೂ ಇದನ್ನು ಗಮನಿಸಬೇಕು. ನಾನು ಬಹಳಷ್ಟು ಬಾರಿ ಅಧಿಕಾರಿಗಳ ಹತ್ತಿರ ಹೋಗಿ ಮಾತನಾಡಿದಾಗ ಹಣಕಾಸು ಇಲಾಖೆಯಲ್ಲಿದೆ ಎಂದು ಹೇಳುತ್ತಾರೆ. ಎಫ್‌ಡಿಯಲ್ಲಿ ಸ್ಯಾಂಕ್ಷನ್ ಕೊಡುತ್ತಿಲ್ಲ ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೇ ಇವತ್ತು ಸರ್ಕಾರಿ ಕಾಲೇಜುಗಳಲ್ಲಿ ಕಂಪ್ಯೂಟರ್ ಬಿ ಎಸ್ಸಿ ಸೈನ್ಸ್ ಇದೆ. ಅದಕ್ಕೆ ಮಕ್ಕಳನ್ನು ಸೇರಿಸಬೇಕಾದರೆ ಪ್ರತಿ ವರ್ಷ ಯೂಸರ್ಸ್ ಫೀ, ಡೊನೇಷನ್ ಎಂದು ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕು, ಒಮ್ಮೆ ಮೂರು ಸಾವಿರ ರೂಪಾಯಿಗಳನ್ನು ತೆಗೆದುಕೊಂಡರೆ ತೊಂದರೆ ಇಲ್ಲ; ಪ್ರತಿ ವರ್ಷ ಮೂರು ಸಾವಿರ ರೂಪಾಯಿಗಳ ಡೊನೇಷನ್ ಕೊಡಬೇಕೆಂದರೆ, ಒಬ್ಬ ಬಡವಿದ್ಯಾರ್ಥಿ ಏತಕ್ಕೆ ಸರ್ಕಾರಿ ಕಾಲೇಜಿಗೆ ಬರುತ್ತಾನೆ?

ಸರ್ಕಾರಿ ಕಾಲೇಜಿನಲ್ಲಿ ಕಂಪ್ಯೂಟರ್ ವ್ಯವಸ್ಥೆ ಇಲ್ಲ. ಲ್ಯಾಬ್ ಇಲ್ಲ. ಆದರೂ ಪ್ರತಿ ವರ್ಷ ಮೂರು ಸಾವಿರ ರೂಪಾಯಿಗಳ ಡೊನೇಷನ್ (ಫೀ ಬಿಟ್ಟು) ತೆಗೆದುಕೊಳ್ಳುತ್ತಿದ್ದಾರೆ. ನಮ್ಮಲ್ಲಿ ಮಹಿಳಾ ಪ್ರಥಮದರ್ಜೆ ಕಾಲೇಜಿದೆ. ಪ್ರಥಮ ವರ್ಷ ವಿದ್ಯಾರ್ಥಿಗಳು ಮೂರು ಸಾವಿರ ರೂ.ಗಳನ್ನು ಕೊಟ್ಟರು, ಅವರಿಗೆ ಪ್ರತಿ ವರ್ಷ ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಗೊತ್ತಿಲ್ಲ, ಎರಡನೇ ವರ್ಷವೂ ಕೊಡಬೇಕೆಂದು ನನ್ನ ಹತ್ತಿರ ಬಂದರು, ಏಕೆಂದರೆ ನಾನು ಶಾಸಕ; ನಮ್ಮನ್ನು ಕಾಲೇಜು ಅಭಿವೃದ್ಧಿ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ನಾವು ಈ ವರ್ಷವೂ ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕೆನ್ನುವುದಾದರೆ ನಾವು ನಮ್ಮ ಶಿಕ್ಷಣವನ್ನೇ ಮುಂದುವರೆಸುವುದಿಲ್ಲ ಎಂದು ಅವರು ಹೇಳುತ್ತಾರೆ. ನಾವು, ಒಂದು ಬಿಎಸ್ಸಿ ಕಂಪ್ಯೂಟರ್ ಸೈನ್ಸ್ ಕಲಿಯಬೇಕೆಂದರೆ ಪ್ರತಿ ವರ್ಷ ಮೂರು ಸಾವಿರ ರೂಪಾಯಿಗಳನ್ನು ಡೊನೇಷನ್ ಕೊಡಬೇಕೆಂದಾದರೆ ನಮ್ಮಿಂದ ಸಾಧ್ಯವಿಲ್ಲ. ಫೀ ಕಟ್ಟಲು ಅಡ್ಡಿ ಇಲ್ಲ ಎಂದು ಹೇಳಿದರು. ನಾನು ರಿಸ್ಕ್ ತೆಗೆದುಕೊಂಡು ಪ್ರಾಂಶುಪಾಲರಿಗೆ ಪತ್ರ ಬರೆದು ನೀವು ಯಾವುದನ್ನೂ ತೆಗೆದುಕೊಳ್ಳಬೇಡಿ, ಸರ್ಕಾರದ ಮೇಲೆ ನಾವು ಒತ್ತಾಯ ಮಾಡುತ್ತೇವೆ ಎಂದು ತಿಳಿಸಿದೆ. ಮಹಿಳೆಯರಿಗೆ ಅಷ್ಟೆ, ಎಸ್‌ಸಿ:ಎಸ್‌ಟಿ ಯವರು ಕೊಡಬೇಕು. ಅಂದರೆ ಕಂಪ್ಯೂಟರ್ ಸೈನ್ಸ್ ಅನ್ನು ಬಡ ವಿದ್ಯಾರ್ಥಿಗಳು ಕಲಿಯಬಾರದೆಂದು ಸರ್ಕಾರ ನಿರ್ಧಾರ ಮಾಡಿದಂತಾಗಿದೆ. ಶ್ರೀಮಂತರಿಗೆ ಮಾತ್ರ ಇದನ್ನು ಮೀಸಲಿಟ್ಟಂತೆ ಕಾಣುತ್ತಿದೆ. ತಕ್ಷಣ ಈ ವರ್ಷ ಸರ್ಕಾರ ಇದನ್ನು ಕೈ ಬಿಡಬೇಕಾಗುತ್ತದೆ. ಇಲ್ಲವೆಂದರೆ ವಿದ್ಯಾರ್ಥಿಗಳಿಗೆ ನ್ಯಾಯ ಸಿಗುವುದಕ್ಕೆ ಸಾಧ್ಯವಿಲ್ಲ.

ಇನ್ನು ಪ್ರಥಮದರ್ಜೆ ಕಾಲೇಜಿಗೆ ಸಂಬಂಧಿಸಿದಂತೆ ಇನ್ನೊಂದು ವಿಷಯ, ಕಳೆದ ವರ್ಷ ಕಾಲೇಜ್‌ಗಳಿಗೆ ಕಟ್ಟಡಗಳನ್ನು ಸರ್ವ ಶಿಕ್ಷಣ ಅಭಿಯಾನದಲ್ಲಿ ಮಾಡಿದ್ದಾರೆ, ನನ್ನ ಕ್ಷೇತ್ರದಲ್ಲಿ ಮಹಿಳಾ ಪ್ರಥಮದರ್ಜೆ ಕಾಲೇಜಿಗೆ ಒಂದು ಕೋಟಿ ಇಪ್ಪತ್ತೆಂಟು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಕಟ್ಟಡ ನಿರ್ಮಾಣವಾಗಿದೆ. ನಾನು ಶಾಸಕನಾಗಿ ಅಲ್ಲಿಗೆ ಹೋದಾಗ, ಹೊಸ ಕಟ್ಟಡ ಉದ್ಘಾಟನೆ ಆಮೇಲೆ ಆದದ್ದು, ಇಡೀ ಕಟ್ಟಡ ಸೋರುತ್ತಿದೆ. ಅನಂತರ ನನ್ನನ್ನು ಕೆಲವು ಪತ್ರಕರ್ತರು ಈ ಕಟ್ಟಡಕ್ಕೆ ಒಂದು ಕೋಟಿ ಇಪ್ಪತ್ತೆಂಟು ಲಕ್ಷ ರೂಪಾಯಿಗಳ ವೆಚ್ಚವಾಗಲಿಕ್ಕೆ ಸಾಧ್ಯವಿಲ್ಲವೆಂದು ಕೇಳಿದರು. ಆ ನಂತರ ನಾನು ಪಿಡಬ್ಲ್ಯುಡಿ ಇಲಾಖೆ ಇಂಜಿನಿಯರಗಳ ಮುಖಾಂತರ ಎಷ್ಟಾಗುತ್ತದೆಂದು ಎಸ್ಟಿಮೇಟ್ ಮಾಡಿಸಿದೆ. ಆಗ ಅವರು, ಇವರ ಎಸ್ಟಿಮೇಟ್ ಪ್ರಕಾರ ಇದ್ದ ಹಾಗೆ ಇದ್ದರೆ 70–75 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ವೆಚ್ಚವಾಗಿರಲಿಕ್ಕೆ ಸಾಧ್ಯವಿಲ್ಲವೆಂದರು. ಆದರೂ ಸರ್ಕಾರ ಒಂದು ಕೋಟಿ ಇಪ್ಪತ್ತೆಂಟು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಪ್ರಥಮದರ್ಜೆ ಕಾಲೇಜನ್ನು ಕಟ್ಟಿಸಿಕೊಟ್ಟಿದೆ. ಇದರಲ್ಲಿ ಬಹಳ ದೊಡ್ಡ ಅವ್ಯವಹಾರವಾಗಿದೆ. ಇಡೀ

ರಾಜ್ಯದಲ್ಲಿ ಬಹಳಷ್ಟು ಅವ್ಯವಹಾರವಾಗಿದೆ ಎಂದು ನಾನು ಕೇಳಿದ್ದೇನೆ. ಇದರ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ಕೇಳಿದಾಗ ಈಗ ಆಗುವುದು ಆಗಿದೆ ಎಂದರು. ಒಂದು ಕೋಟಿ ಇಪ್ಪತ್ತೆಂಟು ಲಕ್ಷ ರೂಪಾಯಿಗಳ ಕಟ್ಟಡವನ್ನು ಕಟ್ಟಿಕೊಟ್ಟಿದ್ದಾರೆ. ಅಲ್ಲಿ ಪ್ರಾಂಶುಪಾಲರಿಗೆ ಕುಳಿತುಕೊಳ್ಳಲು ಒಂದು ಕುರ್ಚಿ ಇಲ್ಲ, ಒಂದೇ ಒಂದು ಫರ್ನಿಚರ್ ಇಲ್ಲ, ಬೆಂಚ್ ಇಲ್ಲ, ಕುರ್ಚಿ ಇಲ್ಲ, ನಾವು ಯಾರ್ಯಾರೊ ಹತ್ತಿರ ಕಾಡಿಬೇಡಿ ಇವತ್ತು ಫರ್ನಿಚರ್ಸ್ ತರುವಂತಹ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಸಚಿವರು ಆ ಗುತ್ತಿಗೆದಾರರಿಂದ 5 ಲಕ್ಷ ರೂಪಾಯಿಗಳ ಫರ್ನಿಚರ್ಸ್ ಕೊಡಿಸುತ್ತೇನೆ ಎಂದು ಹೇಳಿದರು. ಇವತ್ತು ಈ ರೀತಿ ಆಗಬಾರದು, ಬರೀ ಖಾಲಿ ಕಟ್ಟಡವನ್ನು ಕಟ್ಟಿಕೊಡುವುದಿಲ್ಲ, ಕಾಲೇಜ್ ಅನ್ನು ಪ್ರಾರಂಭಿಸಿದ ಮೇಲೆ ಫರ್ನಿಚರ್ಸ್ ಇರಬಹುದು, ಲ್ಯಾಬ್ ಇರಬಹುದು ಇದನ್ನೆಲ್ಲಾ ಕೊಡಬೇಕು. ನಮ್ಮ ಉಡುಪಿ ಜಿಲ್ಲೆಯಲ್ಲಿ ಶಿಕ್ಷಣಕೋಸ್ಕರ ಕೊಡುವ ದಾನಿಗಳಿರುವುದರಿಂದ, ಬೇರೆ ಬೇರೆಯವರಿಂದ ನಾವು ಕಂಪ್ಯೂಟರ್ ಲ್ಯಾಬ್ ಬೇರೆ ಬೇರೆ ಲ್ಯಾಬ್‌ಗಳಿಗೆ ಫರ್ನಿಚರ್ಸ್ ಅನ್ನು ತರಿಸುತ್ತಿದ್ದೇವೆ. ಆದರೆ ಇಂತಹ ವ್ಯವಸ್ಥೆ ಆಗಬಾರದು, ಇಂತಹ ಅವ್ಯವಹಾರಗಳಾಗದಂತೆ ನೋಡಿಕೊಳ್ಳಬೇಕು, ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ಬಹಳಷ್ಟು ವಿಷಯವಿದ್ದರೂ ಸಮಯ ಅವಕಾಶವಿಲ್ಲದಿರುವುದರಿಂದ ತಾವು ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(x) ಶ್ರೀ ಬಿ. ನಾಗರಾಜ ಶೆಟ್ಟಿ (ಬಂಟ್ವಾಳ) :– ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಈಗಾಗಲೇ ನನ್ನ ಮಿತ್ರರು ಹೇಳಿದಂತೆ, ಸನ್ಮಾನ್ಯ ಕೃಷಿಮಂತ್ರಿಗಳಿದ್ದಾರೆ, ಕಾರ್ಮಿಕ ಮಂತ್ರಿಗಳಿದ್ದಾರೆ, ಸಂತೋಷ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಹಿಂದೆಯೂ ಕೂಡ ನಾವು ಮಾತನಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೀರಿ, ನಮ್ಮ ಕಷ್ಟಗಳನ್ನು ಹೇಳಿದ್ದೇವೆ, ಬೇರೆ ಬೇರೆ ವಿಚಾರದಲ್ಲಿ ಸ್ಪಂದಿಸಿದ್ದೇವೆ. ಆದರೆ, ಏನೂ ಕಾರ್ಯಗತವಾಗಿಲ್ಲ, ಆ ದೃಷ್ಟಿಯಿಂದ ನಾವು ಸಣ್ಣಪುಟ್ಟ ವಿಚಾರಗಳನ್ನು ಮಂಡನೆ ಮಾಡಿದರೆ, ಅದು ಕಾರ್ಯಗತವಾಗಬೇಕು, ಒಬ್ಬ ಶಾಸಕನಾಗಿ ನಮ್ಮ ಕರ್ತವ್ಯ ಎನ್ನುವ ದೃಷ್ಟಿಯಿಂದ ನಮ್ಮ ಅನಿಸಿಕೆಗಳನ್ನು ಮಂಡಿಸುತ್ತಿದ್ದೇವೆ. ಪ್ರಮುಖವಾಗಿ ಕೃಷಿ ಇಲಾಖೆಯ ಬಗ್ಗೆ ಈಗಾಗಲೇ ಅನೇಕ ಹಿರಿಯರು ಬಹಳಷ್ಟು ವಿಚಾರಗಳನ್ನು ಮಾತನಾಡಿದ್ದಾರೆ. ನಮ್ಮ ಸನ್ಮಾನ್ಯ ವಿಶ್ವೇಶ್ವರ ಹೆಗಡೆಯವರು, ಆಧುನಿಕ ಅಡ್ವಾನ್ಸ್ ಟೆಕ್ನಾಲಜಿಯ ಬಗ್ಗೆ ರೈತರಿಗೆ ಯಾವ ರೀತಿಯ ಮಾಹಿತಿಯನ್ನು ಕೊಡಬೇಕು, ರೈತ ಯಾವ ಬೆಳೆಯನ್ನು ಬೆಳೆಯಬೇಕು, ಯಾವುದನ್ನು ಬೆಳೆದರೆ ಆತ ಬದುಕಬಹುದು

(x) ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಶೀಲಿಸಲ್ಪಟ್ಟಿದೆ.

ಎನ್ನುವ ವಿಚಾರವನ್ನು ಸರ್ಕಾರ ಕೂಡಲೇ ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕು, ಆ ರೈತರಿಗೆ ಮಾಹಿತಿಯನ್ನು ಕೊಡಬೇಕು ಎನ್ನುವ ಬಗ್ಗೆ ಬಹಳಷ್ಟು ವಿಚಾರಗಳನ್ನು ಮಾತನಾಡಿದ್ದಾರೆ. ಆ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುತ್ತಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಈಗಾಗಲೇ ಸಾಕಷ್ಟು ಹೇಳುತ್ತಾ ಬರುತ್ತಿದ್ದೇವೆ, ಅದೇನೆಂದರೆ ರೈತರು ಭಾರತದ ಬೆನ್ನೆಲುಬು ಎಂದು. ಅವರು ಬೆಳೆಯುವ ಆರ್ಥಿಕ ಬೆಳೆಗಳಲ್ಲಿ ಕೆಲವಾರು ಕೃಷಿ ಆರ್ಥಿಕ ಬೆಳೆಗಳ ಬಗ್ಗೆ ಹೇಳುವುದಾದರೆ ಪ್ರಮುಖವಾಗಿ ಅಡಿಕೆ. ಸುಮಾರು ಎರಡು ಲಕ್ಷಕ್ಕಿಂತ ಹೆಚ್ಚು ರೈತರು ಅಡಿಕೆಯನ್ನು ಬೆಳೆಸುತ್ತಿದ್ದಾರೆ. ಸುಮಾರು ನಾಲ್ಕುವರೆ ಲಕ್ಷ ಟನ್ ಅಡಿಕೆ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿದೆ. ಈಗಾಗಲೇ ತಮ್ಮ ಮಾಹಿತಿಗೆ ಬಂದಿದೆ. ದಿನನಿತ್ಯ ಬೆಲೆ ಕುಸಿಯುತ್ತಿದೆ; ಸುಮಾರು 50–55 ರೂಪಾಯಿಗಳು ಒಂದು ಕೆ.ಜಿ. ಬಿಳಿ ಅಡಿಕೆಗೆ ಬೆಲೆ ಇದೆ. ಸುಮಾರು ಮೂರು ವರ್ಷಗಳ ಹಿಂದೆ ಡಾ॥ ಬಿಸ್ಲಯ್ಯನವರ ನೇತೃತ್ವದ ಸಮಿತಿಯ ಪ್ರಕಾರ ಒಂದು ಕೆ.ಜಿ. ಅಡಿಕೆಯನ್ನು ಬೆಳೆಯ ಬೇಕಾದರೆ ಸುಮಾರು 65 ರೂಪಾಯಿಗಳ ಖರ್ಚಿದೆ ಎಂದು ಅವರು ವರದಿಯನ್ನು ಕೊಟ್ಟಿದ್ದಾರೆ. ಇವತ್ತು ಕೆ.ಜಿ. ಅಡಿಕೆಗೆ 50–55 ರೂಪಾಯಿಗಳ ಬೆಲೆ ಇರುವಾಗ ರೈತ ಬಹಳಷ್ಟು ಕೊರಗುತ್ತಿದ್ದಾನೆ, ನಷ್ಟದಲ್ಲಿ ಅಡಿಕೆಯನ್ನು ಮಾರುತ್ತಿದ್ದಾನೆ. ನಮ್ಮ ಎಲ್ಲಾ ಹಿರಿಯ ನೇತಾರರ ಮುಖೇನ ಹೋದಾಗ ಸನ್ಮಾನ್ಯ ಮುಖ್ಯಮಂತ್ರಿಗಳು, ಅಡಿಕೆಗೆ ಬೆಂಬಲ ಬೆಲೆಯನ್ನು ಕೊಡುತ್ತೇವೆಂದು ಒಪ್ಪಿ, ಕೃಷಿ ಮಂತ್ರಿಗಳು ಕೂಡ ಸಾಕಷ್ಟು ಶ್ರಮಿಸಿ 10 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ವಾಗ್ದಾನ ಮಾಡಿದ್ದರು. ಅದರಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ಕ್ಯಾಮ್ಕೋ ಸಂಸ್ಥೆಯ ಮುಖೇನ ಕೊಟ್ಟಿದ್ದಾರೆ. ಆ ನಾಲ್ಕು ಕೋಟಿ ರೂ.ಗಳ ಹಣದಲ್ಲಿ ಸುಮಾರು 28774.50 ಕೆ.ಜಿ. ಕೆಂಪು ಅಡಿಕೆಯನ್ನು ಖರೀದಿಸಲಾಗಿದೆ, ಬಿಳಿ ಅಡಿಕೆ 5898.70 ಕೆ.ಜಿ. ಖರೀದಿಯಾಗಿದೆ. ಇದರಿಂದ ಎರಡು ಸಾವಿರದ ಹತ್ತೊಂಬತ್ತು ಮಂದಿ ರೈತರಿಗೆ ಸಹಾಯವಾಗಿದೆ. ಈ ಖರೀದಿ ಮಾಡುವುದರಲ್ಲೂ ಕೂಡ ಸಂಬಂಧಪಟ್ಟ ತೋಟಗಾರಿಕೆ ಹಾಗೂ ಕೃಷಿ ಇಲಾಖೆಗಳ ಸಿಬ್ಬಂದಿಗಳ ಮಧ್ಯದಲ್ಲಿಯೇ ಕ್ವಾಲಿಟಿ ಅನ್ಯಾಲಿಸಿಸ್ ಮಾಡಿ ಖರೀದಿ ಮಾಡುತ್ತಿದೆ. ಈ ವ್ಯವಸ್ಥೆಯಲ್ಲಿ ಸರ್ಕಾರಕ್ಕೇನೂ ನಷ್ಟವಿಲ್ಲ, ಹಿಂದೆ ಕೂಡ MIS ಸ್ಕೀಂ ಆಗಿರಬಹುದು ಅಥವಾ MSP ಸ್ಕೀಂ ಆಗಿರಬಹುದು, ಅದರಲ್ಲಿ ಸರ್ಕಾರಕ್ಕೇನೂ ನಷ್ಟವಾಗಿಲ್ಲ. ಒಂದು ರೀತಿ ನಷ್ಟವಾಗಿದ್ದರೆ ಅದು ಸೇಲ್ಸ್ ಟ್ಯಾಕ್ಸ್ ಮುಖಾಂತರ ಆದಾಯ ಬಂದು ಸರ್ಕಾರದ ಬೊಕ್ಕಸಕ್ಕೇನೂ ನಷ್ಟವಾಗಿಲ್ಲ. ಸರ್ಕಾರಕ್ಕೆ ನನ್ನ ಒಂದು ವಿನಂತಿ ಏನೆಂದರೆ, ಸನ್ಮಾನ್ಯ ಕೃಷಿ ಮಂತ್ರಿಗಳು ಇಲ್ಲೇ ಇದ್ದಾರೆ, ಉಳಿದ 6 ಕೋಟಿ ರೂಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು, ಅದನ್ನು ಬಿಡುಗಡೆ ಮಾಡಿದರೆ ಅಡಿಕೆ ಬೆಲೆ ಒಂದು ಮಟ್ಟಕ್ಕೆ ಹೋಗುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಆ

ಬಡ ರೈತರು ಇವತ್ತು ಬಹಳ ಕಂಗಾಲಾಗಿದ್ದಾರೆ, ಬೀದಿಗಿಳಿಯುತ್ತಿದ್ದಾರೆ, ಅವರ ಪರಿಸ್ಥಿತಿ ಬಹಳ ಕಷ್ಟದಲ್ಲಿದೆ. ಆ ನಿಟ್ಟಿನಲ್ಲಿ ಸರ್ಕಾರ ಸ್ಪಂದಿಸಬೇಕೆಂದು ಅಡಿಕೆ ಬೆಳೆಗಾರರ ಪರವಾಗಿ ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರಮುಖವಾದ ಅಡಿಕೆ ಬೆಳೆಯ ಜೊತೆಗೆ ಕೊಕೊ ಬೆಳೆಯನ್ನು ಬೆಳೆಸುತ್ತಿದ್ದೇವೆ, ಅನೇಕ ಕಡೆ ಕೊಕೊ ಬೆಳೆಸುವಂತಹ ವ್ಯವಸ್ಥೆ ಈಗ ಜೋರಾಗಿದೆ. ಏಕೆಂದರೆ ನಮ್ಮ ದೇಶದಲ್ಲಿ 15 ಸಾವಿರ ಟನ್ ಕೊಕೊ ಬೇಕಾದರೆ ವರ್ಷಕ್ಕೆ ಈಗ ನಾವು ಬೆಳೆಯುವುದು ಸುಮಾರು 7 ಸಾವಿರ ಟನ್ ಮಾತ್ರ. ಉಳಿದದ್ದು ಆಮದಾಗುತ್ತಿದೆ. ಈ ಬಗ್ಗೆ ತೋಟಗಾರಿಕೆ ಮಂತ್ರಿಗಳು ಬೇಕಾದ ವ್ಯವಸ್ಥೆಯನ್ನು ಮಾಡಿದರೆ, ಆ 15 ಸಾವಿರ ಟನ್ ಕೊಕೊ ಅನ್ನು ಕೂಡ ನಮ್ಮ ದೇಶದಲ್ಲೇ ಬೆಳೆಸಬಹುದು. ಆದರೆ ನಮ್ಮ ಕರ್ನಾಟಕ ಸರ್ಕಾರದ ಈ ವರ್ಷದ ಬಜೆಟಿನಲ್ಲಿ, ಇಲ್ಲಿಯವರೆಗೆ ಅದಕ್ಕೆ ಟ್ಯಾಕ್ಸ್ ಇರಲಿಲ್ಲ, ಸಹಕಾರಿ ಕ್ಷೇತ್ರದ ಮೂಲಕ ಖರೀದಿ ಮಾಡಿದರೆ ಅದಕ್ಕೆ ಟ್ಯಾಕ್ಸ್ (VAT) ಹಾಕಿದ್ದಾರೆ. ಒಂದು ಕಡೆ ಕೃಷಿಕರಿಗೆ ಆದ್ಯತೆ ಕೊಡಬೇಕೆಂದು ಬಹಳಷ್ಟು ಮಾತನಾಡುತ್ತೇವೆ, ಭಾಷಣ ಮಾಡುತ್ತೇವೆ, ಇನ್ನೊಂದು ಕಡೆಯಿಂದ ಕೃಷಿ ಬೆಳೆಗಾರರನ್ನು ನಾಶ ಮಾಡುತ್ತಿದ್ದೇವೆ. ಆ ದೃಷ್ಟಿಯಿಂದ ಇವತ್ತೇನು ಆ ನಾಲ್ಕು ಪರ್ಸೆಂಟ್ ಟ್ಯಾಕ್ಸ್ (VAT) ಹಾಕಿದ್ದಾರೆ ಅದನ್ನು ಹಿಂದಕ್ಕೆ ಪಡೆಯಬೇಕು. ಅಷ್ಟೇ ಅಲ್ಲದೆ, ಸರ್ಕಾರದ ಮಟ್ಟದಲ್ಲಿ ಇನ್ನಷ್ಟು ಕೊಕೊ ಬೆಳೆ ಬೆಳೆಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಈಗ ಶೇಕಡ 60ರಷ್ಟು ಕೊಕೊ ಹೊರದೇಶದಿಂದ ನಮ್ಮ ದೇಶಕ್ಕೆ ಬರುತ್ತಿದೆ, ಆಫ್ರಿಕಾ ಇರಬಹುದು, ಇಂಡೋನೇಷಿಯ ಇರಬಹುದು, ಮಲೇಷಿಯ ಇರಬಹುದು. ಆ ದೃಷ್ಟಿಯಿಂದ ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಪ್ರಮುಖವಾದ ವಿಚಾರ ಗೋಡಂಬಿ, ಕ್ಯಾಶೂನಟ್ ಎಂದು ನಾವು ಕರೆಯುತ್ತಿದ್ದೇವೆ, ಈ ಗೋಡಂಬಿ ಬೆಳೆ ಬಗ್ಗೆ ನಮ್ಮ ತೋಟಗಾರಿಕೆ ಮಂತ್ರಿಗಳು ಸಾಕಷ್ಟು ಶ್ರಮವಹಿಸುತ್ತಿದ್ದಾರೆ. ಇವತ್ತು ಸಂಪೂರ್ಣವಾಗಿ ವಿಚಾರವನ್ನು ವಿಮರ್ಶೆ ಮಾಡುವಾಗ ನಮ್ಮ ದೇಶದಲ್ಲಿ ಸುಮಾರು 5 ಲಕ್ಷ ಮೆಟ್ರಿಕ್ ಟನ್ ಗೋಡಂಬಿ ಉತ್ಪಾದನೆಯಾಗುತ್ತಿದೆ. 5.75 ಲಕ್ಷ ಟನ್ ಗೋಡಂಬಿಯನ್ನು ಆಫ್ರಿಕಾ ಇರಬಹುದು, ಅಥವಾ ಇನ್ನಿತರ ಫಾರೆ ಈಸ್ಟ್ ಕಂಟ್ರಿಯಿಂದ ಆಮದು ಮಾಡುತ್ತಿದ್ದೇವೆ. ಅರ್ಧಕ್ಕಿಂತ ಹೆಚ್ಚು ಸುಮಾರು 60 ಪರ್ಸೆಂಟ್ ನಾವು ಹೊರದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಬಹಳ ಪ್ರಮುಖವಾದ ವಿಚಾರ, ಕರ್ನಾಟಕ ರಾಜ್ಯ ಹಾಗೂ ಕೇರಳ ರಾಜ್ಯ ಇಡೀ ದೇಶದಲ್ಲೇ ಈ ಗೋಡಂಬಿ ಬೆಳೆಗೆ ಹೆಸರುವಾಸಿಯಾದ ರಾಜ್ಯಗಳು. ಇವತ್ತು ನಾವು ಹೊಸ ಹೊಸ ಗಿಡಗಳನ್ನು ಕೊಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಸುಮಾರು 1.10 ಲಕ್ಷ ಟನ್ ಗೋಡಂಬಿ ಸಂಸ್ಕರಣ ಘಟಕ ಸಾಮರ್ಥ್ಯ ಇದೆ. ನಮ್ಮ ರಾಜ್ಯದಲ್ಲಿ ಬೆಳೆಯುವ ಗೋಡಂಬಿ ಬರೀ 35 ಸಾವಿರ

ಟನ್. ಉಳಿದ 70 ಪರ್ಸೆಂಟ್ ಗೋಡಂಬಿಯನ್ನು ಪರರಾಜ್ಯಗಳಿಂದ ಪರದೇಶಗಳಿಂದ ನಾವು ತರಿಸುತ್ತಿದ್ದೇವೆ. ಈ ಪರಿಸ್ಥಿತಿ ನಮ್ಮದು. ಆ ದೃಷ್ಟಿಯಿಂದ ಇವತ್ತೇನು ಗೋಡಂಬಿ ಬೆಳೆಯಲು ಸಾಕಷ್ಟು ಮುತುವರ್ಜಿ ವಹಿಸಿದ್ದಾರೆ, ಅದು ಸಾಕಾಗುತ್ತಿಲ್ಲ. ಅದರಲ್ಲಿ ಇನ್ನೂ ಹೆಚ್ಚಿನ ಹಣ ತೊಡಗಿಸಬೇಕು. ಗೋಡಂಬಿ ಬೆಳೆಸಲು ನಮ್ಮ ರಾಜ್ಯದಲ್ಲಿ ವಿಶೇಷವಾದ ಕಾರ್ಯಕ್ರಮ ಹಾಕಬೇಕು ಎಂದು ಅಧ್ಯಕ್ಷರೆ, ತಮ್ಮ ಮುಖೇನ ಸರ್ಕಾರಕ್ಕೆ ಹೇಳಲು ಇಚ್ಛೆಪಡುತ್ತಿದ್ದೇನೆ. ಇನ್ನೊಂದು ಮಹತ್ತರವಾದ ವಿಚಾರ; ಬೇರೆ ಎಲ್ಲಾ ರಾಜ್ಯಗಳಲ್ಲೂ ಗೋಡಂಬಿಗೆ 4 ಪರ್ಸೆಂಟ್‌ಗಿಂತ ಹೆಚ್ಚು ಟ್ಯಾಕ್ಸಿಲ್ಲ. (VAT) ನಮ್ಮ ರಾಜ್ಯದಲ್ಲಿ 4 ಪರ್ಸೆಂಟ್ ಬಿಟ್ಟು ಪುನಃ ಹನ್ನೆರಡೂವರೆ ಪರ್ಸೆಂಟ್ ವ್ಯಾಲ್ಯೂ ಆಡೆಡ್ ಆದಾಗ 18 1/2 ಪರ್ಸೆಂಟ್ ಟ್ಯಾಕ್ಸಾಗುತ್ತದೆ. ಇಡೀ ದೇಶದಲ್ಲಿ ಎಲ್ಲೂ ಇಲ್ಲ. ಈ ಬಗ್ಗೆ ಕಳೆದ ಬಾರಿ ಬಜೆಟ್ ಅಧಿವೇಶನದಲ್ಲಿ ಕೂಡ ನಾನು ಮಾತನಾಡಿದಾಗ ನೋಡೋಣವೆಂದು ಹೇಳಿದ್ದರು, ಏನೂ ಆಗಿಲ್ಲ. ಒಂದು ಕಡೆಯಿಂದ ಹೇಳುತ್ತೇವೆ, ನಾವು ರೈತರ ಮಕ್ಕಳು; ಕೃಷಿಗೆ ಸಹಕಾರ ಮಾಡುತ್ತಿದ್ದೇವೆ, ಇನ್ನೊಂದೆಡೆ ಸಾಕಷ್ಟು ಟ್ಯಾಕ್ಸ್ ಹಾಕಿ ಇಡೀ ಕೃಷಿ ಆಧಾರಿತ ಉದ್ಯಮವನ್ನೇ ಮುಗಿಸುವ ವ್ಯವಸ್ಥೆ ಮಾಡುತ್ತಿದ್ದೇವೆ. ತಮಗೆ ಗೊತ್ತಿರಬಹುದು ಅಧ್ಯಕ್ಷರೇ, ವಿಶೇಷವಾಗಿ ಕರಾವಳಿ ಪ್ರದೇಶದಲ್ಲಿ ಎರಡು ಪ್ರಮುಖ ಉದ್ದಿಮೆಗಳು ಅಂದರೆ, ಬೀಡಿ ಮತ್ತು ಗೋಡಂಬಿ ಕಾರ್ಖಾನೆಗಳು. ಬಹಳಷ್ಟು ಮಂದಿ ಮಹಿಳೆಯರು ಹೆಣ್ಣು ಮಕ್ಕಳಿಗೆ ಕೆಲಸ ಕೊಡುವಂತಹ ವ್ಯವಸ್ಥೆ ಇದು. ಇದರಲ್ಲಿ ಎರಡು ವಿಚಾರಗಳು ಇವೆ. ಒಂದು ರೈತರಿಗೆ ಸಹಾಯವಾಗುತ್ತದೆ; ಎರಡನೆಯದು, ನಮ್ಮ ಹೆಣ್ಣುಮಕ್ಕಳಿಗೆ ಕೆಲಸ ಸಿಗುತ್ತದೆ. ಇವತ್ತು ಈ ಮನೆಯ ಸದಸ್ಯರಿಗೇ ಒಬ್ಬರಿಗೆ ಕೆಲಸ ಕೊಡಿಸುವ ವ್ಯವಸ್ಥೆ ಇಲ್ಲ, ನಿರುದ್ಯೋಗ ಜಾಸ್ತಿ ಆಗುತ್ತಿದೆ. ಇವತ್ತು ಈ ಉದ್ದಿಮೆಗಳಿಗೆ ಮೆಕ್ಯಾನೈಸ್ಡ್ ಆಪರೇಶನ್ ಆಗುತ್ತಿಲ್ಲ, ನೂರಕ್ಕೆ ನೂರು ಜನರಿಂದಲೇ ಆಗಬೇಕಾಗುತ್ತದೆ. ಆ ದೃಷ್ಟಿಯಿಂದ ಗೋಡಂಬಿ ಕಾರ್ಖಾನೆಗಳಿಗೆ ಉತ್ತೇಜನ ಮಾಡಲು ನಮ್ಮ ರಾಜ್ಯದಲ್ಲಿ ಆದಷ್ಟೂ ಗೋಡಂಬಿ ಗಿಡಗಳನ್ನು ಬೆಳೆಸಲು ಸರ್ಕಾರ ಸ್ಪಂದಿಸಬೇಕು. ಕೂಡಲೇ ಈ 18 1/2 ಪರ್ಸೆಂಟಿರುವ (VAT) ಟ್ಯಾಕ್ಸನ್ನು ಕಡಿಮೆ ಮಾಡಲು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಮೂರನೆಯದು ಕಾರ್ಮಿಕ ಇಲಾಖೆ ಬಗ್ಗೆ ಪ್ರಮುಖ ವಿಚಾರಗಳ ಬಗ್ಗೆ ಮಾನ್ಯ ಹಿರಿಯ ಸದಸ್ಯರನೇಕರು ಮಾತನಾಡಿದ್ದಾರೆ. ನಾನು ಹೆಚ್ಚು ಮಾತನಾಡಲು ಹೋಗುತ್ತಿಲ್ಲ. . ನಮ್ಮಲ್ಲಿ ಲಕ್ಷಾಂತರ ಬೀಡಿ ಕಾರ್ಮಿಕರು ಕರಾವಳಿ ಜಿಲ್ಲೆಗಳಲ್ಲಿ ಇವತ್ತು ಬಹಳ ಕಷ್ಟದಲ್ಲಿದ್ದಾರೆ. ವಾರದಲ್ಲಿ 5, 6 ದಿವಸ ಕೆಲಸ ಮಾಡುತ್ತಿದ್ದವರು ಇವತ್ತು ಒಂದು ಎರಡು ದಿವಸದ ಕೆಲಸಕ್ಕೆ ಬಂದಿದ್ದಾರೆ. ಅದಕ್ಕೋಸ್ಕರ ನಾನು ಮಾನ್ಯ ಮಂತ್ರಿಯವರಿಗೆ ಕರಾವಳಿಯ ಫಿನಂತಿ ಮಾಡುತ್ತೇನೆ : 1998-99ರಲ್ಲಿ ಆದ ಅಗ್ರಿಮೆಂಟ್

ಇವತ್ತು 2005ರವರೆಗೆ ಆಗಿಲ್ಲ. ಕೂಡಲೇ ಆ ಅಗ್ರಿಮೆಂಟ್ ಮಾಡಿಸಬೇಕು. ಅಗ್ರಿಮೆಂಟ್ ಮಾಡಿದರೆ ಆ ಬಡ ಮಹಿಳೆಯರಿಗೆ, ಬೀಡಿ ಕಾರ್ಮಿಕರಿಗೆ ಎರಡು ವರ್ಷದ 1.25 ರೂ.ವ್ಯತ್ಯಾಸದ ಹಣ ಸಿಗುತ್ತದೆ. ಅದಕ್ಕೋಸ್ಕರ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆ ಬೀಡಿ ಕಾರ್ಖಾನೆಗಳ ಮಾಲೀಕರು ಮತ್ತು ಯೂನಿಯನ್ ನಡುವೆ ತಾವು ಮುತುವರ್ಜಿ ವಹಿಸಿ ಆ ಅಗ್ರಿಮೆಂಟನ್ನು ಕೂಡಲೇ ಮಾಡಿಸಬೇಕು. ಇದನ್ನು ಮಾಡಿದರೆ ನಮ್ಮ ಜಿಲ್ಲೆಗಳಲ್ಲಿ ಬಹಳಷ್ಟು ಜನರಿಗೆ ಕೆಲಸ ಸಿಗುತ್ತದೆ. ಎಲ್ಲಿಯವರೆಗೆ ಅಂದರೆ ಬೀಡಿ ಕಾರ್ಖಾನೆಗಳ ಮಾಲೀಕರು ಬೀಡಿ ಕಟ್ಟಲು ನಮ್ಮ ರಾಜ್ಯದಲ್ಲಿ ಖರ್ಚು ಜಾಸ್ತಿ ಆಗುತ್ತದೆ ಎಂದು ಉತ್ತರ ಭಾರತಕ್ಕೆ ಹೋದರು. ಒರಿಸ್ಸಾ, ಬಿಹಾರ, ಪಶ್ಚಿಮ ಬಂಗಾಳಗಳಿಗೆ ಹೋದರು. ಅಲ್ಲಿ ಬೀಡಿ ಕಟ್ಟುತ್ತಿದ್ದ ವ್ಯವಸ್ಥೆಯನ್ನು ನೋಡಿದಾಗ ಅಲ್ಲಿ ಸರಿಯಾಗಿ ಆಗುತ್ತಿಲ್ಲ. ಅವರಿಗೆ ಅದರ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಅದು ಕರ್ನಾಟಕದ ಕರಾವಳಿ ಪ್ರದೇಶದವರಿಗೆ ಮಾತ್ರ ಮಾಹಿತಿ ಇದೆ ಎಂದುಕೊಂಡು ಕಟ್ಟುತ್ತಿದ್ದ ಬೀಡಿಗಳನ್ನು ಅಲ್ಲಗೇ ನಿಲ್ಲಿಸಿ ಕರ್ನಾಟಕಕ್ಕೇ ವಾಪಸ್ಸು ತರುತ್ತೇವೆ ಹಾಗೂ ನಾವು ಎಲ್ಲಾ ಜಿಲ್ಲೆಗಳ ಬೀಡಿಕಾರ್ಮಿಕರಿಗೆ ಕೆಲಸ ಕೊಡುತ್ತೇವೆ ಎಂಬ ವಿಚಾರವನ್ನು ಕಾರ್ಖಾನೆಗಳ ಮಾಲೀಕರು ಹೇಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಕೂಡಲೇ ಮುತುವರ್ಜಿ ವಹಿಸಿ ಅಗ್ರಿಮೆಂಟ್ ಮಾಡಿಸಬೇಕು. ನಮ್ಮ ಬಡವರಿಗೆ ಹಿಂದುಳಿದ ವರ್ಗದವರಿಗೆ ಅಲ್ಪಸಂಖ್ಯಾತರಿಗೆ ಈ ಬೀಡಿ ಕಟ್ಟುವ ಕೆಲಸ ಕೊಡಿಸುವುದನ್ನು ಕಾರ್ಮಿಕ ಇಲಾಖೆ ಕೂಡಲೇ ಮಾಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಎರಡನೆಯದು, ಈಗಾಗಲೇ ನಮ್ಮ ಹಿರಿಯ ಸದಸ್ಯರು ಇಎಸ್‌ಐ ಆಸ್ಪತ್ರೆಗಳ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ; ನಾನು ಕೂಡ ಬಹಳ ನೋವಿನಿಂದ ಹೇಳುತ್ತಿದ್ದೇನೆ ಅಧ್ಯಕ್ಷರೇ, ಅಲ್ಲಿ ಸರಿಯಾದ ಡಾಕ್ಟರಿಲ್ಲ ಮದ್ದಿಲ್ಲ, ಅಷ್ಟಾಗಿದ್ದರೂ ನಾವು ಮಾತ್ರ ಪ್ರತಿ ಕಾರ್ಖಾನೆಗಳವರನ್ನು ಜೋರಾಗಿ ದಬಾಯಿಸುತ್ತಿದ್ದೇವೆ. ಇಎಸ್‌ಐ ರಿಜಿಸ್ಟ್ರೇಷನ್ ಆಗಬೇಕು, ಇಎಸ್‌ಐ ಕಟ್ ಮಾಡಬೇಕು ಎಂದು ಆದ್ದರಿಂದ ನನ್ನ ಕಳಕಳಿಯ ವಿನಂತಿ ಏನೆಂದರೆ ನಮ್ಮ ಕೈಗಾರಿಕಾ ಸಚಿವರು ಇದ್ದಾರೆ, ಕಾರ್ಮಿಕ ಸಚಿವರೂ ಇದ್ದಾರೆ. ಇಎಸ್‌ಐ ಅನ್ನು ಕೂಡಲೇ ನಿಲ್ಲಿಸಬೇಕು, ಇಎಸ್‌ಐ ಬದಲಾಗಿ ಮೆಡಿಕಲ್ ಇನ್‌ಶೂರನ್ಸ್, ಮೆಡಿಕ್ಲೈಮ್ ಮುಂತಾದ ಅನೇಕ ಯೋಜನೆಗಳಿವೆ. ಆ ಯೋಜನೆಗಳ ಮೂಲಕ ಈ ಬಡವರಿಗೆ ಒಳ್ಳೆಯ ಆಸ್ಪತ್ರೆಯ ವ್ಯವಸ್ಥೆಯಾಗುತ್ತದೆ. ಆ ದಿಕ್ಕಿನಲ್ಲಿ ಚಿಂತನೆ ಆಗಬೇಕು. ಕಾರ್ಮಿಕ ಮತ್ತು ಕೈಗಾರಿಕೆ ಇಲಾಖೆಗಳು ಜೊತೆಯಾಗಿ ಈ ಬಗ್ಗೆ ಚಿಂತನೆ ಮಾಡಿ ಇಎಸ್‌ಐನ್ನು ಕೂಡಲೇ ನಿಲ್ಲಿಸಬೇಕು, ಅದರಿಂದ ನಿಜವಾಗಿಯು ಯಾರಿಗೂ ಪ್ರಯೋಜನವಾಗುತ್ತಿಲ್ಲ. ಇದೊಂದು ದೊಡ್ಡ ಬಿಳಿಯಾನೆ ಎಂದು ಹೇಳಬಯಸುತ್ತಿದ್ದೇನೆ. ಇನ್ನೊಂದು ವಿಚಾರ ; ತಮಗೆ ಈಗಾಗಲೇ ತಿಳಿಸಿದಂತೆ ನಮ್ಮ ಎಪಿಎಂಸಿ ಬಗ್ಗೆ ಮತ್ತು

ಕೃಷಿ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಕೇರಳದಲ್ಲಿ ಬಹಳಷ್ಟು ಕೃಷಿ ಉದ್ದಿಮೆಗಳಿವೆ, ಬೆಳೆಗಾರರೂ ಸಹ ಬಹಳಷ್ಟು ಮಂದಿ ಇದ್ದಾರೆ. ಅಲ್ಲಿ ಯಾವುದೇ ಎಪಿಎಂಸಿ ಅಥವಾ ಮಾರುಕಟ್ಟೆ ಸೆಸ್ ಇಲ್ಲ. ನಮ್ಮ ರಾಜ್ಯದಲ್ಲಿ ಒಂದೂವರೆ ಎರಡೂವರೆ ಪರ್ಸೆಂಟ್ ಸೆಸ್ ಇದೆ, ಅದರಿಂದ ಅವರಿಗೇನೂ (ರೈತರಿಗೆ ಉದ್ಯಮಿಗಳಿಗೆ) ಪ್ರಯೋಜನವಿಲ್ಲ. ಅದನ್ನು ಕೂಡಲೇ ನಿಲ್ಲಿಸಬೇಕು. ಏಕೆಂದರೆ ಬೇಕಾದರೆ ಅದು ಅವರ ಯಾರ್ಡಿಗೆ ಬಂದಾಗ ಚಾರ್ಜ ಮಾಡಲಿ, ಯಾರ್ಡಿನಿಂದ ಹೊರಗಡೆ ಇದ್ದುದಕ್ಕೆ ಚಾರ್ಜ ಮಾಡುವ ಅವಶ್ಯಕತೆ ಇಲ್ಲ. ಯಾವ ಸವಲತ್ತನ್ನೂ ಎಪಿಎಂಸಿ ಕೊಡುತ್ತಾ ಇಲ್ಲ, ವಿಶೇಷವಾಗಿ ಗೋಡಂಬಿಗೆ 2 1/2 ಪರ್ಸೆಂಟ್ ಸೆಸ್ ವಿಧಿಸುತ್ತಿರುವುದು ದುಃಖದ ವಿಚಾರ. ಬಾಕಿ ರಾಜ್ಯಗಳಲ್ಲಿ ಇದು ಇಲ್ಲ. ಆದ್ದರಿಂದ ಅಂತರರಾಷ್ಟ್ರ ಮಾರ್ಕೆಟ್‌ಗೆ ರಫ್ತು ಮಾಡುವಾಗ ರೇಟಿನಲ್ಲಿ ಸ್ಪರ್ಧಿಸಲು ಕರ್ನಾಟಕಕ್ಕೆ ಆಗುತ್ತಾ ಇಲ್ಲ. ಈ ದೃಷ್ಟಿಯಿಂದ APMC ಸೆಸ್‌ರನ್ನು ಕೂಡ ಕೈಬಿಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕೊನೆಯದಾಗಿ ಶಿಕ್ಷಣದ ಬಗ್ಗೆ ಎರಡೇ ಎರಡು ವಿಚಾರಗಳನ್ನು ಹೇಳಲು ಇಷ್ಟಪಡುತ್ತೇನೆ : ಸರ್ಕಾರ ಬಹಳಷ್ಟು ಯೋಜನೆಗಳನ್ನು ಹಾಕಿದೆ. ಆದರೆ ಅವರು ಕಾರ್ಯಗತವಾಗುತ್ತಿಲ್ಲ. ಅದಕ್ಕೇನು ಕಾರಣ ಎಂದು ಗೊತ್ತಿಲ್ಲ, ಈಗಾಗಲೇ ನಡೆದ ಚರ್ಚೆಯಲ್ಲಿ ಅದರ ವಿಷಯ ಬಹಳ ಬಂತು. ಮಂತ್ರಿಗಳು ಒಳ್ಳೆಯವರಿರಬಹುದು. ಆದರೆ ಯಾವುದೂ ಕಾರ್ಯಗತವಾಗುತ್ತಿಲ್ಲ. ಈ ಬಗ್ಗೆ ನಾನು ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಇವತ್ತು ನಮ್ಮ ಶಾಲೆಗಳಲ್ಲಿ ಬಡ ಮಕ್ಕಳಿಗೆ ಹಿಂದುಳಿದ ವರ್ಗದವರಿಗೆ ಅಲ್ಪಸಂಖ್ಯಾತ ಮಕ್ಕಳಿಗೆ ಕಂಪ್ಯೂಟರ್ ಕಲಿಸಬೇಕು ಎಂದು ಹಿಂದಿನ ಸರ್ಕಾರ ಪ್ರೌಢಶಾಲೆ ಮತ್ತಿತರ ಹಳ್ಳಿಶಾಲೆಗಳಲ್ಲಿ; ಮಾಹಿತಿಸಿಂಧು ಎಂಬ ಒಂದು ಯೋಜನೆ ಮಾಡಿತ್ತು. ಆ ಯೋಜನೆಯಡಿಯಲ್ಲಿ ಎಲ್ಲಾ ಶಾಲೆಗಳಲ್ಲೂ 70 ರಿಂದ 80 ಸಾವಿರ ರೂ.ಗಳನ್ನು ಖರ್ಚು ಮಾಡಿ ಅತ್ಯುತ್ತಮ ಕೊಠಡಿಗಳನ್ನು ಕಟ್ಟಿದ್ದಾರೆ. ಆ ಕೊಠಡಿಗಳು ಕಳೆದೆರಡು ವರ್ಷಗಳಿಂದ ಖಾಲಿ ಇವೆ, ಒಂದೇ ಒಂದು ಕಂಪ್ಯೂಟರ್ ಸಿಕ್ಕಿಲ್ಲ. ನಾನು ಈಚೆಗೆ ಅಧಿಕಾರಿಗಳನ್ನು ಕೇಳುವಾಗ ಹೇಳುತ್ತಾರೆ : ಅದು ಹಿಂದಿನ ಸರ್ಕಾರದ ಯೋಜನೆ ಅದರ ಬಗ್ಗೆ ನಮಗೆ ಮಾಹಿತಿ ಇಲ್ಲ ಎಂದು. ನನ್ನ ವಿನಂತಿ ಇಷ್ಟೇ : ಹಿಂದುಳಿದ ವರ್ಗದವರು ಅಲ್ಪಸಂಖ್ಯಾತರು ಬಡ ಮಕ್ಕಳಿಗೆಂದು ಏನು ಕೊಠಡಿಗಳನ್ನು ಕಟ್ಟಿದ್ದೇವೆ ಅವು ಸದುಪಯೋಗವಾಗುತ್ತಿಲ್ಲ. ಇವತ್ತು ನಾವು ಕಂಪ್ಯೂಟರ್ ಯುಗದಲ್ಲಿದ್ದೇವೆ, ಶ್ರೀಮಂತರಿಗೆ ಮಾತ್ರ ಕಂಪ್ಯೂಟರ್ ಕಲಿಯುವುದು ಸುಲಭ, ಬಡ ಮಕ್ಕಳಿಗೆ ಆಗುತ್ತಾ ಇಲ್ಲವೆಂಬ ಭಾವನೆ ಇದೆ. ಆ ದೃಷ್ಟಿಯಿಂದ ಶಿಕ್ಷಣ ಇಲಾಖೆ ಎಲ್ಲಾ ಶಾಲೆಗಳಿಗೆ ಸಾಧ್ಯವಾದಷ್ಟೂ ಕಂಪ್ಯೂಟರ್ ಕೊಡುವ ವ್ಯವಸ್ಥೆ ಮಾಡಬೇಕು. ಕಂಪ್ಯೂಟರ್ ಕೊಠಡಿಗಳು ಸುಮ್ಮನೆ ಹಾಳಾಗುತ್ತಿವೆ. ಅದಕ್ಕೆ ಯಾವುದೇ ಕಾರ್ಯಕ್ರಮ ಇಲ್ಲವೆಂಬ ಭಾವನೆ ಇದೆ.

ಅದಕ್ಕಾಗಿ ಮಾನ್ಯ ಶಿಕ್ಷಣ ಸಚಿವರಿಗೆ ತಮ್ಮ ಮೂಲಕ ಹೇಳಲು ಇಚ್ಛೆಪಡುತ್ತೇನೆ : ಪಠ್ಯಪುಸ್ತಕಗಳ ಬಗ್ಗೆ ಈಗಾಗಲೇ ಹೇಳಿದರು, ಕಳೆದ ವರ್ಷ ಸರ್ಕಾರಿ ಶಾಲೆಗಳಿಗೆ ಪಠ್ಯಪುಸ್ತಕ ಬರಲಿಲ್ಲ. ಈ ಸಲ ಖಾಸಗಿ ಅನುದಾನಿತ ಶಾಲೆಗಳಲ್ಲಿ ಪಠ್ಯಪುಸ್ತಕಗಳಿಲ್ಲ. ಇದ್ದರೆ ಪರಿ ತದ್ವಿರುದ್ಧವಾಗಿದೆ. ಪಠ್ಯಪುಸ್ತಕಗಳ ಬಗ್ಗೆ ಕೂಡ ಸರ್ಕಾರ ಕೂಡಲೇ ಸ್ಪಂದಿಸಬೇಕೆಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :– ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನೇರವಾಗಿ ಕಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ಅಂಶಗಳನ್ನು ಉಲ್ಲೇಖ ಮಾಡಲು ಇಚ್ಛೆಪಡುತ್ತಿದ್ದೇನೆ. ವಿಶೇಷವಾಗಿ ರಾಜ್ಯದಲ್ಲಿ ಸಂಘಟಿತ ಕಾರ್ಮಿಕರ ಸಂಖ್ಯೆ 18, 03, 600 ಇದೆ. ಅಸಂಘಟಿತ ಕಾರ್ಮಿಕರ ಸಂಖ್ಯೆ 1, 65, 85, 412 ಎಂದು ಸರ್ಕಾರಿ ಸೆನ್ಸ್‌ಸ್ ಪ್ರಕಾರ ಗುರ್ತಿಸಲ್ಪಟ್ಟಿದೆ. ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಅವರಿಗೆ ಸೇವಾ ಭದ್ರತೆ, ಸಾಮಾಜಿಕ ಸೌಲಭ್ಯ ಕೊಡುವ ನಿಟ್ಟಿನಲ್ಲಿ ಸಾಮಾಜಿಕ ನ್ಯಾಯ ಒದಗಿಸುವಂತಹ ನಿಟ್ಟಿನಲ್ಲಿ ವಿಶೇಷವಾದ ಕಾನೂನನ್ನು ತರಬೇಕೆಂದು ಈ 12ನೇ ಅಧಿವೇಶನದಲ್ಲಿ ಕೆಲವು ತಿಂಗಳ ಹಿಂದೆ ಚರ್ಚೆ ಮಾಡಿದ್ದೇವೆ, ಒತ್ತಾಯ ಮಾಡಿದ್ದೇವೆ. ಪ್ರತಿ ಸಲ ಸಾರ್ವಜನಿಕ ಸಭೆಗಳಲ್ಲಿ ಕಾರ್ಮಿಕ ಸಚಿವರು ಒಂದು ಆಶ್ವಾಸನೆ ಕೊಡುತ್ತಾರೆಯೇ ವಿನಹ ಯಾವುದೇ ರೀತಿ ಕಾರ್ಯಗತ ಮಾಡಿಲ್ಲ. ಸಂಘಟನೆಯಿಂದ ಒಂದು ವರದಿ ಕೂಡ ಬಂದಿದೆ. ಆದರೂ ಅದು ಕಾರ್ಯರೂಪಕ್ಕೆ ಬಂದಿಲ್ಲ. ಈ ಅಧಿವೇಶನದಲ್ಲೇ ಅದನ್ನು ಮಂಡಿಸಬೇಕು ಎಂದು ವಿನಂತಿ ಮಾಡುತ್ತಿದ್ದೇನೆ. ವಿಶೇಷವಾಗಿ ಟೈಲರ್ಸ್ ಸಂಘ ಇರಬಹುದು ಇನ್ನಿತರ ಅಸಂಘಟಿತ ಕಾರ್ಮಿಕರ ಕುರಿತು ಈ ಮಾತು ಹೇಳುತ್ತಿದ್ದೇನೆ. ವಿಶೇಷವಾಗಿ ಆಟೋರಿಕ್ಷಾ ಟೆಂಪೋ ಡ್ರೈವರ್‌ಗಳದ್ದು, ಅವರಿಗೆ ಅಪಘಾತವಾದಾಗ 50 ಸಾವಿರ ರೂ.ಗಳ ಪರಿಹಾರ ಕೊಡುವಂಥ ಕಾರ್ಯಕ್ರಮ ಇದೆ; ಅದನ್ನು ಒಂದು ಲಕ್ಷಕ್ಕೆ ಏರಿಸಬೇಕೆಂಬ ವಿಷಯವನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಅದೇ ರೀತಿ ಸಹಕಾರ ಕ್ಷೇತ್ರದ ಯಶಸ್ವಿನಿ ಆರೋಗ್ಯ ಸ್ಕೀಂ ಏನಿದೆ ಅದು ಸ್ವಾವಲಂಬಿ ಜೀವನ ನಡೆಸುತ್ತಿರುವ ಆಟೋರಿಕ್ಷಾ ಟೆಂಪೋ ಡ್ರೈವರ್‌ಗಳಿಗೆ ಅನ್ವಯಿಸುವಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ರಾಜ್ಯದಲ್ಲಿ 2, 61, 227 ಬೀಡಿ ಕಾರ್ಮಿಕರಿದ್ದಾರೆಂದು ಗುರುತಿಸಿದ್ದಾರೆ. ಆದರೆ ನನ್ನ ಅನಿಸಿಕೆ ಪ್ರಕಾರ ನಾಲ್ಕು ಲಕ್ಷಕ್ಕಿಂತ ಹೆಚ್ಚಿನ ಬೀಡಿ ಕಾರ್ಮಿಕರಿದ್ದಾರೆ. ಬೀಡಿ ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ ಈಗಾಗಲೇ ನನ್ನ ಮಿತ್ರರು ಹೇಳಿದ್ದಾರೆ. ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಅದರಲ್ಲಿ ಅಳವಡಿಸಿಲ್ಲ. ಬೀಡಿ ಉದ್ಯಮವನ್ನು ಇಲ್ಲಿಂದ ಸ್ಥಳಾಂತರವಾಗದ ರೀತಿಯಲ್ಲಿ ಅದನ್ನು

ನಿಲ್ಲಿಸುವಂಥದ್ದು, ಅದನ್ನು ಉಳಿಸುವಂಥ ನಿಟ್ಟಿನಲ್ಲಿ ಕೂಡ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು. ಹಾಗೂ ಬೀಡಿ ಕಾರ್ಮಿಕರ ಕಲ್ಯಾಣಕ್ಕೋಸ್ಕರ ಇರುವಂಥ ಯೋಜನೆಗಳನ್ನು ಪ್ರಕಟ ಮಾಡಬೇಕೆಂದು ಹೇಳುವಂಥ ವಿನಂತಿಯನ್ನು ಮಾಡುತ್ತಿದ್ದೇನೆ. ಮತ್ತೆ ವಿಶೇಷವಾಗಿ ನಾವು ಎದುರಿಸುತ್ತಿರುವಂಥ ಇನ್ನೊಂದು ಸಮಸ್ಯೆ ಪರ್ಯಾಯವಾಗಿ ಬೀಡಿ ಉದ್ಯಮಕ್ಕೆ ಸಂಬಂಧಪಟ್ಟದ್ದು ಎಲ್ಲಿಯಾದರೂ ಅದು ನಶಿಸುತ್ತಿದ್ದರೆ, ಅದು ಕಡಿತಗೊಳ್ಳುತ್ತಿದ್ದರೆ ಅದಕ್ಕೆ ಅದಕ್ಕೆ ಪರ್ಯಾಯವಾಗಿರುವಂಥ ಉದ್ಯೋಗವನ್ನು ಹುಡುಕುವಂಥದ್ದು ಅಥವಾ ಅದಕ್ಕೆ ಒದಗಿಸುವಂಥ ಜವಾಬ್ದಾರಿ ಕೂಡ ಸರ್ಕಾರಕ್ಕೆ ಇದೆ. ವಿಶೇಷವಾಗಿ ಬಟ್ಟೆ ಉದ್ಯಮಕ್ಕೆ ಸಂಬಂಧಪಟ್ಟಿರುವಂಥ ಈ ನಿಟ್ಟಿನಲ್ಲಿ ಸಿದ್ಧ ಉಡುಪುಗಳನ್ನು ಮಾಡುವಂಥ ಘಟಕಗಳನ್ನು ಕೂಡ ನಮ್ಮ ಜಿಲ್ಲೆಗೆ ಕೊಡಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ಮತ್ತೆ ವಿಶೇಷವಾಗಿ ನಮ್ಮ ಮಂಗಳೂರು ಕ್ಷೇತ್ರದಲ್ಲಿರುವಂಥ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂಥ ಎಂಸಿಎಫ್ ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ರಾಜ್ಯದ ಮುಖ್ಯಮಂತ್ರಿಗಳು, ಕಾರ್ಮಿಕ ಸಚಿವರು ಕೂಡ ಇದರಲ್ಲಿ ಪ್ರವೇಶವಾಗಿದ್ದರೂ ಕೂಡ ಇವತ್ತಿಗೂ ಕೂಡ ಅದಕ್ಕೆ ಪರಿಹಾರವನ್ನು ಕೊಡಲಿಕ್ಕೆ ಆಗದೇ ಇರುವಂಥ ಒಂದು ದುರಂತವನ್ನು ನಾವು ನೋಡುತ್ತಿದ್ದೇನೆ. ಇಷ್ಟು ಮಹನೀಯರುಗಳು ಇದರಲ್ಲಿ ಪ್ರವೇಶ ಮಾಡಿಕೊಂಡು ನ್ಯಾಯ ಕೊಡಿಸುತ್ತೇವೆಂದು ಹೇಳಿದರೂ ಕೂಡ ಆ ನ್ಯಾಯವನ್ನು ಕೊಡಿಸಲು ಸಾಧ್ಯವಾಗಿಲ್ಲ. ಒಮ್ಮತಕ್ಕೆ ಬರಲು ಇಲಾಖೆ ಪ್ರಯತ್ನಿಸುತ್ತಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇವತ್ತಿಗೂ ಅದು ಬರಲಿಕ್ಕೆ ಸಾಧ್ಯವಾಗಿಲ್ಲ. 154 ಕಾರ್ಮಿಕರ ಹಿತಾಸಕ್ತಿ ಕಾಪಾಡಿಕೊಳ್ಳಬೇಕೆನ್ನುವ ನಿಟ್ಟಿನಲ್ಲಿ ಇದಕ್ಕೆ ಸಂಬಂಧಪಟ್ಟ ಸಮಗ್ರ ದಾಖಲೆಗಳು ನನ್ನ ಹತ್ತಿರ ಇವೆ. ಈಗ ಸಮಯಾವಕಾಶ ಇಲ್ಲ ಅಧ್ಯಕ್ಷರೇ. ಆದ್ದರಿಂದ, ನಾನು ಇದನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೊಡಲಿಕ್ಕೆ ಇಚ್ಛಿಸುತ್ತಿದ್ದೇನೆ. ಇನ್ನೊಂದು ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಮತ್ತು ಇ.ಎಸ್.ಐ ಆಸ್ಪತ್ರೆಗೆ ಸಂಬಂಧಪಟ್ಟ ಹಾಗೆ ನಾನು ಮಾತನಾಡುತ್ತಿದ್ದೇನೆ. ನಮ್ಮಲ್ಲಿ 30 ವೈದ್ಯರುಗಳು ಇರಬೇಕಿತ್ತು. ಮೂರು ಜನರು ಮಾತ್ರ ವೈದ್ಯರಿದ್ದಾರೆ. ಅಲ್ಲಿ ಮಾನ್ಯ ಮಿತ್ರರು ಹೇಳಿದಹಾಗೆ ಇಎಸ್‌ಐ ಆಸ್ಪತ್ರೆಗಳನ್ನು ಬಂದ ಮಾಡಿ ಹೆಲ್ತ್ ಇನ್‌ಷೂರೆನ್ಸ್ ಸ್ಕೀಮನ್ನು ತರುವ ಹಾಗೆ ಕಡ್ಡಾಯ ಮಾಡುವಂಥ ನಿಟ್ಟಿನಲ್ಲಿ ಕೂಡ ಮಸೂದೆಯನ್ನು ತರುವಂಥ ಅವಶ್ಯಕತೆ ಇದೆ. ಹೆಲ್ತ್ ಇನ್‌ಶ್ಯೂರೆನ್ಸ್ ಸ್ಕೀಮ್ ಅವಶ್ಯಕತೆ ಇದೆಯೆಂದು ಹೇಳುವುದಕ್ಕೆ ಇಚ್ಛಿಸುತ್ತಿದ್ದೇನೆ. ಮತ್ತೆ ವಿಶೇಷವಾಗಿ ಇಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರಿದ್ದಾರೆ. ತಾವು ಮೊನ್ನೆ ಎಂ.ಬಿ.ಎ ಗೆ ಸಂಬಂಧಪಟ್ಟ, ಎಂ.ಸಿ.ಎ ಗೆ ಸಂಬಂಧಪಟ್ಟ ಮತ್ತು ಇಲ್ಲಿ ಇರುವ ಪಿ.ಜಿ.ಸಿಇಟಿ ಗೆ ಸಂಬಂಧಪಟ್ಟ ಕಾಲೇಜುಗಳನ್ನು ಉದ್ಘಾಟನೆ ಮಾಡಿದಿರಿ. ಅದರ ನಂತರ ಅನಿವಾರ್ಯವಾಗಿ ಗೊಂದಲಗಳುಂಟಾಯಿತು. ತರುವಾಯ

ಮುಂದುವರಿಸುವ ಒಂದು ಕಾರ್ಯಕ್ರಮವಾಯಿತು. ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಕೇಳುವಂಥದ್ದು, ಎಷ್ಟೊಂದು ಉನ್ನತ ಶಿಕ್ಷಣದಲ್ಲಿರುವ ಅಧಿಕಾರಿಗಳಿದ್ದಾರೆ, ಡೈರೆಕ್ಟರುಗಳಿದ್ದಾರೆ, ಯಾವ ಕಾಲೇಜಿನ ಫಲಿತಾಂಶ ಬಂದಿಲ್ಲ? ಎಲ್ಲಿ ಯಾವಾಗ ಅದನ್ನು ನಡೆಸಬೇಕೆಂದು ಹೇಳುವಂಥ ಕನಿಷ್ಟ ಜ್ಞಾನ ನಿಮ್ಮ ಇಲಾಖೆಯಲ್ಲಿ ಇಲ್ಲದೇ ಇರುವಂಥದ್ದು ಒಂದು ದುರಂತ. ಎಷ್ಟು ವಿದ್ಯಾರ್ಥಿಗಳು ರಾಜ್ಯದ ಮೂಲೆ ಮೂಲೆಯಿಂದ ಬಂದು ಇವತ್ತು ನಿರಾಶರಾಗಿ ಹೋಗಿರುವಂಥದ್ದು, ಇನ್ನೊಂದು ಡೇಟಿಗೆ ಕಾಯುವಂಥ ದುಸ್ಥಿತಿಯನ್ನು ಇನ್ನು ಮುಂದಾದರೂ ತರದ ರೀತಿಯಲ್ಲಿ ತಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವ ವಿನಂತಿಯನ್ನು ಕೂಡ ನಾನು ಮಾಡುತ್ತಿದ್ದೇನೆ. ಮತ್ತೆ ವಿಶೇಷವಾಗಿ ಜಾಬ್ ಓರಿಯೆಂಟಡ್ ಕೋರ್ಸಸ್ ಎಂದು ಹೇಳಿಕೊಂಡು ಇದನ್ನು ಕಂಡಕ್ಟ್ ಮಾಡುತ್ತಿದ್ದಾರೆ. ನಾವು ಪಿಯುಸಿ ತನಕ ವಿದ್ಯಾರ್ಥಿನಿಯರಿಗೆ ಉಚಿತವಾಗಿರುವಂಥ ಶಿಕ್ಷಣ ಕೊಡುವ ಒಂದು ಕಾರ್ಯಪದ್ಧತಿಯನ್ನು ಹಾಕಿಕೊಂಡಿದ್ದೇವೆ. ಆದರೆ ಪಿಯುಸಿ ಸ್ಥಾನಮಾನ ಇರುವಂಥ ಎರಡು ವರ್ಷದ ಕೋರ್ಸ್ ಯಾವುದು ಇದೆ, ಜಾಬ್ ಓರಿಯೆಂಟೆಡ್ ಕೋರ್ಸ್‌ನಲ್ಲಿ ವೃತ್ತಿಪರ ಶಿಕ್ಷಣ ಕೊಡುವಂಥ ಕೋರ್ಸ್‌ಗಳಲ್ಲಿ ಶಿಕ್ಷಣ ಕೊಡುತ್ತಿರುವ ಯಾರು ಅಧ್ಯಾಪಕರಿದ್ದಾರೆ, ಅವರನ್ನು ಇವತ್ತಿಗೂ ರೆಗ್ಯುಲರೈಜ್ ಮಾಡಿಲ್ಲ. ಕನಿಷ್ಟ ಸಂಬಳದಲ್ಲಿಯೇ ಕೆಲ್ಸಸ ಮಾಡುವಂಥ ದುರಂತವನ್ನು ಅವರು ಅನುಭವಿಸುತ್ತಿದ್ದಾರೆ. ನಂತರ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಶಾಲಾ ಶಿಕ್ಷಕರಿಗೆ ಸಿಗಬೇಕಾದ ಕನಿಷ್ಟ ಸಂಬಳವನ್ನು ಆ ನಿಗದಿತ ಸಮಯದಲ್ಲಿ ಕೊಡುವಂಥಧ್ದು ತೀರಾ ಅವಶ್ಯಕತೆ ಇದೆ. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಕಳೆದ ಜನವರಿಯಲ್ಲಿ ನಾನು ಪ್ರಸ್ತಾಪವನ್ನು ಮಾಡಿದೆ. ಸುಮಾರು ಮೂರು ಕೋಟಿ ರೂ.ಗಳಷ್ಟು ಬಾಕಿ ಇತ್ತು. ಅದರ ನಂತರ ಇಲ್ಲಿ ಪ್ರಸ್ತಾಪ ಆದ ನಂತರ ಒಂದೆರಡು ತಿಂಗಳಲ್ಲಿ ಅದು ಅನುದಾನ ಬಿಡುಗಡೆಯಾಯಿತು. ಹೀಗೆ ಇನ್ನೊಂದು ಸಲ ಇದೇ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಇಲ್ಲಿ ಏನಾಗುತ್ತದೆ ಎಂದು ಹೇಳಿದರೆ ಬರುವಂಥ ಸರ್ಕ್ಯುಲರ್ ಒಂದು. ಬಾಯಿ ಮೂಲಕ ಹೇಳುವ ಮಾತುಗಳು ಒಂದು. ನಮಗೆ ಕೊಡುವ ಉತ್ತರ ಇನ್ನೊಂದು. ಈ ತರಹ ಶಿಕ್ಷಕರು ಶಿಕ್ಷಣ ಕ್ಷೇತ್ರದಲ್ಲಿ ಕೂಡ ವಿಶೇಷವಾಗಿರುವಂಥ ಸಮಸ್ಯೆಯನ್ನು ಕೂಡ ಎದುರಿಸುತ್ತಿರುವುದು ನನ್ನ ಗಮನದಲ್ಲಿದೆ. ಸರ್ಕಾರ ಇದನ್ನು ಸರಿಪಡಿಸಬೇಕೆಂದು ಹೇಳುವಂಥ ವಿನಂತಿಯನ್ನು ನಾನು ಮಾಡುತ್ತಿದ್ದೇನೆ. ಮತ್ತೆ ಗ್ರಾಮ ಸೇವಕರ ಬಗ್ಗೆ ಒಂದು ವಿಶೇಷ ಕಾಳಜಿಯನ್ನು ತಾವು ವಹಿಸಬೇಕು. ನೂರು ರೂಪಾಯಿಯಿಂದ ಆರಂಭಿಸಿ ಈಗ ಒಂದು ಸಾವಿರ ರೂ.ಗಳತನಕ ತಾವು ಸಂಬಳವನ್ನು ಕೊಡುತ್ತಿದ್ದೀರಿ. ಕನಿಷ್ಟ ಮುಂದೆ ಅವರನ್ನು ರೆಗ್ಯುಲರೈಜ್ ಮಾಡುವತನಕ ಕನಿಷ್ಟ ಮೂರು ಸಾವಿರ ರೂ.ಗಳ ಸಂಬಳವನ್ನು ಕೊಡುವಂಥದ್ದು

ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಕೂಡ ತಾವು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದ ಉದ್ಯೋಗ ವಿನಿಮಯ ಕಛೇರಿಯಲ್ಲಿ 15, 84, 177 ಜನರು ಇವತ್ತು ನಿರುದ್ಯೋಗಿಗಳಾಗಿ ನೋಂದಾಯಿತರಾಗಿದ್ದಾರೆ. ಅದೂ ಕೂಡ ಪದವೀಧರರು. ಈ ನಿಟ್ಟಿನಲ್ಲಿ ಯಾವ ಕಾರ್ಯಕ್ರಮವನ್ನು ತಾವು ಹಮ್ಮಿಕೊಂಡಿದ್ದೀರಿ? ವಿಶೇಷವಾಗಿ ನಿರುದ್ಯೋಗಿ ಯುವಕರಿಗೆ 500 ರೂ.ಗಳ ವೇತನವನ್ನು ಕೊಡುತ್ತಾರೆಂದು ಹೇಳುವಂಥ ಒಂದು ಯೋಜನೆಯನ್ನಾದರೂ ಅನುಷ್ಠಾನಕ್ಕೆ ತರುವಂಥದ್ದು ಅಥವಾ ಅವರಿಗೆ ಪರ್ಯಾಯವಾಗಿ ಉದ್ಯೋಗವಕಾಶವನ್ನು ಕೊಡುವಂಥ ನಿಟ್ಟಿನಲ್ಲಿ ಉದ್ಯೋಗ ಭದ್ರತೆಯನ್ನು ತರುವಂಥ ಒಂದು ಮಸೂದೆಯನ್ನು ತಾವು ತರುವ ಬಗ್ಗೆ ಯೋಚನೆಯನ್ನು ಏನು ಮಾಡುತ್ತಿದ್ದೀರಿ, ಅದನ್ನು ತರುವಂಥದ್ದು. ಅದರ ಜೊತೆಗೆ ಆಹಾರ ಭದ್ರತೆಗೆ ಸಂಬಂಧಪಟ್ಟಿದ್ದು. ಆರೋಗ್ಯ ಭದ್ರತೆಗೆ ಸಂಬಂಧಪಟ್ಟ ಯೋಜನೆಗಳನ್ನು ಮತ್ತು ಮಸೂದೆಗಳನ್ನು ಇಲ್ಲಿ ಮಂಡಿಸಬೇಕು. ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳುವಂಥ ಮಾತನ್ನು ಕೂಡ ನಾನು ಹೇಳಲಿಕ್ಕೆ ಇಚ್ಛೆಸುತ್ತಿದ್ದೇನೆ. ವಿಶೇಷವಾಗಿ ನಮ್ಮ ಶಾಲಾ ಕಟ್ಟಡಗಳಿಗೆ ಸಂಬಂಧಪಟ್ಟ ಹಾಗೆ ನಾನು ಹೇಳುತ್ತಿದ್ದೇನೆ. ರಾಜ್ಯದಲ್ಲಿರುವ ಶಾಲಾ ಕಟ್ಟಡಗಳಲ್ಲಿ ಎಷ್ಟು ಶಾಲಾ ಕಟ್ಟಡಗಳು ಅಜೀರ್ಣ ಸ್ಥಿತಿಯಲ್ಲಿವೆ, ಶಿಥಿಲ ಸ್ಥಿತಿಯಲ್ಲಿವೆ? ಈ ಲೆಕ್ಕಾಚಾರಗಳನ್ನು ಪ್ರಸ್ತಾಪಿಸಲು ಬಹುಶ ಃ ನನಗೆ ಸಮಯಾವಕಾಶ ಕಡಿಮೆ ಇದೆ. ಆದರೆ ನಾನು ಇಷ್ಟು ಮಾತ್ರ ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿರುವ ಕೆಲವು ಶಾಲಾ ಕಟ್ಟಡಗಳು, ಅದು ಕೂಡ ಅಲ್ಪ ಸಂಖ್ಯಾತರು ಕಲಿಯುತ್ತಿರುವಂಥ ಉರ್ದು ಶಾಲೆ, ಅದಕ್ಕೆ ಸಂಬಂಧಪಟ್ಟ ಬಂದರು ಶಾಲೆ ಇರಬಹುದು, ಕನ್ನಡ ಪಾಠಶಾಲೆ ಇರಬಹುದು, ನೂರು ವರ್ಷಗಳನ್ನು ದಾಟಿದೆ. ಯಾವ ಸಂದರ್ಭದಲ್ಲಿ ಗೋಡೆ ಮತ್ತು ಮಾಡು ಕುಸಿಯುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಹಿರಿಯ ಅಧಿಕಾರಿಗಳಿಗೆ, ಹಿರಿಯ ಸಚಿವರಿಗೆ ಅದನ್ನು ತೋರಿಸುವಂಥ ಕಾರ್ಯವನ್ನು ನಾನು ಮಾಡಿದ್ದೇನೆ. ನನ್ನ ಹತ್ತಿರ ಇರುವ ಅಂಕಿಸಂಖ್ಯೆ ಪ್ರಕಾರ ಪ್ರಾಥಮಿಕ ಶಾಲೆಯಲ್ಲಿ ಇರುವ ಶಿಥಿಲಗೊಂಡಿರುವ ಕಟ್ಟಡಗಳು ಇಡೀ ರಾಜ್ಯದಲ್ಲಿ 19446 ಇವೆ. ಪ್ರೌಢಶಾಲೆಗಳಲ್ಲಿ 1393 ಇವೆ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕೊರತೆ ಇರುವ ಕಟ್ಟಡಗಳು : ಪ್ರಾಥಮಿಕದಲ್ಲಿ 1646, ಪ್ರೌಢದಲ್ಲಿ 389 ಇದೆ. ಕನಿಷ್ಟ ಈ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳಿಗೆ ಕಾಯಕಲ್ಪ ಕೊಡತಕ್ಕ ಕಾರ್ಯವನ್ನು ತಾವು ಮಾಡದಿದ್ದರೆ ಆ ಕಟ್ಟಡಗಳು ಕುಸಿದು ಮಕ್ಕಳು ಶಿಕ್ಷಕರು ಅವರ ಪ್ರಾಣ ಹಾನಿಯಾಗುವಂಥ ದುರಂತವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಬಾರ್ಡ್ ಇರಲಿ, ಯಾವುದೇ ಯೋಜನೆ ಮೂಲಕ ಅನುದಾನವನ್ನು ಕೊಡುವ ನಿಟ್ಟಿನಲ್ಲಿ ತಾವು ಸಹಾಯವನ್ನು ಮಾಡಬೇಕೆಂದು ಹೇಳುವಂಥ ವಿನಂತಿಯನ್ನೂ ಕೂಡ ನಾನು ಮಾಡುತ್ತೇನೆ. ಮತ್ತೆ ವಿಶೇಷವಾಗಿ ನಮ್ಮ ಗೇರು ಕೃಷಿಗೆ ಸಂಬಂಧಪಟ್ಟ ಹಾಗೆ ರಾಜ್ಯದಲ್ಲಿ 61,571 ಹೆಕ್ಟೇರ್

ಕ್ಷೇತ್ರದಲ್ಲಿ ಸುಮಾರು 1.5 ಲಕ್ಷ ಟನ್‌ನಷ್ಟು ಗೇರು ಕೃಷಿ ಇಲ್ಲಿ ಆಗುತ್ತಿದೆ. ಆದರೆ ನಮ್ಮ ಬೇಡಿಕೆಗೆ ಆಮದು ಮಾಡಿಕೊಂಡು ತರುವಂಥದ್ದು ಸುಮಾರು ಇನ್ನೂ 50 ಸಾವಿರ ಟನ್‌ನಷ್ಟು ಆಗುತ್ತಿರುವುದರಿಂದ ಕನಿಷ್ಟ ಅದಕ್ಕೆ ಸಂಬಂಧಪಟ್ಟಿರುವ ಗೇರು ಕೃಷಿಗೆ ಹೆಚ್ಚಿನ ಕಾಯಕಲ್ಪವನ್ನು ಕೊಡಬೇಕು. ಹೆಚ್ಚಿನ ಕ್ಷೇತ್ರಗಳಲ್ಲಿ ಅದನ್ನು ಬೆಳೆಸುವಂಥ ನಿಟ್ಟಿನಲ್ಲಿ ಕೂಡ ಕಾರ್ಯವನ್ನು ತಾವು ಮಾಡಿಕೊಡಬೇಕೆಂದು ಹೇಳುವ ವಿನಂತಿಯನ್ನು ಮಾಡುತ್ತೇನೆ. ವಿಶೇಷವಾಗಿ ಸಿ.ಎಫ್.ಟಿ.ಆರ್‌ಐ ಎನ್ನುವ ಸಂಸ್ಥೆಯ ಮೂಲಕ ಗೇರು ಕೃಷಿಗೆ ಸಂಬಂಧಪಟ್ಟಿರುವ ವಿಶೇಷವಾಗಿ ಹಣ್ಣಿನ ಜ್ಯೂಸ್ ಹಾಗೂ ಇನ್ನಿತರ ರೀತಿಯಲ್ಲಿ ಕೂಡ ಅದರ ಸದುಪಯೋಗ ಮಾಡುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ತಾವು ಹಮ್ಮಿಕೊಳ್ಳಬೇಕೆಂದು ಹೇಳುವಂಥ ವಿನಂತಿಯನ್ನು ಮಾಡುತ್ತೇನೆ. ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕಂಪ್ಯೂಟರ್ ಶಿಕ್ಷಣಕ್ಕೆ ಸಂಬಂಧಪಟ್ಟ ಒಂದು ಸಣ್ಣ ಪ್ರಯೋಗ ನನ್ನ ಕ್ಷೇತ್ರದಲ್ಲಿ ಆಗಿತ್ತು. ಸುಮಾರು 80 ಸಾವಿರ ವಿದ್ಯಾರ್ಥಿಗಳಿಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂಥ ಪ್ರಖ್ಯಾತವಾಗಿರುವಂಥ ಯಾವ ಎಸ್‌ಐಟಿ. ಇಂಜಿನಿಯರಿಂಗ್ ಕಾಲೇಜು ಇದೆ, ಇಲ್ಲಿರುವ ಪದವೀಧರ ಕಾಲೇಜುಗಳ ಎಲ್ಲೆಲ್ಲಿ ಕಂಪ್ಯೂಟರ್ ಶಿಕ್ಷಣ ಇದೆ, ಅಲ್ಲಿ ಎಲ್ಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಇಂಟರ್‌ನೆಟ್ ಬ್ರೌಸಿಂಗ್ ಮಾಡುವುದು ಹೇಗೆ ಎಂದು ಹೇಳುವ ಒಂದು ವಿಶೇಷವಾದ ಕಾರ್ಯಕ್ರಮವನ್ನು ನಮ್ಮ ಜಿಲ್ಲಾಡಳಿತ ವ್ಯವಸ್ಥೆ ಮಾಡಿತ್ತು. ಈ ಮೂಲಕ ಪ್ರತಿಯೊಂದು ಶಾಲಾ ಮಕ್ಕಳಿಗೂ ಕೂಡ ಇಂಟರ್‌ನೆಟ್ ಜ್ಞಾನವನ್ನು ಕೊಡುವಂಥ ರೀತಿಯಲ್ಲಿ ಕಾರ್ಯಕ್ರಮವನ್ನು ಮಾಡಿ ಅದನ್ನು ಅಳವಡಿಸುವಂಥದ್ದು ತುಂಬಾ ಅವಶ್ಯಕತೆ ಇದೆ. ಕನಿಷ್ಟ ಒಂದೊಂದು ಶಾಲೆಗೆ ಎರಡೆರಡು ಕಂಪ್ಯೂಟರ್‌ಗಳನ್ನು ಒದಗಿಸುವಂಥದ್ದು ಆ ಮೂಲಕ ನೇರವಾಗಿ ಈಗ ಬ್ರಾಡ್‌ಬ್ಯಾಂಡ್‌ಗೆ ಸಂಬಂಧಪಟ್ಟಿರುವಂಥ ನಾವು ಕೇಬಲ್ ಕನೆಕ್ಷನ್ನನ್ನು ತೆಗೆದುಕೊಳ್ಳಬಹುದು. ಅದನ್ನು ತೆಗೆದುಕೊಳ್ಳುವುದರ ಮೂಲಕ ಅವರಲ್ಲಿರುವಂಥ ಈ ಜ್ಞಾನವನ್ನು ಬೆಳೆಸುವಂಥ ನಿಟ್ಟಿನಲ್ಲಿ ಕೂಡ ತಾವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಹೇಳುವಂಥದ್ದು, ಮತ್ತೆ ವಿಶೇಷವಾಗಿ ಮಾಹಿತಿ ಸಿಂಧು ಕಾರ್ಯಕ್ರಮ ಹಿಂದಿನ ಸರ್ಕಾರದ್ದು. ನಮ್ಮ ಸರ್ಕಾರಕ್ಕೆ ಸೇರಿಲ್ಲ ಎಂದು ಹೇಳುವಂಥ ಒಂದು ಯೋಜನೆಯನ್ನು ಬಿಟ್ಟು ಅದು ಎಲ್ಲರಿಗೂ ಲಭ್ಯವಾಗುವಂಥ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಹೇಳುವ ಮೂಲಕ ವಿಷಯವನ್ನು ಪ್ರಸ್ತಾಪ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ್) :– ಮಾನ್ಯ ಅಧ್ಯಕ್ಷರೇ, ಸಮಯ ಕೊಟ್ಟಿದ್ದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ. ಈಗ ಕೃಷಿ ಬೇಡಿಕೆಯ ಮೇಲೆ ನಾವು ಸದನದಲ್ಲಿ ಚರ್ಚೆಯನ್ನು ಮಾಡುತ್ತಿದ್ದೇನೆ. ಕೃಷಿ ಮಂತ್ರಿಗಳೇ ಇಲ್ಲ ಅಧ್ಯಕ್ಷರೇ.

ಅಧ್ಯಕ್ಷರು :– ಬರುತ್ತಾರೆ. ಎಲ್ಲೋ ಹೊರಗಡೆ ಹೋಗಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ನಿನ್ನೆ ಕೂಡ ಇದರ ಬಗ್ಗೆ ಮಾನ್ಯ ಸದಸ್ಯರುಗಳು ಆಕ್ಷೇಪಣೆಯನ್ನು ಎತ್ತಿದರು; ತಾವು ಇರಲಿಲ್ಲ. ಉಪಾಧ್ಯಕ್ಷರಿದ್ದರು. ಈ ತರಹ ಒಂದು ಮುಖ್ಯವಾದ ವಿಷಯದ ಮೇಲೆ ಚರ್ಚೆಯಾಗಬೇಕಾದಾಗ ಸಂಬಂಧಪಟ್ಟಂಥ ಸಚಿವರಿದ್ದರೆ ಒಳ್ಳೆಯದು.

ಶ್ರೀ ತನ್ವೀರ್ ಸೇಠ್ :– ಮಾನ್ಯ ಅಧ್ಯಕ್ಷರೇ, ಇವತ್ತು ವಿಧಾನಪರಿಷತ್ತಿನ ಚುನಾವಣೆ ಇರುವುದರಿಂದ ಮಂತ್ರಿಗಳು ಅಲ್ಲಿಗೆ ಹೋಗಿದ್ದಾರೆ. ಸದನದಲ್ಲೇ ಇದ್ದರು, ಈಗ ಬರುತ್ತಾರೆ, ಅಧಿಕಾರಿಗಳಿದ್ದಾರೆ, ತಾವು ಮಾತನಾಡಿ. ಚರ್ಚೆಗೆ ಮುಕ್ತವಾದ ಅವಕಾಶವನ್ನು ಕೊಟ್ಟ ಮೇಲೆ ತಾವು ಮಾತನಾಡಿ. ಅಧಿಕಾರಿಗಳು ಬರೆದುಕೊಳ್ಳುತ್ತಿದ್ದಾರೆ.

ಮಾನ್ಯ ಸದಸ್ಯರು :– ಚುನಾವಣೆ ನಮಗೂ ಇತ್ತು. ಬೇಡಿಕೆ ಮೇಲೆ ಚರ್ಚೆ ಮಾಡಬೇಕಾದರೆ ಮಾನ್ಯ ಮಂತ್ರಿಗಳೇ ಇಲ್ಲವೆಂದರೆ ನಾವು ಏಕೆ ಇಲ್ಲಿ ಮಾತನಾಡಬೇಕು?

ಶ್ರೀ ತನ್ವೀರ್ ಸೇಠ್ :– ನೀವು ಸರ್ಕಾರಕ್ಕೆ ಮಾತನಾಡುತ್ತಿರುವುದು, ಮಂತ್ರಿಗಳಲ್ಲ. ಖಂಡಿತಾ ನಿಮಗೆ ಉತ್ತರ ಕೊಡುವ ಸಮಯದಲ್ಲಿ ಮಾತನಾಡುತ್ತೇವೆ. ಸದಸ್ಯರಿಗೆ ಮುಕ್ತವಾದ ಅವಕಾಶ ಕೊಟ್ಟಿದೆ. ಅವರು ಮಾತನಾಡಲಿ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಸಚಿವರಾದ ಶ್ರೀ ತನ್ವೀರ್ ಸೇಠ್ ಅವರ ತರ್ಕ, ಅದು ಸರಿಯಾದುದು ಅಲ್ಲ. ಸಂಬಂಧ ಪಟ್ಟಂತಹ ಇಲಾಖೆಯ ಸಚಿವರು ಹಾಜಾರು ಇದ್ದಾಗ, ಇದೊಂದು ಸರ್ವೋಚ್ಛಮ ವೇದಿಕೆಯಲ್ಲಿ ಚರ್ಚೆ ಆಗಬೇಕು, ಚಿಂತನೆ ಆಗಬೇಕು. ಇದರ ಬಗ್ಗೆ ಒಂದು ವ್ಯಾಪಕವಾದ ಚಿಂತನೆ ಬಂದು, ಇದು ರಾಜ್ಯಕ್ಕೆ, ಜನತೆಗೆ ಹಿತ ಆಗಬೇಕು ಎನ್ನುವ ಉದ್ದೇಶ ಇಟ್ಟುಕೊಂಡೇ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇಲ್ಲಿ ಯಾರಿಗೆ ಹೇಳುವುದು ಮಾನ್ಯ ಅಧ್ಯಕ್ಷರೇ ಈ ತರಹ ಆಗಬಾರದು. ನಿನ್ನೆ ಕೂಡ ಮಾನ್ಯ ಸದಸ್ಯರುಗಳು ಆಕ್ಷೇಪವನ್ನು ಎತ್ತಿದ್ದಾರೆ. ಈ ತರಹ ನಾವು ಯಾರಿಗೆ ಹೇಳುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಇಷ್ಟೇ ವಿಚಾರ. ನಿಮಗೆ ಏನು ಗೊತ್ತೋ ಅದನ್ನು ಹೇಳುತ್ತಾ ಹೋಗಿ, ರೆಕಾರ್ಡ್ ಆಗುತ್ತದೆ. ಅವರು ಕೇಳಿಸಿಕೊಳ್ಳುತ್ತಾರೋ, ಬಿಡುತ್ತಾರೋ ಅವರಿಗೆ ಅದು ವಿಚಾರ ಗೊತ್ತಾಗುತ್ತದೆ. ಅವರು ಉತ್ತರ ಹೇಳುತ್ತಾರೆ.

ಅಧ್ಯಕ್ಷರು :– ಮಾನ್ಯ ಕೃಷಿ ಸಚಿವರು ಬರುತ್ತಾರೆ, ಮಾತನಾಡಿ ದಯಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಏಕೆಂದರೆ ನೀವು ನಿಮ್ಮ ಕ್ಷೇತ್ರಕ್ಕೆ ವಾಪಸ್ ಹೋಗಿ ನಾನು ವಿಧಾನಸಭೆಯಲ್ಲಿ ಮಾತನಾಡಿದ್ದೇನೆಂದು ಹೇಳಬೇಕು. ಅದು ಮಾತ್ರ ಆಗುತ್ತದೆ. ಅದಕ್ಕಿಂತ ಜಾಸ್ತಿ ಇಲ್ಲಿ ಏನೂ ಆಗುವುದಿಲ್ಲ. ಇದನ್ನು ನಾವು ನೋಡಿಕೋಂಡೇ ಬಂದಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಜಯಪ್ರಕಾಶ್ ಹೆಗ್ಡೆ ಅವರೇ, ನಾವು ಜನತೆಗೆ ಹೇಳುವುದಕ್ಕೋಸ್ಕರ ಇಲ್ಲಿಗೆ ಬಂದಿಲ್ಲ. ಆತ್ಮಸಾಕ್ಷಿಯಾಗಿ, ಪ್ರಾಮಾಣಿಕವಾಗಿ ನಾವು ಏನಾದರೂ ಕಾಂಟ್ರಿಬ್ಯೂಟ್ ಮಾಡಬೇಕು. ಈ ರಾಜ್ಯಕ್ಕೆ ಏನಾದರೂ ಒಳ್ಳೆಯದು ಆಗಬೇಕು ಎಂದು ಹೇಳಿ ಯೋಚನೆ ಮಾಡಿಕೊಂಡು ಮಾತನಾಡುವುದಕ್ಕೆ ಬಂದಿದ್ದೇನೆ.

ಅಧ್ಯಕ್ಷರು :– ಆಯಿತು, ಮಾತನಾಡಿ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ತಾವು ದಯಮಾಡಿ ಆದೇಶ ಕೊಡಿ. ಏಕೆಂದರೆ ಇದೊಂದು ಓಪನ್ ಫೋರಂ. ನಾವು ಇಲ್ಲಿ ಚರ್ಚೆ ಮಾಡಬೇಕಾದರೆ, ಎಲ್ಲರಿಗೂ ಗೊತ್ತಾಗಬೇಕು. ಮತ್ತು ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಮೂಡಿಸಬೇಕಾಗುತ್ತದೆ. ಈಗ ಕೃಷಿ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಇಲ್ಲಿ ಮಾತನಾಡಿದ್ದಾರೆ. ಸಮಯ ಜಾಸ್ತಿ ಇಲ್ಲದ ಕಾರಣಕ್ಕಾಗಿ ಕೆಲವೇ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿ ನಾನು ಮಾತನ್ನು ಮುಗಿಸುತ್ತಿದ್ದೇನೆ. ಈಗ ಕೃಷಿ ಪಾರಂಪರಿಕವಾಗಿ ನಮ್ಮ ದೇಶದಲ್ಲಿ ನಡೆದುಕೊಂಡು ಬಂದ ಮೇಲೆ ರೈತರೇ ಸಾಕಷ್ಟು ಪ್ರಮಾಣದಲ್ಲಿ ಪ್ರಗತಿ ಮಾಡಿ, ಒಂದು ಸಾಧನೆಯನ್ನು ಮಾಡಿದ್ದೇವೆ. ನಮಗೆ ಬೇಕಾದಷ್ಟು ಆಹಾರವನ್ನು ನಾವು ಇವತ್ತು ಬೆಳೆಯುತ್ತಿದ್ದೇವೆ. ಆದರೆ ಏನು ಒಂದು ಕಾಲಕ್ಕೆ ನಮ್ಮ ರೈತರನ್ನು ನಾವು ದಿಕ್ಕು ತಪ್ಪಿಸಿದ್ದೇವೆ. ಈ ಹೊಸ ಹೊಸ ಕೆಮಿಕಲ್ ಫರ್ಟಿಲೈಸರ್ ಅನ್ನು ಉಪಯೋಗ ಮಾಡಿರಿ. ಆಮೇಲೆ ಪೆಸ್ಟಿಸೈಡ್ಸ್ ಅನ್ನು ಉಪಯೋಗ ಮಾಡಿರಿ ಎಂದು ಹೇಳಿ ಹೇಳಿ ಅವರ ಮನೆಯನ್ನು ಹಾಳು ಮಾಡಿ, ಜಮೀನು ಹಾಳು ಮಾಡಿ, ಇವತ್ತು ಅವರೆಲ್ಲರನ್ನೂ ಸಾಲದಲ್ಲಿ ನಾವು ಸಿಕ್ಕಿಸಿದ್ದೇವೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಏನೊಂದು ಹೊಸ ಪದ್ಧತಿಯ ಕೃಷಿ ವಿಧಾನಗಳು ಇತ್ತೀಚೆಗೆ ನಮ್ಮ ದೇಶದಲ್ಲಿ ನಡೆದಿದೆ, ಅದರ ಬಗ್ಗೆ ಸರ್ಕಾರ ವ್ಯಾಪಕವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು, ಆ ದಿಕ್ಕಿನಲ್ಲಿ ಗಂಭೀರವಾದಂತಹ ಚಿಂತನೆಯನ್ನು ಮಾಡಬೇಕಾಗುತ್ತದೆ. ಒಂದು ಸಾವಯವ ಕೃಷಿ ಎನ್ನುವಂತಹ ಒಂದು ಪದ್ಧತಿಯನ್ನು ನಮ್ಮ ಸರ್ಕಾರದವರು ಇವತ್ತು ತರುತ್ತಿದ್ದಾರೆ. ಇದರ ಜೊತೆಗೇನೆ ಮಹಾರಾಷ್ಟ್ರದ ಒಬ್ಬ ಕೃಷಿ ವಿಜ್ಞಾನಿ ಶ್ರೀ ಸುಭಾಷ್ ಬಾಳೇಕರ್ ಎಂದು, ಅವರು ಈ ಜೀರೋ ಕಲ್ಟಿವೇಷನ್ ಎನ್ನುವಂತಹ ಒಂದು ಕಲ್ಪನೆಯನ್ನು ವಾಸ್ತವಿಕವಾಗಿ ತಂದಿದ್ದಾರೆ. ಮತ್ತು ಅದರ ಬಗ್ಗೆ ವ್ಯಾಪಕವಾದ ಒಂದು ಚರ್ಚೆ ನಡೆಯುತ್ತಿದೆ. ಮೊನ್ನೆ ಅವರು ಮೈಸೂರಿಗೆ ಕೂಡ ಬಂದಿದ್ದರು. ಮೈಸೂರಿನಲ್ಲಿ ಅವರನ್ನು ಸನ್ಮಾನ ಮಾಡಿದರು. ಮತ್ತು ಅವರು ವಿಚಾರಗಳನ್ನು ಇಡೀ ದೇಶದ ಜನತೆಗೆ ಹೇಳಿದ್ದಾರೆ. ಇಂತಹ ಒಂದು ಹೊಸ ವಿಚಾರವನ್ನು ಒಬ್ಬ ರೈತ, ಒಬ್ಬ ವಿಜ್ಞಾನಿಯಾಗಿ ತಾನೇ ಅದನ್ನು ತಾನೇ ಅದನ್ನು ಸ್ವಂತವಾಗಿ ಮಾಡಿ, ಯಶಸ್ವಿಯಾಗಿ ಒಂದು ಹೊಸ ಕಲ್ಪನೆಯನ್ನು ನಮ್ಮ ದೇಶಕ್ಕೆ ಕೊಟ್ಟಿರಬೇಕಾಗಿದ್ದರೆ, ಸರ್ಕಾರ ಇದರ ಬಗ್ಗೆ

ವ್ಯಾಪಕವಾದ ಕಾರ್ಯಕ್ರಮವನ್ನು ಹಾಕಿಕೊಂಡು ಈ ಜೀರೋ ಕಲ್ಟಿವೇಷನ್ ಅಂದರೆ ಯಾವುದೇ ಬಂಡವಾಳ ಹಾಕದೇನೆ ನಿಸರ್ಗ ಆಧಾರದಲ್ಲಿ ಕೃಷಿಯನ್ನು ಮಾಡಿದರೆ ಮಾತ್ರ ನಾವು ಬದುಕುತ್ತೇವೆ ಎನ್ನುವಂತಹ ಮಾತನ್ನು ಬಾಳೇಕರ್ ಅವರು ಹೇಳಿದ್ದನ್ನು ಸರ್ಕಾರದವರು ಮತ್ತು ನಾವೆಲ್ಲರೂ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಜಲಾನಯನದ ಬಗ್ಗೆ ಕಳೆದ ಅಧಿವೇಶನದಲ್ಲಿ ಸಾಕಷ್ಟು ಮಾತನಾಡಿದ್ದೇನೆ. ಈಗ ಮೊನ್ನೆ ಮಾನ್ಯ ಪ್ರಕಾಶ್ ಅವರು ಕೂಡ ಎಲ್ಲೋ ಒಂದು ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಮುಂದೆ ಇಡೀ ಜಗತ್ತೇ ಈ ಜಲಕ್ಷಾಮದಲ್ಲಿ ಮುಳುಗಲಿದೆಯೋ ಏನೋ ಎನ್ನುವಂತಹ ಒಂದು ಸತ್ಯವಾದ ಮಾತನ್ನು ಹೇಳಿದ್ದಾರೆ. ಇದು ನಾವೆಲ್ಲ ಒಪ್ಪಬೇಕಾದಂತಹ ಮಾತು. ಈ ನಿಟ್ಟಿನಲ್ಲಿ ನಮ್ಮ ಇಲಾಖೆಯವರು ಕೆಲಸ ಮಾಡುತ್ತಿದ್ದಾರೆ. ಆದರೆ ನನ್ನ ಅಭಿಪ್ರಾಯದ ಪ್ರಕಾರ ಅದು ವೈಜ್ಞಾನಿಕವಾಗಿ ಇಲ್ಲ ಎನ್ನುವಂತಹ ಮಾತನ್ನು ನಾನು ಅನೇಕ ಸಾರಿ ಹೇಳಿದ್ದೇನೆ. ಉದಾಹರಣೆಗೆ ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯದು ಕೊಡುತ್ತಿದ್ದೇನೆ ; ಕಳೆದ ಐದು ವರ್ಷಗಳಲ್ಲಿ ಸುಮಾರು 11 ಕೋಟಿ ರೂಪಾಯಿಗಳನ್ನು ಈ ಜಲಾನಯನದಲ್ಲಿ ನಾವು ಖರ್ಚು ಮಾಡಿದ್ದೇವೆ. ಆದರೆ ಸಾಧನೆ ಎಲ್ಲಿಯೂ ಕೂಡ ಸ್ಪಷ್ಟವಾಗಿ ಕಾಣುತ್ತಿಲ್ಲ. ಇದಲ್ಲದೇ ಗ್ರಾಮ ಪಂಚಾಯತಿಗಳಿಗೆ ಏನು ಎಸ್‌ಜೈಆರ್‌ವೈನಲ್ಲಿ ದುಡ್ಡು ಕೊಡುತ್ತೇವೆ, ಅದು ಗ್ರಾಮ ಪಂಚಾಯತಿಗಳಿಗೆ ಮ್ಯಾಂಡೇಟರಿ ಪ್ರಾವಿಜನ್ ಇದೆ. ಅವರು ಈ ಜಲಾನಯನ ಮತ್ತು ಅರಣ್ಯಕ್ಕೆ ಇಟ್ಟಂತಹ ದುಡ್ಡನ್ನು ಖರ್ಚು ಮಾಡಲೇಬೇಕು ಎನ್ನುವಂತಹ ಒಂದು ಮ್ಯಾಂಡೇಟರಿ ಪ್ರಾವಿಜನ್ ಇದ್ದರೂ ಕೂಡ ಯಾವ ಗ್ರಾಮ ಪಂಚಾಯತಿಯೂ ಕೂಡ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಂಡು ಕೆಲಸ ಮಾಡುತ್ತಿಲ್ಲ. ಗುಲ್ಬರ್ಗಾ ಜಿಲ್ಲೆಯ ಒಂದೇ ಉದಾಹರಣೆ ತೆಗೆದುಕೊಂಡರೆ ಸುಮಾರು 17 ಕೋಟಿ ರೂಪಾಯಿಗಳನ್ನು ಕಳೆದ ಐದು ವರ್ಷಗಳಲ್ಲಿ ಈ ಕೆಲಸಕ್ಕೆ ನಾವು ಖರ್ಚು ಮಾಡಿದ್ದೇವೆ. ಆದರೆ ಆ ದುಡ್ಡು ಎಲ್ಲಿ ಹೋಯಿತು? ಯಾವ ಕೆಲಸಕ್ಕೆ ಖರ್ಚು ಆಯಿತು ಎಂದು ಸ್ಪಷ್ಟವಾಗಿ ಚಿತ್ರಣ ಸಿಗುತ್ತಿಲ್ಲ. ಹೀಗೆ ಗ್ರಾಮ ಪಂಚಾಯತಿಯವರು ಮಾಡುತ್ತಾರೆ ಮತ್ತು ತಾಲ್ಲೂಕು ಪಂಚಾಯತಿಯವರು ಮಾಡುತ್ತಾರೆ. ಜಿಲ್ಲಾ ಪಂಚಾಯತಿಯವರು ಮಾಡುತ್ತಾರೆ. ಇದಲ್ಲದೆ ನಬಾರ್ಡ್‌ನಲ್ಲಿ ಮತ್ತು ವರ್ಲ್ಡ್ ಬ್ಯಾಂಕ್‌ನಲ್ಲಿ ಬೇರೆ ಬೇರೆ ಕಾರ್ಯಕ್ರಮದಲ್ಲಿ ನಾವು ಈ ಜಲಾನಯನ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ. ಆದರೆ ಇಲ್ಲಿ ಅಧಿಕಾರಿಗಳು ಗಮನಿಸಬೇಕು. ಒಂದೇ ಕೆಲಸವನ್ನು ಬೇರೆ ಬೇರೆ ಇಲಾಖೆಯವರು ತೆಗೆದುಕೊಂಡು ಅಲ್ಲಿ ದುಡ್ಡನ್ನು ಖರ್ಚು ಮಾಡುತ್ತಾರೆ. ಅದು ಯಾವ ಇಲಾಖೆಯವರು ಮಾಡಿದ್ದರು? ಯಾವ ಜಿಲ್ಲಾ ಪಂಚಾಯತಿಯವರು ಮಾಡಿದರು? ತಾಲ್ಲೂಕು ಪಂಚಾಯತಿಯವರು ಮಾಡಿದರು ಎಂದು ಅಲ್ಲಿ ಜಮೀನಿನಲ್ಲಿ

ಹೋದರೆ, ಅದರ ಮೇಲೆ ಯಾವುದೇ ಗುರುತು ಇರುವುದಿಲ್ಲ. ಅದು ಜಿಲ್ಲಾ ಪಂಚಾಯತಿಯವರು ಮಾಡಿದ್ದಾರೋ, ತಾಲ್ಲೂಕು ಪಂಚಾಯತಿಯವರು ಮಾಡಿದ್ದಾರೋ, ಗೊತ್ತಿಲ್ಲ. ಆದರೆ ಇವರ ಹೆಸರು ಅವರು ಹೇಳಿ ಹಣ ಎತ್ತುತ್ತಾರೆ. ಅವರು ಇವರ ಹೆಸರು ಹೇಳಿ ದುಡ್ಡನ್ನು ಎತ್ತಿ ಹಾಕಿದ್ದಾರೆ. ಹಾಗಾಗಿ ಈ ಜಲಾನಯನದಲ್ಲಿ ಏನು ದುಡ್ಡು ಇವತ್ತು ಖರ್ಚಾಗುತ್ತಿದೆ, ಅದು ಪೋಲಾಗಿ ಹೋಗುತ್ತಿದೆ, ಹಾಳಾಗಿ ಹೋಗುತ್ತಿದೆ. ಅದಕ್ಕೆ ನನ್ನ ಸಲಹೆ ಸರ್ಕಾರಕ್ಕೆ ಏನು ಅಂದರೆ ಈ ಜಲಾನಯನದ ಕೆಲಸವನ್ನು ನಾವೇನು ತೆಗೆದುಕೊಂಡಿದ್ದೇವೆ, ಅದಕ್ಕೆ ಒಂದೇ ಒಂದು ಪ್ರಾಧಿಕಾರವನ್ನು ಮಾಡಿ. ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆ ಅವರು ಮುಖ್ಯ ಮಂತ್ರಿಗಳು ಆಗಿದ್ದಾಗ ಶ್ರೀ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿದ್ದರು. ಅಲ್ಲೆ ಒಳ್ಳೆಯ ಕೆಲಸ ಆಗಿತ್ತು. ಇವತ್ತು ಸರ್ಕಾರಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಈ ವಿಚಾರದಲ್ಲಿ ಪುನಃ ಪರಿಶೀಲನೆ ಮಾಡಿ. ನಾನು ವಿಕೇಂದ್ರೀಕರಣದ ವಿರೋಧಿ ಅಲ್ಲ. ಡ್ರೈಲ್ಯಾಂಡ್ ಬೋರ್ಡಿಗೆ ತಾಂತ್ರಿಕ ಸಲಹೆ ಕೊಡಿ. ಅಲ್ಲಿಯೂ ಯಾವ ರೀತಿಯಾದ ಸಿಬ್ಬಂದಿಬೇಕು, ಆ ಸಿಬ್ಬಂದಿ ಇಲ್ಲ. ಸಿಬ್ಬಂದಿಯನ್ನು ಕೊಡಿ. ಈ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಜಲಾನಯನಕ್ಕೋಸ್ಕರ ಒಂದು ಪ್ರಾಧಿಕಾರವನ್ನು ಮಾಡಬೇಕು. ಆ ಜಲಾನಯನಕ್ಕೋಸ್ಕರ ಪ್ರಾಧಿಕಾರವನ್ನು ಮಾಡಿ ಎಲ್ಲಾ ಮೂಲಗಳಿಂದ ಬಂದಂತಹ ಹಣವನ್ನು ಅಲ್ಲಿಗೆ ಕಳುಹಿಸಿ ಒಂದು ಮಾಸ್ಟರ್ ಪ್ಲಾನ್ ಮಾಡಬೇಕು. ಅಲ್ಲಿ ಪ್ಲಾನಿಂಗ್ ಇಲ್ಲ, ಪ್ರೋಗ್ರಾಮ್ ಇಲ್ಲ. ಮತ್ತು ಒಂದೇ ಕಡೆ ಕಾನ್‌ಸೆಂಟ್ರೇಟೆಡ್ ಏರಿಯಾದಲ್ಲಿ ಈ ಕೆಲಸಗಳು ಆಗುತ್ತಿಲ್ಲ. ಇದರಿಂದ ಸರಿಯಾದ ಪರಿಣಾಮ ಆ ಜಲಾನಯನದಲ್ಲಿ ಆಗುತ್ತಿಲ್ಲ. ಆ ಕಾರಣಕ್ಕಾಗಿ ಒಂದು ಮೈಕ್ರೋ ವಾಟರ್ ಶೆಡ್ ಕಾನ್‌ಸೆಪ್ಟ್ ಏನು ಇದೆ, ಅಲ್ಲಿ ಬೇಕಾದರೆ ಒಂದೊಂದು ವರ್ಷದಲ್ಲಿ ಒಂದೊಂದು ಕ್ಲಸ್ಟರ್‌ನಲ್ಲಿ ಆ ಎಲ್ಲಾ ದುಡ್ಡನ್ನು ಖರ್ಚು ಮಾಡಿ ಆ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸಲಿಕ್ಕೆ ಹೊರಟರೆ ಖಂಡಿತವಾಗಿಯೂ ನಾವು ಆಯಾಯ ಕ್ಷೇತ್ರದಲ್ಲಿ ಸಾಧನೆ ಮಾಡಲಿಕ್ಕೆ ಸಾಧ್ಯತೆ ಇದೆ. ಹಾಗಾಗಿ ಮಾನ್ಯ ಕೃಷಿ ಸಚಿವರು ಬಂದಿದ್ದಾರೆ. ಈ ಜಲಾನಯನಕ್ಕೆ ಏನು ದುಡ್ಡು ಖರ್ಚು ಮಾಡುತ್ತೇವೆ, ಅದು ಗ್ರಾಮ ಪಂಚಾಯತಿಗಳ ಮುಖಾಂತರ ಮಾಡಿರಬಹುದು. ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಮತ್ತು ನಬಾರ್ಡ್ ಹಾಗೂ ಬೇರೆ ಬೇರೆ ಮೂಲಗಳಿಂದ ಬಂದಂತಹ ದುಡ್ಡನ್ನು ಒಂದೇ ಕಡೆಗೆ ಹಾಕಿ ಒಂದು ಮಾಸ್ಟರ್ ಪ್ಲಾನ್ ಮಾಡಿ ಯಾವ್ಯಾವ ಕಡೆಗೆ ಬರಗಾಲ ಇದೆ, ಯಾವ್ಯಾವ ಕಡೆಗೆ ನೀರಿನ ಮಟ್ಟ ಕೆಳಗಡೆ ಇಳಿದಿದೆ, ಅಲ್ಲಿ ಜಲಾನಯನ ಕೆಲಸಗಳನ್ನು ನಾವು ಆದ್ಯತೆಯ ಮೇರೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈಗ ಉದಾಹರಣಾರ್ಥವಾಗಿ ತಾವು ಮಂಡ್ಯ ಜಿಲ್ಲೆಯಿಂದ ಬಂದಂತಹವರು ಮಾನ್ಯ ಅಧ್ಯಕ್ಷರೆ,....

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ :- ಅಣ್ಣಾ ಹಜಾರೆಯವರು ಮಾಡಿದಂತಹ ಒಂದು ಸಾಧನೆಯನ್ನು ನೋಡಿ ಈ ರೀತಿ ಮಾಡುವುದು ಬಹಳ ಉತ್ತಮ ಎನ್ನುವಂತಹದ್ದು ನನ್ನ ಅಭಿಪ್ರಾಯ.

ಶ್ರೀ ಬಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಶಶಿಕಾಂತ ನಾಯಕ್ ಅವರು ಅಣ್ಣಾ ಹಜಾರೆ ಅವರ ಬಗ್ಗೆ ಪ್ರಸ್ತಾಪ ಮಾಡಿದರು. ಇವೆತ್ತು ನಾನೂ ಸಹ ಅಲ್ಲಿ ಅನೇಕ ಸಾರಿ ಹೋಗಿ ಬಂದಿದ್ದೇನೆ. ಆ ಹಳ್ಳಿಗೆ ಅಂದರೆ ಅವರ ಊರಿಗೆ ಹೋಗುವಲ್ಲಿ ಒಟ್ಟು 900 ಎಕರೆ ಜಮೀನು ಇದೆ. 900 ಎಕರೆಯಲ್ಲಿ ಈ ಜಲಾನಯವನ್ನು ಅಭಿವೃದ್ಧಿಪಡಿಸಿ 700 ಎಕರೆಯಲ್ಲಿ ಇವತ್ತು ನೀರಾವರಿ ಆ ಜಮೀನಿಗೆ ಸಿಗುತ್ತಿದೆ. ಇದು ಮಹಾ ದೊಡ್ಡ ಸಾಧನೆ. ಯಾವ ಸರ್ಕಾರಕ್ಕೂ ಮಾಡಲಿಕ್ಕೆ ಆಗದೇ ಇದ್ದಂತಹ ಸಾಧನೆಯನ್ನು ಒಬ್ಬ ವ್ಯಕ್ತಿ ಮಾಡಿದ್ದಾನೆ. ಇದು ಪ್ರಯೋಗಿಕ. ಇದು ವಾಸ್ತವಿಕವಾಗಿ ನೋಡಲಿಕ್ಕೆ ಸಿಗುತ್ತದೆ. ಹೀಗೆ ನಾನು ಹೇಳುವಂತಹ ಉದ್ದೇಶ ಎಂದರೆ ಎಲ್ಲಿ ನೀರಾವರಿ ಪ್ರದೇಶ ಇದೆ, ಅಲ್ಲಿ ಕೂಡ ದುಡ್ಡನ್ನು ಜಲಾನಯನಕ್ಕೆ ಖರ್ಚು ಮಾಡುತ್ತೀರಿ. ಈ ನೀರಾವರಿ ಇದ್ದ ಕಡೆಗೆ ಆ ಜಲಾನಯನಕ್ಕೆ ದುಡ್ಡು ಖರ್ಚು ಮಾಡುವುದರಲ್ಲಿ ಯಾವ ಅರ್ಥ ಇದೆ? ಉದಾಹರಣೆಗೆ ಗುಲ್ಬರ್ಗಾದಲ್ಲಿ ಒಂದು ಭಾಗ ಯುಕೆಪಿಗೆ ಬರುತ್ತದೆ. ಪ್ರತಿ ವರ್ಷ ಜಿಲ್ಲಾ ಪಂಚಾಯತ್‌ನಲ್ಲಿ ಯುಕೆಪಿಗೆ ಅಲ್ಲಿನ ದುಡ್ಡು ಖರ್ಚಾಗುತ್ತದೆ. ತಾಲ್ಲೂಕು ಪಂಚಾಯತಿಯವರೂ ಅಲ್ಲಿ ದುಡ್ಡು ಖರ್ಚು ಮಾಡುತ್ತಾರೆ. ಗ್ರಾಮ ಪಂಚಾಯತಿಯವರೂ ಅಲ್ಲಿ ಖರ್ಚು ಮಾಡುತ್ತಾರೆ. ಆ ದುಡ್ಡು ಎಲ್ಲಿ ಖರ್ಚಾಗಬೇಕು? ಎಲ್ಲಾ ಕಡೆಗೆ ನೀರಾವರಿ ಬಂದು ಬಿಟ್ಟಿದೆ. ಹಾಗಾಗಿ ನನ್ನ ಕಳಕಳಿ ಎಂದರೆ ಚಿತ್ರದುರ್ಗ ಆಗಿರಬಹುದು, ಗುಲ್ಬರ್ಗಾದ ಬೇರೆ ಭಾಗ ಆಗಿರಬಹುದು, ಬೀದರ್ ಆಗಿರಬಹುದು, ಎಲ್ಲಿ ಬರ ಪ್ರದೇಶ ಇದೇ ಅಲ್ಲಿ ಜಲಾನಯನ ಕೆಲಸಗಳನ್ನು ನಾವು ಆದ್ಯತೆಯ ಮೇರೆಗೆ ತೆಗೆದುಕೊಳ್ಳಬೇಕು. ಅದು ಕೋಲಾರವೇ ಆಗಿರಬಹುದು, ಅಲ್ಲಿ ತೆಗೆದುಕೊಂಡರೆ ನಿಜವಾಗಿಯೂ ಕೂಡ ಜಲಾನಯನದ ಒಂದು ಸಾಧನೆ ಮಾಡಿ ತೋರಿಸಲಿಕ್ಕೆ ಸಾಧ್ಯತೆ ಇದೆ. ಅಂತಹ ಒಂದು ಅವಕಾಶ ರಾಜ್ಯ ಸರ್ಕಾರಕ್ಕೆ ಇದೆ. ಅದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಕಳಕಳಿಯ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಾವು ಇಷ್ಟೊಂದು ದೇಶದಲ್ಲಿ ಕೃಷಿ ಬಗ್ಗೆ, ಮಾತನಾಡುತ್ತಿದ್ದೇವೆ. ಆದರೆ ನಾವು ನೀವು ಎಲ್ಲಾ ಜಯಪ್ರಕಾಶ್ ನಾರಾಯಣ ಅವರ ಚಳುವಳಿಯಿಂದ ಪ್ರೇರಿತರಾಗಿ ರಾಜಕಾರಣಕ್ಕೆ ಬಂದಂಥವರು. ಜಯಪ್ರಕಾಶ್ ನಾರಾಯಣ್ ಅವರು ಬಹಳ ಮುಖ್ಯವಾದ ಒಂದು ವಿಷಯವನ್ನು ಅವತ್ತಿನ ಸಮಯದಲ್ಲಿ ನಮ್ಮ ಎದುರುಗಡೆ ಇಟ್ಟಿದ್ದರು. ಇವತ್ತಿನ ಶಿಕ್ಷಣ ಪದ್ಧತಿ ಏನು ಇದೆ? ಆ ಶಿಕ್ಷಣ ಪದ್ಧತಿಯಲ್ಲಿ ಅಮೂಲಾಗ್ರವಾಗಿ ಬದಲಾವಣೆ ಆಗಲೇಬೇಕು ಎಂದು ಮಾನ್ಯ ಜಯಪ್ರಕಾಶ್ ನಾರಾಯಣ್ ಅವರು ಬಹಳ ಒತ್ತಿ ಒಂದು

ಮಾತನ್ನು ಹೇಳುತ್ತಿದ್ದರು. ಏಕೆ ಆ ಮಾತನ್ನು ಅವತ್ತಿನ ಸಂದರ್ಭದಲ್ಲಿ ಹೇಳಿದರು ಎಂದರೆ ಇವತ್ತು ಅನೇಕ ಶಾಲಾ – ಕಾಲೇಜುಗಳನ್ನು ತೆಗೆದಿದ್ದೇವೆ. ಅನೇಕರು ಡಿಗ್ರಿಗಳನ್ನು ಪಡೆದಿದ್ದಾರೆ. ರೈತರ ಮಕ್ಕಳೆಲ್ಲಾ ಓದಿ ಬಂದು ಅವರು ಜಮೀನಿಗೂ ಹೋಗುತ್ತಿಲ್ಲ. ಈ ಕಡೆ ಅವರಿಗೆ ನೌಕರಿಯೂ ಸಿಗುತ್ತಿಲ್ಲ. ಇಂತಹ ಹೊತ್ತಿನಲ್ಲಿ ಒಂದು ದೊಡ್ಡ ನಿರುದ್ಯೋಗಿ ಪಡೆ ಇವತ್ತು ನಮ್ಮ ದೇಶದಲ್ಲಿ ತಯಾರಾಗಿದೆ. ನನಗೆ ಒಂದು ಹೆದರಿಕೆ ಇದೆ. ಒಂದು ಸಮಯ ಬರುತ್ತದೆ. ನಮ್ಮ ನಿರುದ್ಯೋಗಿ ಯುವಕರು ಅವರು ಹತಾಶರಾಗಿ ಅವರೇ ಈ ದೇಶದಲ್ಲಿ ಬಹಳ ದೊಡ್ಡ ಅನಾಹುತವನ್ನು ಮಾಡಲಿಕ್ಕೆ ಮುಂದೆ ಆಗಬಹುದು. ಏಕೆಂದರೆ ಮನುಷ್ಯ ಹತಾಶನಾದಾಗ ಯಾವುದೇ ಕೆಲಸ ಮಾಡುವುದಕ್ಕೂ ಹೇಸುವುದಿಲ್ಲ. ಇವತ್ತು ನಕ್ಸಲ್ ಚಳುವಳಿಯು, ಅದರ ಒಂದು ಪ್ರತಿರೂಪ ಎಂದು ನಾನು ಹೇಳಬೇಕಾಗುತ್ತದೆ. ಹಾಗಾಗಿ, ಇವೊತ್ತು ಸರ್ಕಾರದವರು ಬಹಳ ಗಂಭೀರವಾಗಿ ವಿಚಾರ ಮಾಡಬೇಕು. ನಾವು ಈ ಶಿಕ್ಷಣ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ತಂದು ನಮ್ಮ ಕೃಷಿ ಶಾಲೆಗಳನ್ನು ಎಲ್ಲಾ ಕಡೆಗಳಲ್ಲೂ ತೆರೆಯಬೇಕು. ಕೃಷಿ ಶಾಲೆಗಳನ್ನು ತೆರೆಯದಿದ್ದರೆ ನಮ್ಮ ಮುಂದಿನ ಮಕ್ಕಳಿಗೆ ಭವಿಷ್ಯ ಇಲ್ಲವೆಂಬ ಮಾತನ್ನು ಎಲ್ಲರೂ ಮನಗಾಣಬೇಕಾಗುತ್ತದೆ. ಏಕೆಂದರೆ, ವಾಸ್ತವಿಕವಾಗಿ ನಾವು ನೋಡುತ್ತಿದ್ದೇವೆ. ದೇಶ ಸ್ವಾತಂತ್ರ್ಯಗೊಂಡು ಇಲ್ಲಿಯವರೆಗೆ 54 ವರ್ಷಗಳಾದರೂ ಕೂಡ ಕರ್ನಾಟಕದಲ್ಲಿ ಒಂದೂ ಕೂಡ ಕೃಷಿ ಶಾಲೆಗಳಿಲ್ಲ. ಎಲ್ಲರೂ ಹೋಗಬೇಕಾದರೆ ಅದೇ ಪಾರಂಪರಿಕ ಪದ್ಧತಿಯಲ್ಲಿ ಶಾಲೆಗೆ ಹೋಗುತ್ತಾರೆ, ಕಲಿಯುತ್ತಾರೆ, ಓದುತ್ತಾರೆ, ಪಾಸಾಗುತ್ತಾರೆ. ನೌಕರಿ ಬೇಡುತ್ತಾರೆ. ನೌಕರಿ ಸಿಗದಿದ್ದಾಗ ಯಾವುದೋ ಒಂದು ರಾಜಕೀಯ ಪಕ್ಷಕ್ಕೆ ಸೇರುತ್ತಾರೆ. ಇಲ್ಲದಿದ್ದರೆ anti - social elements ಆಗಿ ಇಡೀ ಸಮಾಜಕ್ಕೆ ಹೊರೆಯಾಗುತ್ತಾರೆ. ಈ ಒಂದು ಪದ್ಧತಿಯನ್ನು ಬದಲಾವಣೆ ಮಾಡುವುದಕ್ಕೋಸ್ಕರ ನಮಗೊಂದು ಒಳ್ಳೆಯ ಅವಕಾಶವಿದೆ. ಇವೊತ್ತು ಕೂಡ ನಮ್ಮ ಎಲ್ಲಾ ದಾಖಲೆಗಳಿಂದ ಗೊತ್ತಾಗುವುದೇನೆಂದರೆ, agriculture is the only biggest sector for the employment ಎನ್ನುವುದನ್ನು ನಾವ್ಯಾರೂ ಕೂಡ ಮರೆಯಲು ಸಾಧ್ಯವಿಲ್ಲ. ಮರೆಯಲೂ ಬಾರದು. ಇವೊತ್ತು ಏನಾದರೂ ಉದ್ಯೋಗ ಹುಡುಕಬೇಕಾಗಿದ್ದರೆ, ನಮ್ಮ ಜನರಿಗೆ ಏನಾದರೂ ಕೆಲಸ ಕೊಡಬೇಕಾಗಿದ್ದರೆ, ಕೃಷಿ ಭೂಮಿಯನ್ನು ದೊಡ್ಡ ಕ್ಷೇತ್ರವಾಗಿ ಇವೊತ್ತು ಅದನ್ನು ಪರಿವರ್ತನೆ ಮಾಡಿಕೊಳ್ಳಬೇಕಾಗಿದ್ದರೆ ನಮ್ಮಲ್ಲಿ ಶಿಕ್ಷಣ ಪದ್ಧತಿಯಲ್ಲೂ ಕೂಡ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ, ಮಾನ್ಯ ಕೃಷಿ ಸಚಿವರಾದ ಮಾನ್ಯ ಶ್ರೀನಿವಾಸಗೌಡರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿಮಗೊಂದು ಒಳ್ಳೆಯ ಅವಕಾಶವಿದೆ. ನಿಮ್ಮ ಕಾಲದಲ್ಲಿ ಎಲ್ಲೆಲ್ಲಿ ಕೃಷಿ ಶಾಲೆಗಳನ್ನು ತೆರೆಯಲು ಸಾಧ್ಯತೆ ಇದೆಯೋ ಅಲ್ಲೆಲ್ಲ ತೆರೆಯಿರಿ. ಏಕೆಂದರೆ, ಮಾನ್ಯ ಅಧ್ಯಕ್ಷರೆ, ಅನೇಕ ರೈತರ ಮಕ್ಕಳು ಓದಿ ಬಂದಿದ್ದಾರೆ.

ಎಂ.ಎ. ಪಾಸಾಗಿದ್ದಾರೆ. ಅವರು ಮತ್ತೆ ಕೃಷಿ ಮಾಡುವುದಕ್ಕೆ ಹೋಗಬೇಕಾದರೆ ಅವರಿಗೆ ಆ ಕೃಷಿ ಬಗ್ಗೆ ಕಾಳಜಿಯೂ ಇಲ್ಲ ಮತ್ತು ಅಲ್ಲಿ ಪ್ರಾಕ್ಟಿಕಲ್ ಅವರಿಗೆ ಏನೂ ಕೂಡ ಗೊತ್ತಿಲ್ಲ. ಮತ್ತು ಕೃಷಿ ಎಂದ ಕೂಡಲೇ ಅವರಿಗೆ ಏನೋ ಒಂದು ನಾಚಿಕೆಯಾಗುವಂಥ ಒಂದು ಭಾವನೆ ಬರುತ್ತದೆ. ಜಮೀನಿಗೆ ಹೋಗುವುದಾದರೆ, ನನ್ನ ಮರ್ಯಾದೆ ಕಡಿಮೆಯಾಗುತ್ತದೆ. ನಾನು ಓದಿದವನು, ಬರೆದವನು, ನಾನು ನೌಕರಿಯನ್ನೇ ಮಾಡಬೇಕು ಎಂಬ ಭಾವನೆ ಬರುತ್ತದೆ. ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಎಷ್ಟು ಜನರಿಗೆ ನೌಕರಿಯನ್ನು ಕೊಡಲು ಸಾಧ್ಯ? ಈಗಾಗಲೇ ಈ ದೇಶದಲ್ಲಿ ಬಹಳಷ್ಟು ನಿರುದ್ಯೋಗಿಗಳಿದ್ದಾರೆ. Employment Exchange ನಿಂದ ಮಾತ್ರ ಎಷ್ಟು ಜನ ನಿರುದ್ಯೋಗಿಗಳಿದ್ದಾರೆಂಬುದನ್ನು ಗುರ್ತಿಸುವುದಕ್ಕೆ ಸಾಧ್ಯವಿದೆ. ಆದರೆ, ಬಹಳ ಜನರು Employment Exchange ನಲ್ಲಿ ತಮ್ಮ ಹೆಸರನ್ನು ನೋಂದಾಯಿಸುವುದನ್ನು ಬಿಟ್ಟಿದ್ದಾರೆ. ಏಕೆಂದರೆ ನೌಕರಿಯೇ ಸಿಗುವುದಿಲ್ಲ. ಇಂತಹ ಒಂದು ಗಂಭೀರವಾದ ಪರಿಸ್ಥಿತಿಯಲ್ಲಿ ಮಾನ್ಯ ಕೃಷಿ ಸಚಿವರು ಒಂದು ಧೈರ್ಯವಾದ ನಿರ್ಣಯ ತೆಗೆದುಕೊಂಡು ಪ್ರತಿಯೊಂದು ತಾಲ್ಲೂಕಿನಲ್ಲಿ ಕೃಷಿ ಶಾಲೆಗಳನ್ನು ತೆರೆದು ಆ ಪಾಠದ ಜೊತೆಗೆ ಅವರು ಕೃಷಿಯನ್ನೂ ಕೂಡ ಕಲಿಯುವಂಥ ಒಂದು ಒಳ್ಳೆಯ ಅವಕಾಶ ಕಲ್ಪಿಸಿಕೊಟ್ಟರೆ ಕೃಷಿ ಬಗ್ಗೆ ಅವರಿಗೆ ಬೇರೆ ಭಾವನೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಅವರು ಮನೆಗಳಿಗೆ ಹೋಗಿ ತಂದೆ–ತಾಯಿಂದಿರಿಗೆ ಸಹಾಯ ಮಾಡಿ ಆ ಭೂಮಿ ಮೇಲೆ ಬದುಕುವಂಥ ಒಂದು ಮನಸ್ಸು ಮಾಡುವುದಕ್ಕೆ ಸಾಧ್ಯತೆಯಿದೆ. ಅಂತಹ ಒಂದು ವಿಚಾರವನ್ನು ನಾನು ಇವೊತ್ತು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇವೊತ್ತು ಐಟಿ, ಬಿಟಿ ಬಗ್ಗೆ ಬಹಳ ಕನಸು ಕಾಣುತ್ತಿದ್ದೇವೆ. ಎಷ್ಟು ಜನ ಐಟಿ, ಬಿಟಿಯವರಿಗೆ ಉದ್ಯೋಗ ಕೊಡುವುದಕ್ಕೆ ಸಾಧ್ಯವಿದೆ? ಬೆಂಗಳೂರು ಅಂದರೆ ಈ ಐಟಿ, ಬಿಟಿಯವರಿಗೆ ಒಂದು ಸ್ವರ್ಗಲೋಕವಾಗಿದೆ. ಯಾರ ಮಕ್ಕಳು ಐಟಿ, ಬಿಟಿಯಲ್ಲಿ ಓದಿದ್ದಾರೆ, ಶ್ರೀಮಂತರ ಮಕ್ಕಳು, ಅನುಕೂಲಸ್ಥರ ಮಕ್ಕಳು, ಪಟ್ಟಣ ಪ್ರದೇಶದಲ್ಲಿ ಓದಿರುವಂಥ ಮಕ್ಕಳು, ಅವರಿಗೆ ಮಾತ್ರ ಇವೊತ್ತು ಇಲ್ಲಿ ಉದ್ಯೋಗ ಸಿಗುತ್ತಿದೆ. ಆ ಕ್ಷೇತ್ರದಲ್ಲಿ ಇವೊತ್ತು ಕರ್ನಾಟಕಕ್ಕೆ ದೊಡ್ಡ ಸಾಧನೆ ಸಿಕ್ಕಿದೆ, ಅದರ ಬಗ್ಗೆ ನಮಗೆ ಅಭಿಮಾನವಿದೆ. ಆದರೆ, ಇವೊತ್ತು ಹಳ್ಳಿಗಾಡಿನಲ್ಲಿರುವ ಬಡವರ ಮಕ್ಕಳು, ಕೂಲಿ ಮಾಡುವವರ ಮಕ್ಕಳು, ರೈತರ ಮಕ್ಕಳು, ಅವರ ನಿರುದ್ಯೋಗ ಸಮಸ್ಯೆ ಬಗೆಹರಿಯಬೇಕಿದ್ದರೆ, ಇವೊತ್ತು ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಬೇಕಾದ ಅನಿವಾರ್ಯ ಪರಿಸ್ಥಿತಿ ಬಂದಿರುವುದರಿಂದ ಮಾನ್ಯ ಸರ್ಕಾರದವರು ಈ ವಿಷಯಗಳ ಬಗ್ಗೆ ಗಂಭೀರವಾದ ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇನ್ನೂ ಅನೇಕ ವಿಷಯಗಳನ್ನು ಮಾತನಾಡಬೇಕಿದ್ದರೂ ಸಮಯದ ಅಭಾವವಿರುವುದರಿಂದ ತಮಗೆ ವಂದನೆ ಸಲ್ಲಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

(x) **ಶ್ರೀ ಶಿವರಾಜ ಸಜ್ಜನರ್ (ಹಾವೇರಿ)** :- ಸನ್ಮಾನ್ಯ ಸಭಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ, ಕೃಷಿ ಇಲಾಖೆಯ ಸಮಸ್ಯೆಗಳ ಬಗ್ಗೆ ಮತ್ತು ಶಿಕ್ಷಣ ಇಲಾಖೆಯ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಗಮನವನ್ನು ಸೆಳೆಯುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಭಾರತ ರಾಷ್ಟ್ರದಲ್ಲಿ ನೂರಕ್ಕೆ ಎಪ್ಪತ್ತರಷ್ಟು ಜನ ರೈತರು ಕೃಷಿಯನ್ನೇ ಅವಲಂಬಿಸಿ ಇವೊತ್ತಿನ ದಿವಸ ಜೀವನ ಸಾಗಿಸುತ್ತಿದ್ದಾರೆ. ಅನೇಕ ಜನ ನಾಯಕರು ಮಾತನಾಡುವಾಗ ಭಾಷಣ ಮಾಡುವಾಗ ರೈತನೇ ನಮ್ಮ ದೇಶದ ಬೆನ್ನೆಲುಬು. ರೈತ ಒಕ್ಕದಿದ್ದರೆ ಜಗವೆಲ್ಲಾ ಬಿಕ್ಕುವುದು, ರೈತನೇ ನಮ್ಮ ದೇಶಕ್ಕೆ ಅನ್ನ ಹಾಕುವಂಥ ದೇವರು ಎಂದು ಇವೊತ್ತು ಕೇವಲ ಮಾತುಗಳಲ್ಲಿ ರೈತರಿಗೆ ಪ್ರೋತ್ಸಾಹ ಕೊಡುತ್ತಿದ್ದೇವೆ. ಆದರೆ, ನಿಜವಾಗಿಯೂ ಇವೊತ್ತು ರೈತ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾನೆ. ಭೀಕರವಾದ ಬರಗಾಲ ಒಂದು ಕಡೆ, ಸರ್ಕಾರ ರೈತನಿಗೆ ಸೌಲಭ್ಯಗಳನ್ನು ಕೊಡುವಲ್ಲಿ ಸಂಪೂರ್ಣ ವಿಫಲವಾಗಿರುವುದರಿಂದ ಅನೇಕ ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿರುವುದಕ್ಕೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ರೈತ ವಿರೋಧಿ ನೀತಿಗಳೇ ಕಾರಣವೆಂದು ಇವೊತ್ತು ಘಂಟಾಘೋಷವಾಗಿ ಹೇಳಲೇಬೇಕಾಗುತ್ತದೆ. ನಾವು ರೈತರಿಗೆ ಮೂಲಭೂತವಾಗಿ ನೀರಾವರಿ ಯೋಜನೆಗಳನ್ನು, ಉತ್ತಮ ಗುಣಮಟ್ಟದ ಬೀಜ ಮತ್ತು ಉತ್ತಮ ಗೊಬ್ಬರವನ್ನು ನಾವು ಪೂರೈಸಿದರೆ ಮಾತ್ರ ರೈತ ಉತ್ತಮ ಬೆಳೆ ಪಡೆದು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಆದರೆ, ದುರ್ದೈವದಿಂದ ನಮ್ಮ ರಾಜ್ಯದಲ್ಲಿ ಕಳಪೆ ಗೊಬ್ಬರದ ಹಾವಳಿ, ಕಳಪೆ ಮಟ್ಟದ ಬೀಜದ ಪೂರೈಕೆಯಿಂದ ಇವೊತ್ತು ರೈತರು ಸಂಪೂರ್ಣ ದಿವಾಳಿ ಎದ್ದು, ಮನೆ-ಮಠಗಳನ್ನು ಸಂಪೂರ್ಣ ಮಾರಿಕೊಂಡು ಗುಳೆ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಜಿಲ್ಲೆಯಲ್ಲಿ ಮಹಿಕೋ ಕಂಪನಿಯ ಚಮತ್ಕಾರ್ ಹತ್ತಿಯನ್ನು ಕಳೆದ ಸಾಲಿನಲ್ಲಿ 20 ಸಾವಿರ ಎಕರೆ ಪ್ರದೇಶದಲ್ಲಿ ಬಿತ್ತಿದ್ದರು. ಆದರೆ, ಯಾರ ಹೊಲದಲ್ಲಿಯೂ ಕೂಡ ಪ್ರತಿ ಎಕರೆಗೆ ಒಂದು ಕ್ವಿಂಟಾಲ್ ಹತ್ತಿಯನ್ನೂ ಕೂಡ ಅಲ್ಲಿ ಬೆಳೆಯಲು ಸಾಧ್ಯವಾಗಲಿಲ್ಲ. ಮಹಿಕೋ ಕಂಪನಿಯವರು ಕಳಪೆ ಮಟ್ಟದ ಚಮತ್ಕಾರ್ ಹತ್ತಿ ಬೀಜವನ್ನು ರೈತರಿಗೆ ಕೊಟ್ಟಿದ್ದರಿಂದ ಅದನ್ನು ಹಾಕಿದಂಥ ರೈತರು ಸಂಪೂರ್ಣ ದಿವಾಳಿ ಎದ್ದಿದ್ದರು. ಕಳೆದ ಡಿಸೆಂಬರ್‌ನಿಂದ ನಿರಂತರವಾಗಿ ಆರು ತಿಂಗಳ ಕಾಲ ಆ ಜಿಲ್ಲೆಯಲ್ಲಿ ರೈತರು ಧರಣಿ, ಸತ್ಯಾಗ್ರಹ ಮಾಡಿದರು. ಮಹಿಕೋ ಕಂಪನಿಗೆ ಮುತ್ತಿಗೆ ಹಾಕಿ ಆ ಕಂಪನಿಯ ವ್ಯವಹಾರವನ್ನೂ ಕೂಡ ಸ್ಥಗಿತಗೊಳಿಸುವಲ್ಲಿ ರೈತರು ಸಫಲರಾದರು. ಸನ್ಮಾನ್ಯ ಕೃಷಿ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಅನೇಕ ಸಭೆಗಳು ನಡೆದವು. ರೈತರಿಗೆ ಪ್ರತಿ ಎಕರೆಗೆ ಮಹಿಕೋ ಕಂಪನಿಯವರು

(x) ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಶೀಲಿಸಲ್ಪಟ್ಟಿದೆ.

ಎರಡೂವರೆ ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ನಿರ್ಣಯವಾಗಿ ಕಳೆದ ಮೇ ತಿಂಗಳ 31ರೊಳಗಾಗಿ ಹಾವೇರಿ ಜಿಲ್ಲಾಧಿಕಾರಿಗಳ ಖಾತೆಗೆ ಮುಂಗಡವಾಗಿ ಎರಡು ಕೋಟಿ ರೂಪಾಯಿಗಳನ್ನು ಕಟ್ಟಬೇಕೆಂದು ಸನ್ಮಾನ್ಯ ಕೃಷಿ ಮಂತ್ರಿಗಳು ಆದೇಶ ಮಾಡಿದ್ದರು. ಇವೊತ್ತಿಗೂ ಆ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಕಟ್ಟಿದ್ದಾರೆ. ಆದರೆ, ಯಾವ ರೈತರಿಗೂ ಕೂಡ ಇವೊತ್ತಿನವರೆಗೂ ಪರಿಹಾರ ಸಿಗದೆ ಆ ರೈತರು ಕೇಂದ್ರ ಸ್ಥಳಕ್ಕೂ, ರಾಜ್ಯಕ್ಕೂ ಹಾಗೂ ರಾಣೆಬೆನ್ನೂರಿಗೂ, ಹಾವೇರಿ ಜಿಲ್ಲಾಧಿಕಾರಿ ಕಚೇರಿಗೂ ಅಲೆದಲೆದು ಇವೊತ್ತು ಸಂಕಷ್ಟದ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಇವೊತ್ತಿಗೂ ಕೂಡ ಪರಿಹಾರ ಕೊಡಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳಲೇಬೇಕಾಗಿದೆ. ಇಪ್ಪತ್ತು ಸಾವಿರ ಎಕರೆ ಪ್ರದೇಶದಲ್ಲಿ ಬೆಳೆದಂಥ ರೈತರಿಗೆ ಸುಮಾರು 5 ಕೋಟಿ ಚಿಲ್ಲರೆ ಹಣವನ್ನು ಮಹಿಕೋ ಕಂಪನಿಯವರು ಕೊಡಬೇಕಾಗಿದೆ. ಅದನ್ನು ತಕ್ಷಣ ಕೊಡಿಸಬೇಕೆಂದು ನಾನು ತಮ್ಮ ಮುಖಾಂತರ ಸನ್ಮಾನ್ಯ ಕೃಷಿ ಮಂತ್ರಿಗಳಿಗೆ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು, ಹಾವೇರಿ ಜಿಲ್ಲೆ ಬೀಜೋತ್ಪಾದನೆಗೆ ಜಗತ್ಪ್ರಸಿದ್ಧವಾಗಿದೆ. ಏಷ್ಯಾ ಖಂಡದಲ್ಲಿಯೇ ಗುರ್ತಿಸಿಕೊಂಡಿರುವಂಥ ರಾಣೆಬೆನ್ನೂರಿನ ನೂರಾರು ಕಂಪನಿಗಳು ಜಗತ್ಪ್ರಸಿದ್ಧವಾದ ಅನೇಕ multi-national companies ಅಲ್ಲಿ ಬೀಜೋತ್ಪಾದನೆ ಮಾಡುತ್ತಿವೆ. ಆದರೆ, ಇಷ್ಟೆಲ್ಲಾ ವ್ಯವಸ್ಥೆ ನಮ್ಮ ಹಾವೇರಿ ಜಿಲ್ಲೆಯಲ್ಲಿದ್ದರೂ ಕುಡ ನಮ್ಮ ಜಿಲ್ಲೆಯಲ್ಲಿ ಕಳಪೆ ಮಟ್ಟದ ಬೀಜದ ಪೂರೈಕೆ ಮತ್ತು ಲೂಸ್ ಪ್ಯಾಕೆಟ್ ಇರುವಂಥ ಬೀಜಗಳ ಮಾರಾಟದಿಂದ ಅನೇಕ ಜನ ರೈತರು ಇವೊತ್ತು ದಿವಾಳಿ ಎದ್ದು ಕಳಪೆ ಮಟ್ಟದ ಬೀಜವನ್ನು ರೈತರು ಅಲ್ಲಿ ಹಾಕುತ್ತಿರುವುದರಿಂದ ಉತ್ತಮವಾದ ಇಳುವರಿ ಪಡೆಯದೆ ಅನೇಕ ರೈತರು ಅಲ್ಲಿ ದಿವಾಳಿ ಏಳುತ್ತಿದ್ದಾರೆ. ಅದಕ್ಕೋಸ್ಕರ ಈ ಎಲ್ಲಾ ಬೀಜಗಳ ಲೂಸ್ ಮಾರಾಟವನ್ನು ತಕ್ಷಣ ತಾವು ಬಂದ್ ಮಾಡಬೇಕು. ಎಲ್ಲಾ ರೈತರಿಗೆ ಉತ್ತಮ ಗುಣಮಟ್ಟದ, ಉತ್ತಮ ಮೊಳಕೆ ಬರುವಂಥ ಹೆಚ್ಚು ಇಳುವರಿ ಬರುವಂಥ ಬೀಜದ ಪೂರೈಕೆಯನ್ನು ಸರ್ಕಾರ ಮಾಡುವಲ್ಲಿ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸಬ್ಸಿಡಿ ಮೂಲಕ ಇವತ್ತು ಕೃಷಿ ಇಲಾಖೆಯಲ್ಲಿ ಬೀಜಗಳನ್ನು ಮಾರಾಟ ಮಾಡುತ್ತಿದ್ದಾರೆ. ಅನೇಕ ಬೀಜಗಳ ಲೂಸ್ ಪ್ಯಾಕೇಟ್‌ಗಳನ್ನು ಮತ್ತು ಕಳಪೆ ಮಟ್ಟದ ಬೀಜಗಳನ್ನು ಅಲ್ಲಿ ಕೃಷಿ ಇಲಾಖೆಯವರು ಹಂಚಿಕೆ ಮಾಡುತ್ತಿದ್ದಾರೆ. ಅವುಗಳನ್ನು ಟೆಸ್ಟ್ ಮಾಡಲಿಲ್ಲ, ಅವುಗಳ ಗುಣಧರ್ಮವನ್ನು ಟೆಸ್ಟ್ ಮಾಡಲಿಲ್ಲ, ಅವುಗಳನ್ನು ಡೆಮಾನ್‌ಸ್ಟ್ರೇಷನ್ ಮಾಡುವುದರ ಮೂಲಕ..

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :- ಮಾನ್ಯ ಅಧ್ಯಕ್ಷರೆ; ಒಂದು ನಿಮಿಷ ಈಲ್ಡ್ ಆಗುವುದಾದರೆ, ಕಳಪೆ ಬೀಜವನ್ನೇನಾದರೂ ಮಾರಿದ್ದೇ ಆದರೆ ಅವರು ಯಾರ

ಬಗ್ಗೆಯಾದರೂ ಸ್ಪೆಸಿಫಿಕ್ ಆಗಿ ಹೇಳಿದರೆ ಅವರನ್ನು ಜೈಲಿಗೆ ಹಾಕಲು ಕೂಡ ಸರ್ಕಾರ ಸಿದ್ಧವಾಗಿದೆ. ಇದನ್ನು ನಾನು ಅನೇಕ ಸಾರಿ ಹೇಳುತ್ತಿದ್ದೇನೆ. ಇದನ್ನು ಲೋಕಾರೂಢಿಯಾಗಿ ಹೇಳುವಂಥದ್ದು ತಪ್ಪಾಗುತ್ತದೆ. ಅದು ಕೆಟ್ಟ ಮೆಸೇಜ್ ಹೋಗುತ್ತದೆ. ಯಾವುದಾದರೂ ಸ್ಪೆಸಿಫಿಕ್ ಆಗಿ ಹೇಳಿ. ನಾವು ಅವರನ್ನು ಜೈಲಿಗೆ ಹಾಕುತ್ತೇವೆ. ಮೂರು ದಿವಸದ ಹಿಂದೆ ಕೋಲಾರ ತಾಲ್ಲೂಕಿನಲ್ಲಿ ಕಳಪೆ ಗೊಬ್ಬರ ಮಾರಾಟ ಮಾಡಿದ್ದರು. ಅವರಿಬ್ಬರೂ ಈಗ ಜೈಲಿನಲ್ಲಿದ್ದಾರೆ. ಇದನ್ನು ದಯವಿಟ್ಟು ಸ್ಪೆಸಿಫಿಕ್ ಆಗಿ ಹೇಳಿದರೆ ಏನು ಬೇಕಾದರೂ ಸರ್ಕಾರ ಕ್ರಮ ಜರುಗಿಸುತ್ತದೆ.

ಶ್ರೀ ಎಸ್. ಶಿವಾನಂದ ಪಾಟೀಲ್ :– ಅದಕ್ಕೆ ಪ್ರಾವಿಜನ್ ಎಲ್ಲಿದೆ? ಅದರಲ್ಲಿ ಎಷ್ಟು ಕನ್‌ವಿಕ್ಟ್ ಆಗಿದೆ?

ಅಧ್ಯಕ್ಷರು :– ಏನಾಗಿದೆ ಎಂದರೆ, ಅಲ್ಲಲ್ಲಿ ಕಳಪೆ ಇದೆ ಎಂದು ಸಾಮಾನ್ಯ ರೈತರು ಹೇಳುತ್ತಲೇ ಇರುತ್ತಾರೆ. ನಿಖರವಾಗಿ ಯಾರು ಮಾರಾಟ ಮಾಡಿದ್ದಾರೆ, ಏನು ಎಂಬುದು ಗೊತ್ತಿರುವುದಿಲ್ಲ. ಅಂಥ ಸಂದರ್ಭ ಬಂದಾಗ ನೀವು ಸ್ವಲ್ಪ ಎಚ್ಚರವಾಗಿ ತನಿಖೆ ಮಾಡಿಸಿ ಯಾರು ಆ ರೀತಿ ಬಿಸ್‌ನೆಸ್‌ನಲ್ಲಿ ಇನ್‌ವಾಲ್ವ್ ಆಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನೀವು ಚಾರ್ಜ್ ಮಾಡುವಾಗಲೇ ಸ್ಪೆಸಿಫಿಕ ಆಗಿ ಚಾರ್ಜ್ ಮಾಡಿ ಎಂದರೆ ಹೇಗೆ?

ಶ್ರೀ ಎಸ್. ಶಿವಾನಂದ ಪಾಟೀಲ್ :– ಅದರಲ್ಲಿ ಎಷ್ಟು ಕನ್‌ವಿಕ್ಷನ್ ಆಗಿದೆ ಅದನ್ನಾದರೂ ಅವರು ಹೇಳಲಿ ಬೇಕಾದರೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ್ :– ಮಾನ್ಯ ಅಧ್ಯಕ್ಷರೆ, ನನ್ನ ಹುಕ್ಕೇರಿ ಕ್ಷೇತ್ರದಲ್ಲಿ ಕಬ್ಬೂರದೊಳಗಿನ ಒಂದು ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿದೆ. ಸಾವಯವ ಗೊಬ್ಬರ ಕೊಡುವಂಥದ್ದರಲ್ಲಿ ಎರಡು ನೂರು ಚೀಲಗಳಲ್ಲಿ ಐದರಿಂದ ಹತ್ತು ಕೆ.ಜಿ. ಕಡಿಮೆ ಕೊಟ್ಟಂಥ ಪ್ರಕರಣ ಅಲ್ಲೇ ಬಿಟ್ಟುಹೋಯಿತು, ಮುಚ್ಚು ಹಾಕಿಹೋಯಿತು. ಅದನ್ನೂ ಸಹ ಇವತ್ತು ತನಿಖೆ ನಡೆಸಿ. ಮಹಾರಾಷ್ಟ್ರದಿಂದ ಅದನ್ನು ತಂದುಕೊಡುವಂತವರು ಅವರು. ಇವತ್ತು ಸಾವಯವ ಗೊಬ್ಬರ ಎಂದು ಇದೆ. ಅದೇ ರೀತಿ ಸಾಕಷ್ಟು ಮಣ್ಣನ್ನು ಸಹಿತ ತಂದು ಮಾರುವಂಥ ಅನೇಕ ಉದಾಹರಣೆಗಳು ಇವೆ.

ಶ್ರೀ ಶಿವರಾಜ್ ಸಜ್ಜನರ್ :– ಕಳೆದ ಸಾಲಿನಲ್ಲಿ ಹೆಸರು ಬೀಜ ಕಳಪೆ ಮಟ್ಟದ ಬೀಜದ ಪೂರೈಕೆಯಿಂದ ಹೆಸರು ಕಾಯಿಯೇ ಬಿಡಲಿಲ್ಲ, ಅದನ್ನು ಕಳೆದ ವಿಧಾನ ಸಭೆಯ ಅಧಿವೇಶನದಲ್ಲಿ ಮಾತನಾಡಿದರೂ ಕೂಡ ಅದರ ಬಗ್ಗೆ ಏನೂ ಕ್ರಮವಾಗಲಿಲ್ಲ. ಈಗ ಚಮತ್ಕಾರ ಹತ್ತಿಯದನ್ನೇ ತೆಗೆದುಕೊಳ್ಳಿ. ಚಮತ್ಕಾರ ಹತ್ತಿಯ ಕಳಪೆ ಮಟ್ಟದ ಬೀಜ

ಪೂರೈಕೆಯಾಗಿದೆಯೆಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೃಷಿ ತಜ್ಞರನ್ನು, ಕೃಷಿ ಇಲಾಖೆಯ ಅಧಿಕಾರಿಗಳಿಂದ ಅಲ್ಲಿ ತನಿಖೆ ಮಾಡಿಸಿದರು. ಅದು ಕಳಪೆ ಮಟ್ಟದ ಬೀಜ ಪೂರೈಕೆಯಾಗಿದೆಯೆಂದು ಈಗಾಗಲೇ ಸಾಬೀತಾಗಿದೆ. ಆದರೆ ಆ ಕಂಪನಿಯ ಮೇಲೆ ಇದುವರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆರು ತಿಂಗಳಿಂದ ಅದರ ಪರಿಹಾರವನ್ನೂ ಕೊಟ್ಟಿಲ್ಲ. ಮಾನ್ಯ ಸಚಿವರು ಇದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಬೇಕು. ನಾವು ಕಳೆದ ವರ್ಷ ಕೂಡ ಈ ಹೆಸರು ಬೀಜ ಕಳಪೆ ಮಟ್ಟದ್ದು ಪೂರೈಕೆಯಾಗಿದ್ದರ ಬಗ್ಗೆ ಮಾತನಾಡಿದ್ದೇವೆ. ಈ ವರ್ಷ ಕೂಡ ಈ ಕೃಷಿ ಇಲಾಖೆಗೆ ಪೂರೈಕೆ ಮಾಡುವಂಥ ಬೀಜ ಸರಿಯಾದಂಥ ಗುಣಮಟ್ಟವನ್ನು ಹೊಂದಿದೆಯೋ ಇಲ್ಲವೋ, ಅಥವಾ ಸರಿಯಾದ ಇಳುವರಿಯನ್ನು ಕೊಡುತ್ತದೋ ಇಲ್ಲವೋ ಎಂಬ ಬಗ್ಗೆ ನಾವು ಮೊದಲು ತಿಳಿದುಕೊಂಡು ಡೆಮಾನ್‌ಸ್ಟ್ರೇಷನ್ ಪ್ಲಾಂಟ್‌ಗಳನ್ನು ಹಾಕಿ ಅದನ್ನು ರೈತರಿಗೆ ಕೊಟ್ಟಾಗ ಮಾತ್ರ ರೈತ ಉತ್ತಮ ಇಳುವರಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇವತ್ತು ಗೋವಿನ ಜೋಳದ ಉದಾಹರಣೆಯನ್ನು ತಮಗೆ ಕೊಡಬೇಕೆಂದರೆ, ಒಂದುನೂರು ರೂಪಾಯಿಗೂ ಐದು ಕೆ.ಜಿ ಪ್ಯಾಕೇಟ್ ಸಿಗುತ್ತಿದೆ. 450 ರೂಪಾಯಿಗೂ ಒಂದು ಪ್ಯಾಕೇಟ್ ಸಿಗುತ್ತಿದೆ, ಎರಡು ನೂರು ರೂಪಾಯಿಗೂ ಒಂದು ಕೆ.ಜಿ. ಪಾಕೇಟ್ ಸಿಗುತ್ತಿದೆ. ಇದರಲ್ಲಿ ಯಾವುದು ಉತ್ತಮ ಗುಣಮಟ್ಟವನ್ನು ಹೊಂದಿದೆ, ಯಾವ ಪ್ಯಾಕೇಟ್ ಯಾವ ಕಂಪನಿಯ ಬೀಜ ಹೆಚ್ಚಿನ ಇಳುವರಿಯನ್ನು ಕೊಡುತ್ತಿದೆ ಎಂಬ ಬಗ್ಗೆ ಕೃಷಿ ಇಲಾಖೆಯಲ್ಲಿ ಯಾವುದೇ ಮಾಹಿತಿ ಇಲ್ಲ. ಅದಕ್ಕೆ ನಾವು ಕೃಷಿ ಇಲಾಖೆಗೆ ಪೂರೈಸುವಂಥ ಬೀಜದ ಗುಣಮಟ್ಟವನ್ನು ಅದು ಏನು ಇಳುವರಿ ಕೊಡುತ್ತಿದೆ, ಏನು ಗುಣಮಟ್ಟ ಇದೆ ಎಂಬ ಬಗ್ಗೆ ನಾವು ಕೂಲಂಕಷವಾಗಿ ಡೆಮಾನ್‌ಸ್ಟ್ರೇಷನ್ ಮಾಡಿ ನಂತರ ರೈತರಿಗೆ ಬೀಜವನ್ನು ಪೂರೈಕೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಇವತ್ತಿನ ದಿವಸ ಗೊಬ್ಬರ ಸಿಗುತ್ತಿಲ್ಲ. ಎಷ್ಟು ದುರ್ದೈವ ನೋಡಿ, ಮಳೆಯಾಗಿದೆ. ಬಿತ್ತುವುದಕ್ಕೆ ಬೀಜ ಇದೆ ಆದರೆ ಗೊಬ್ಬರ ಸಿಗುತ್ತಿಲ್ಲ. ಇವತ್ತು DAP ನಮ್ಮ ಜಿಲ್ಲೆಯಲ್ಲಿ ಸಿಗದೇ ಇರುವುದರಿಂದ ಅನೇಕ ಜನ ರೈತರು ಇವತ್ತಿನವರೆಗೂ ಬಿತ್ತುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಗೊಬ್ಬರದ ಬೆಲೆ, ಇವತ್ತು 485 ರೂಪಾಯಿಗೆ ಒಂದು ಚೀಲ ಗೊಬ್ಬರವನ್ನು ಮಾರುಕಟ್ಟೆಯಲ್ಲಿ ಕೊಡಬೇಕೆಂದು ಕೃಷಿ ಇಲಾಖೆಯ ಆದೇಶವಾಗಿದ್ದರೂ ಕೂಡ ಹೆಚ್ಚಿನ ಬೆಲೆಗೆ ವ್ಯಾಪಾರಸ್ಥರು ಮಾರಿಕೊಳ್ಳುತ್ತಿದ್ದಾರೆ ಮತ್ತು ಕಳಪೆ ಗುಣಮಟ್ಟದ DAP ಯನ್ನು ಇವತ್ತು ನಮ್ಮ ಜಿಲ್ಲೆಯಲ್ಲಿ ಅನೇಕ ಜನ ವ್ಯಾಪಾರಸ್ಥರು ಮಾರಾಟ ಮಾಡುತ್ತಿದ್ದಾರೆ. ಅಲ್ಲಿ ಸರ್ಕಾರ ಗೊಬ್ಬರದ ಪೂರೈಕೆಯನ್ನು ಮಾಡಿದ್ದರೆ ಇವತ್ತು ಕಳಪೆ ಗುಣಮಟ್ಟದ ಗೊಬ್ಬರದ ಹಾವಳಿ ಆಗುತ್ತಿರಲಿಲ್ಲ. ಅದಕ್ಕೋಸ್ಕರ ಸಂಪೂರ್ಣ ತನಿಖೆಯನ್ನು ಮಾಡಬೇಕು. ಯಾರು

ಈ ಕಳಪೆ ಮಟ್ಟದ ಬೀಜವನ್ನು, ಗೊಬ್ಬರವನ್ನು ಪೂರೈಕೆ ಮಾಡುತ್ತಿದ್ದಾರೆ ಅವರ ಮೇಲೆ ಉಗ್ರವಾದ ಕ್ರಮವನ್ನು ಜರುಗಿಸಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಟ್ರಾಕ್ಟರ್‌ಗಳಿಗೆ 60 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಅನೇಕ ವರ್ಷಗಳಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕೊಡುತ್ತಿವೆ. ಆದರೆ ನಮ್ಮ ಹಾವೇರಿ ತಾಲ್ಲೂಕಿನಲ್ಲಿ ಕಳೆದ ವರ್ಷದಿಂದ ಒಂದು ಟ್ರಾಕ್ಟರ್‌ಗೆ ಕೂಡ ಸಬ್ಸಿಡಿಯನ್ನು ಕೊಡಲಿಲ್ಲ. ಬೇರೆ ಬೇರೆ ತಾಲ್ಲೂಕುಗಳಲ್ಲಿ ಒಂದು ಅಥವಾ ಎರಡು ಹೆಚ್ಚೆಂದರೆ ಮೂರು ಟ್ರಾಕ್ಟರ್‌ಗಳಿಗೆ ಸಬ್ಸಿಡಿಯನ್ನು ಕೊಟ್ಟಿದ್ದಾರೆ. ಒಂದು ತಾಲ್ಲೂಕಿನಲ್ಲಿ ಒಂದು ಇಲ್ಲವೆ ಎರಡಕ್ಕೆ ಕೊಟ್ಟರೆ ಯಾವ ರೈತರಿಗೂ ಕೂಡ ಆ ಸಬ್ಸಿಡಿಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ರೈತರನ್ನು ಉದ್ಧಾರ ಮಾಡಬೇಕೆಂದು ಒಂದು ಕಡೆ ಹೇಳುತ್ತೇವೆ. ಹೊಸ ಹೊಸ ವೈಜ್ಞಾನಿಕವಾದಂಥ ಅವಿಷ್ಕಾರಗಳ ಮೂಲಕ ಹೊಸ ಹೊಸ ಯಂತ್ರಗಳನ್ನು ರೈತರಿಗೆ ಕೊಡಬೇಕೆಂದು ಮಾತನಾಡುತ್ತೇವೆ, ಆದರೆ ಅದಕ್ಕೆ ಸಬ್ಸಿಡಿಯನ್ನು ಕೊಡುವುದಕ್ಕೆ ಇವತ್ತು ಹಿಂದುಮುಂದು ನೋಡುತ್ತಿದ್ದೇವೆ. ಅದಕ್ಕೋಸ್ಕರ ಪ್ರತಿ ತಾಲ್ಲೂಕಿಗೆ ಪ್ರತಿ ವರ್ಷ ಮೂವತ್ತರಿಂದ ಐವತ್ತು ಟ್ರಾಕ್ಟರ್ ಸಬ್ಸಿಡಿಗೆ ಹಣಕಾಸಿನ ನೆರವನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆ ಮೆಣಸಿನಕಾಯಿಗೆ ಪ್ರಸಿದ್ಧಿಯಾದಂಥ ಜಿಲ್ಲೆ. ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕು ಇಡೀ ಜಗತ್ತಿನಲ್ಲೇ ಮೆಣಸಿನಕಾಯಿ ಬೆಳೆಗೆ ಮತ್ತು ಮಾರುಕಟ್ಟೆಗೆ ಪ್ರಸಿದ್ಧಿಯಾಗಿರುವಂಥ ತಾಲ್ಲೂಕು ಸ್ಥಳ. ಬ್ಯಾಡಗಿ ಮೆಣಸಿನಕಾಯಿ ಇವತ್ತು ನಶಿಸಿ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಜಿಲ್ಲೆಯ ಹಾವೇರಿ ತಾಲ್ಲೂಕಿನ ದೇವಿಹೊಸೂರು ಗ್ರಾಮದಲ್ಲಿ ಸುಮಾರು ಐದಾರು ವರ್ಷಗಳ ಹಿಂದೆ ಮೆಣಸಿನಕಾಯಿ ಸಂಶೋಧನಾ ಕೇಂದ್ರವನ್ನು ಪ್ರಾರಂಭ ಮಾಡಿದ್ದರು. ಆದರೆ ಆ ಸಂಶೋಧನಾ ಕೇಂದ್ರಕ್ಕೆ ಸರ್ಕಾರ ಹೆಚ್ಚಿನ ಸೌಲಭ್ಯವನ್ನು ಕೊಡದೆ, ಹಣಕಾಸಿನ ನೆರವನ್ನು ಕೊಡದೆಯೆ ಇವತ್ತು ಆ ಸಂಶೋಧನಾ ಕೇಂದ್ರ ಕೇವಲ ನಾಮಕಾವಸ್ಥೆಯ ಕೇಂದ್ರವಾಗಿ ಅಲ್ಲಿ ಇವತ್ತು ಯಾವುದೇ ಹೊಸ ಅವಿಷ್ಕಾರಗಳಾಗಲಿ ಅಥವಾ ಅದಕ್ಕೆ ತಗಲುವಂಥ ರೋಗಗಳ ಬಗ್ಗೆ ಪರಿಹಾರ ಸಿಗುತ್ತಿಲ್ಲ. ನಿನ್ನೆ ದಿವಸ ಶ್ರೀಮಾನ್ ವಾಟಾಳ್‌ನಾಗರಾಜ್‌ರವರು ಮಾತನಾಡುವಾಗ ಮೆಣಸಿನ ಗಿಡಕ್ಕೆ ಇತ್ತೀಚೆಗೆ ರೋಗ ಬರುತ್ತಿದೆಯೆಂದು ಹೇಳಿದರು. ಅದು ಸುಮಾರು 20-25 ವರ್ಷದಿಂದ ಬರುತ್ತಿದೆ. ಅದು ವೈರಸ್ ರೋಗ. ಅದಕ್ಕೆ ಮುಟ್ಟು ರೋಗವೆಂದು ಕರೆಯುತ್ತಾರೆ. ಅದಕ್ಕೆ ಯಾವುದೇ ಔಷಧಿಯನ್ನು ಹೊಡೆದರೂ ಕೂಡ ಆ ರೋಗ ನಿವಾರಣೆಯಾಗುವುದಿಲ್ಲ. ಆ ಸಂಶೋಧನಾ ಕೇಂದ್ರದಲ್ಲಿ ಇಂಥ ರೋಗಗಳ ಬಗ್ಗೆ ಇವತ್ತು ಸಂಶೋಧನೆಯನ್ನು ಮಾಡಿ ಅದಕ್ಕೆ ಯಾವ ಔಷಧಿಯನ್ನು ಹೊಡೆಯಬೇಕು ಎಂಬ ಬಗ್ಗೆ ಮೂಲಭೂತವಾಗಿ ರೈತರಿಗೆ ಮಾಹಿತಿಯನ್ನು ಒದಗಿಸುವಂಥ ಸಂಶೋಧನಾ

ಕೇಂದ್ರ ಇವತ್ತು ಹಾಳುಬಿದ್ದಿರುವುದರಿಂದ ಮೆಣಸಿನಕಾಯಿಯನ್ನು ಆ ಭಾಗದಲ್ಲಿ ಬೆಳೆಯದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಬ್ಯಾಡಗಿ ತಾಲ್ಲೂಕಿನಲ್ಲಿರಬಹುದು, ಹಾವೇರಿ ತಾಲ್ಲೂಕಿನಲ್ಲಿರಬಹುದು, ಹಿರೇಕೆರೂರು ತಾಲ್ಲೂಕಿನಲ್ಲಿರಬಹುದು, ಇವತ್ತು ಯಾರೂ ಮೆಣಸಿನ ಗಿಡವನ್ನು ಹಾಕುತ್ತಿಲ್ಲ. ಇವತ್ತು ಬಳ್ಳಾರಿ, ಬಿಜಾಪುರ, ಗುಲ್ಬರ್ಗಾ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಬೆಳೆದ ಮೆಣಸಿನಕಾಯಿಯನ್ನು ಬ್ಯಾಡಗಿಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಅದಕ್ಕೋಸ್ಕರ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಹೆಚ್ಚಿನ ಹಣಕಾಸಿನ ನೆರವನ್ನು ಈ ಮೆಣಸಿನಕಾಯಿ ಸಂಶೋಧನಾ ಕೇಂದ್ರಕ್ಕೆ ಒದಗಿಸಿ ಅದರ ಸಂಪೂರ್ಣ ಅಭಿವೃದ್ಧಿಗಾಗಿ ಮತ್ತು ರೈತರ ಏಳಿಗೆಗಾಗಿ ಹೆಚ್ಚಿನ ಹಣಕಾಸಿನ ನೆರವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಬೆಳೆ ವಿಮೆ, ಬೆಳೆ ವಿಮೆಯನ್ನು ಕಟ್ಟುವಂಥ ಸಂದರ್ಭದಲ್ಲಿ ಮಾತ್ರ ನಿಗದಿತವಾದ ಸಮಯವನ್ನು ನಾವು ರೈತರಿಗೆ ಕೊಡುತ್ತಿದ್ದೇವೆ. ಆದರೆ ಅದನ್ನು ರೈತರಿಗೆ ಕ್ಲೈಮ್ ಕೊಡುವಂಥ ಸಂದರ್ಭದಲ್ಲಿ ವಿಪರೀತವಾದ ತೊಂದರೆಯನ್ನು ಕೊಡುತ್ತಿದ್ದಾರೆ. 2003–04ರ ಬೆಳೆ ವಿಮೆ ಇವತ್ತು ಇನ್ನೂ ಕೆಲವು ಜನರಿಗೆ ಕೊಡಬೇಕಾಗುತ್ತದೆ. ಇವತ್ತಿಗೂ ಅದನ್ನು ಕ್ಲಿಯರ್ ಮಾಡಿಲ್ಲ. ರೈತರು ಇವತ್ತು ಕೃಷಿ ಇಲಾಖೆಗೆ, ಇನ್‌ಶ್ಯೂರೆನ್ಸ್ ಕಂಪನಿಗೆ, ಶಾಸಕರುಗಳಿಗೆ, ಮಂತ್ರಿಗಳ ಆಫೀಸ್‌ಗಳಿಗೆ ಅಲೆದಾಡಿ ಕಷ್ಟಕರವಾದ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದಾರೆ. ಈ ವರ್ಷ ಇನ್‌ಶ್ಯೂರೆನ್ಸ್‌ನಲ್ಲಿ ಅನೇಕ ಬದಲಾವಣೆಗಳನ್ನು ಸರ್ಕಾರ ತಂದಿದೆ. ಕಳೆದ ವರ್ಷ ನಾವು ಇನ್‌ಶ್ಯೂರೆನ್ಸ್‌ನ್ನು 150 ಪ್ರತಿಶತ ಕಟ್ಟಲು ಅವಕಾಶವಿತ್ತು. ಆದರೆ ಈ ವರ್ಷ ಸರ್ಕಾರ ಕೇವಲ 100 ಪ್ರತಿಶತ ಕಟ್ಟುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ, ಇದರಿಂದ ರೈತರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಅವರು ಬ್ಯಾಂಕ್‌ಗಳಿಂದ ತೆಗೆದುಕೊಂಡಿರುವಂಥ ಸಾಲಕ್ಕೆ, ಪ್ರತಿ ಎಕರೆಗೆ ವೈಜ್ಞಾನಿಕವಾಗಿ ಬ್ಯಾಂಕ್‌ನವರು ಸಾಲವನ್ನು ವಿತರಣೆ ಮಾಡುತ್ತಾರೆ. ಅದಕ್ಕಿಂತಲೂ ಗಣನೀಯವಾಗಿ ಕಡಿಮೆಯಾಗುತ್ತಿದೆ. ಇದಕ್ಕೆ ದಯವಿಟ್ಟು ತಜ್ಞರ ಸಭೆಯೊಂದನ್ನು ಕರೆದು ಚರ್ಚೆ ಮಾಡಿ. ನಮ್ಮ ಜಿಲ್ಲೆಯಲ್ಲಿ ಮಾನ್ಯ ಉದಾಸಿಯವರು ಇದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಮಾನ್ಯ ಎಸ್.ಎಸ್. ಪಾಟೀಲರು ಮತ್ತು ನಮ್ಮ ಸಹಕಾರ ಸಚಿವರಾದಂಥ ಮಾನ್ಯ ದೇಶಪಾಂಡೆಯವರು ಇನ್‌ಶ್ಯೂರೆನ್ಸ್‌ನ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಹೊಂದಿದ್ದಾರೆ. ಅವರನ್ನು ಕರೆದು ಈ ಇನ್‌ಶ್ಯೂರೆನ್ಸ್ ಕಟ್ಟುವಂಥ ಹಣಕಾಸಿನ ವಿಷಯದಲ್ಲಿ ಚರ್ಚಿಸಬೇಕು. ಮತ್ತು ನೂರು ಪ್ರತಿಶತ ಮತ್ತು ನೂರಾಐವತ್ತು ಪ್ರತಿಶತ ಎನ್ನುವ ಈ ತಾರತಮ್ಯವನ್ನು ಈ ವರ್ಷದಿಂದ ಮಾಡಿದ್ದಾರೆ. ಕೇವಲ ನೂರು ಪ್ರತಿಶತವನ್ನು ಕಟ್ಟಲು ಅವಕಾಶವನ್ನು ಕೊಟ್ಟಿದ್ದಾರೆ, ಕಳೆದ ವರ್ಷದ ಹಾಗೆ ಈ ವರ್ಷವೂ ನೂರಾಐವತ್ತು ಪ್ರತಿಶತ ಕಟ್ಟುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿ

ಮಾಡಿಕೊಳ್ಳುತ್ತೇನೆ. ಇನ್ನು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಬಗ್ಗೆ ಕೂಡ ಈ ಸಂದರ್ಭದಲ್ಲಿ ಮಾತನಾಡಲು ಇಚ್ಛೆ ಪಡುತ್ತೇನೆ.

ಅಧ್ಯಕ್ಷರು :– ತಾವು ಇಪ್ಪತ್ತು ನಿಮಿಷ ತೆಗೆದುಕೊಂಡಿದ್ದೀರಿ. ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ. ಹೀಗಾದರೆ ಹೇಗೆ?

ಶ್ರೀ ಶಿವರಾಜ್ ಸಜ್ಜನರ್ :– ದಯವಿಟ್ಟು ನನಗೆ ಅವಕಾಶ ಕೊಡಬೇಕು.

Mr. Speaker :- No. No.

ಶ್ರೀ ಶಿವರಾಜ ಸಜ್ಜನರ್ :– ನಾನು ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ. ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಇವತ್ತು ಶಿಕ್ಷಕರ ಕೊರತೆಯಿಂದ ಕೊಠಡಿಗಳ ಕೊರತೆಯಿಂದ ....

ಅಧ್ಯಕ್ಷರು :– ಮಾನ್ಯ ಸಜ್ಜನ್‌ರವರೇ, ನಿಲ್ಲಿಸಬೇಕು. ಮುಂದಿನವರನ್ನು ಕರೆಯುತ್ತೇನೆ. ಈ ಕಡೆಯವರಿಗೆ ಒಂದು ಅವಕಾಶ ಕೊಟ್ಟಿಲ್ಲ, ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ..

ಶ್ರೀ ಶಿವರಾಜ ಸಜ್ಜನರ್ :– ನಾನು ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ.

Mr. Speaker :- No. ದಯಮಾಡಿ ಇನ್ನು ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಶಿವರಾಜ ಸಜ್ಜನರ್ :– ದಯವಿಟ್ಟು ಸಾರ್. ನೀವು front line ನವರಿಗೆ ತಾಸು, ಎರಡು ತಾಸು ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರಿ. ನಮಗೆ ಒಂದು ಹತ್ತು ನಿಮಿಷವನ್ನೂ ಸಹ ಕೊಡುವುದಿಲ್ಲವಲ್ಲಾ. ಏನಿದು ಅನ್ಯಾಯ? ದಯವಿಟ್ಟು ಅವಕಾಶ ಮಾಡಿಕೊಡಬೇಕು. ಇನ್ನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು :– ಸಜ್ಜನರ್, ನೀವು ಈಗಾಗಲೇ 20 ನಿಮಿಷಗಳ ಮೇಲೆ ಮಾತನಾಡಿದ್ದೀರಿ. ಇನ್ನೂ ಅನೇಕ ಜನ ಮಾತನಾಡುವವರಿದ್ದಾರೆ.

ಶ್ರೀ ಶಿವರಾಜ ಸಜ್ಜನರ್ :– ಇನ್ನು ಎರಡು ನಿಮಿಷಗಳಲ್ಲಿ ನಾನು ಮಾತನಾಡಿ ಮುಗಿಸುತ್ತೇನೆ ಸಾರ್. ಪ್ರಾಥಮಿಕ ಶಿಕ್ಷಣದಲ್ಲಿ ನನ್ನ ತಾಲ್ಲೂಕಿನಲ್ಲಿ....

ಅಧ್ಯಕ್ಷರು :– ಎಷ್ಟು ಹೇಳಿದರೂ ಅರ್ಥ ಮಾಡಿಕೊಳ್ಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :– ದಯಮಾಡಿ, ಇಷ್ಟೊಂದು ಸಮಾಧಾನದಿಂದ ಮಾನ್ಯ ಅಧ್ಯಕ್ಷರು ತಮಗೆ ಮಾತನಾಡಲು ಅವಕಾಶ ಮಾಡಿಕೊಡುತ್ತಿದ್ದಾರೆ. ಬೇರೆಯವರಿಗೂ ಅವಕಾಶ ಮಾಡಿಕೊಡಬೇಕೆಂದು ಅವರು ಹೇಳುತ್ತಿದ್ದಾರೆ. ಬೇಗ ಒಂದೆರಡು ನಿಮಿಷಗಳಲ್ಲಿ ಮುಗಿಸಿ, ಬೇರೆಯವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ, ಕೋಪಮಾಡಿಕೊಳ್ಳಬೇಡಿ.

ಶ್ರೀ ಶಿವರಾಜ ಸಜ್ಜನರ್ :– ನಮ್ಮ ತಾಲ್ಲೂಕಿನಲ್ಲಿ ಕಬ್ಬೂರು ಪಂಚಾಯತಿ ವ್ಯಾಪ್ತಿಯಲ್ಲಿ ಬೆನಕನಹಳ್ಳಿ ಎಂಬ ಗ್ರಾಮವೊಂದಿದೆ. ಅದರಲ್ಲಿ ಉರ್ದು ಶಾಲೆ ಇದೆ. ಒಂದರಿಂದ ಏಳನೇ ತರಗತಿಯವರೆಗೆ ಅಲ್ಲಿ ಶಾಲೆ ಇದೆ. ಅಲ್ಲಿ 150 ಜನ ಮಕ್ಕಳಿದ್ದಾರೆ. ಆ ಶಾಲೆಯಲ್ಲಿ ಕೇವಲ ಒಬ್ಬನೇ ಒಬ್ಬ ಶಿಕ್ಷಕ ಕಲಿಸುತ್ತಿದ್ದಾನೆ. ಆ ಮಕ್ಕಳ ಗತಿ ಏನಾಗಿದೆ? ಅಲ್ಲಿ ಶಿಕ್ಷಣ ಕೊಡಿಸುವಂತಹ ಪಾಲಕರ ಗತಿ ಏನಾಗಿದೆ? ಆ ಮಕ್ಕಳು ಜೀವನದಲ್ಲಿ ಹೇಗೆ ಮುಂದೆ ಬರಬೇಕು ಅನ್ನುವುದರ ಬಗ್ಗೆ ಇವತ್ತು ರಾಜ್ಯ ಸರ್ಕಾರ ಚಿಂತನೆಯನ್ನು ಮಾಡಬೇಕಾಗಿದೆ. ಇವತ್ತು ದುರ್ದೈವ ಸಾರ್, ಗ್ರಾಮೀಣ ಪ್ರದೇಶದಲ್ಲಿ ಇವತ್ತು ಶಿಕ್ಷಕರ ಕೊರತೆಯಿಂದ, ಕೊಠಡಿಗಳ ಕೊರತೆಯಿಂದ, ಇವತ್ತು ಅಲ್ಲಿ ಶಿಕ್ಷಣವನ್ನು ಕಲಿಸುವುದಕ್ಕೆ ಜನರು ಹಿಂದೆ–ಮುಂದೆ ನೋಡುತ್ತಿದ್ದಾರೆ. ಅನೇಕ ಸಮಸ್ಯೆಗಳನ್ನು ಅಲ್ಲಿ ಎದುರಿಸುತ್ತಿದ್ದಾರೆ. ಇನ್ನು ಕಾಲೇಜು ಶಿಕ್ಷಣ, ಇವತ್ತು PUC ಇರಬಹುದು, ಡಿಗ್ರಿ ಇರಬಹುದು, ಆ ಡಿಗ್ರಿ ಕಾಲೇಜುಗಳಲ್ಲಿ, ಹಾವೇರಿ ತಾಲ್ಲೂಕಿನಲ್ಲಿ ರಾಜ್ಯ ಸರ್ಕಾರದ ಕಾಲೇಜುಗಳು ಇಲ್ಲದಿರುವುದರಿಂದ ಅಲ್ಲಿರುವಂತಹ ಶಿಕ್ಷಣ ಸಂಸ್ಥೆಗಳು ವಿಪರೀತವಾದಂತಹ ಡೊನೇಷನ್ ಅನ್ನು ಆ ಮಕ್ಕಳಿಗೆ ಹೇರುವುದರ ಮುಖಾಂತರ, ಅಲ್ಲಿ ಬಡವರ ಮಕ್ಕಳು ಇವತ್ತು ಶಿಕ್ಷಣವನ್ನು ಕಲಿಯುವುದಕ್ಕೆ ತೊಂದರೆಯಾಗುತ್ತಿದೆ. PUC ವಿಜ್ಞಾನಕ್ಕೆ ಎಂಟು ಸಾವಿರದಿಂದ ಹತ್ತು ಸಾವಿರ ರೂ.ಗಳವರೆಗೆ ಡೊನೇಷನ್ ಅನ್ನು ತೆಗೆದುಕೊಳ್ಳುತ್ತಿದ್ದಾರೆ. I B.A ಮತ್ತು I B.Sc. ಗೆ ನಾಲ್ಕು ಸಾವಿರದಿಂದ ಎಂಟು ಸಾವಿರ ರೂಪಾಯಿಗಳವರೆಗೆ ಇವತ್ತು ಕಲೆಕ್ಷನ್ ಮಾಡುತ್ತಿದ್ದಾರೆ. ಆದುದರಿಂದ ನಮ್ಮ ಹಾವೇರಿ ನಗರಕ್ಕೆ ಡಿಗ್ರಿ ಕಾಲೇಜೊಂದನ್ನು ಮತ್ತು PUC Science College ಒಂದನ್ನು ಸರ್ಕಾರ ಮಂಜೂರು ಮಾಡಿ, ಬಡ ಮಕ್ಕಳಿಗೆ ಅಲ್ಲಿ ವಿದ್ಯಾಭ್ಯಾಸಕ್ಕೆ ಅನುಕೂಲತೆಯನ್ನು ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸನ್ಮಾನ್ಯ ಮಂತ್ರಿಗಳಿಗೆ ವಿನಂತಿಯನ್ನು ಮಾಡಿಕೊಂಡು, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಮಾನ್ಯ ನರೇಂದ್ರಬಾಬುರವರೆ, ದಯವಿಟ್ಟು ತಾವು 10 ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) :– ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಶಿಕ್ಷಣ ಇಲಾಖೆಯ ಬೇಡಿಕೆ ಮೇಲೆ ಕೆಲವು ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಬಯಸುತ್ತೇನೆ. ಪಂಡಿತ್ ಜವಾಹರಲಾಲ್ ನೆಹರೂ ಅವರು "*Schools and Colleges are modern temples of free India.*" ಎಂಬ ಮಾತೊಂದನ್ನು ಹೇಳಿದ್ದರು. ಆದರೆ ಇವತ್ತು ಸರ್ಕಾರದ ಶಾಲೆಗಳನ್ನು ಹೊರತುಪಡಿಸಿ, aided

institutions ಮತ್ತು un-aided institutions ಹೇಗೆ ವಿದ್ಯಾರ್ಥಿಗಳನ್ನು, ಪೋಷಕರನ್ನು ಶೋಷಣೆ ಮಾಡುತ್ತಿವೆ ಎಂಬುದನ್ನು ನೋಡಿದಾಗ, ಸಂವಿಧಾನಬದ್ಧವಾಗಿ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಕೊಡಬೇಕೆನ್ನುವುದು ನಿಜವಾಗಿಯೂ ಸಾಕಾರವಾಗುತ್ತದೆಯೇ ಅನ್ನತಕ್ಕಂಥ ಶಂಕೆಯೊಂದು ನನ್ನನ್ನು ಕಾಡುತ್ತಿದೆ. ಬಹುಶಃ ಎಲ್ಲರಲ್ಲೂ ಈ ಶಂಕೆ ಮೂಡಿದೆ. ಶಿಕ್ಷಣವೇ ಶಕ್ತಿ, ವಿದ್ಯಾದಾನ ಮಹಾದಾನ ಎಂದು ಇವತ್ತು ನಾವೆಲ್ಲಾ ಹೇಳುತ್ತೇವೆ. ಆದರೆ ಇವತ್ತು ವಿದ್ಯೆ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಎಲ್ಲಾ ಹಂತಗಳಲ್ಲಿ ವ್ಯಾಪಾರವಾಗಿ, ಇದೊಂದು ಉದ್ದಿಮೆಯಾಗಿ ಬಿಟ್ಟಿದೆ. ಬಹಳ ದುರ್ದೈವ, ಇವತ್ತು ಕುಲ ಕಸುಬಗಳನ್ನು ಮಾಡುತ್ತಿದ್ದಂತಹ ಹಳ್ಳಿಗಾಡಿನ ಜನಗಳಿಂದ ಹಿಡಿದು ಎಲ್ಲರೂ ವಿದ್ಯಾವಂತರಾಗಿ ಎಂಬ ಕರೆ ಕೊಟ್ಟಿದ್ದರಿಂದಾಗಿ, ಅವರು ಇವತ್ತು ಕುಲ ಕಸುಬುಳನ್ನೂ ಬಿಟ್ಟರು, ಇವತ್ತು ಆ ಕುಲ ಕಸುಬುಗಳೂ ಇಲ್ಲ. ಇವತ್ತು ವಿದ್ಯೆಯನ್ನು ಸಮುದಾಯ ಕಾಣತಕ್ಕಂಥ ದಿನಗಳನ್ನು ನಾವು ಕಾಣುತ್ತಿದ್ದೇವೆ. ಇವತ್ತು ಬಹಳ ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಎರಡು ವರ್ಗದ ಜನಗಳನ್ನು ನಮ್ಮ ಶಿಕ್ಷಣ ವ್ಯವಸ್ಥೆ ತಯಾರು ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಬಹುಶಃ ನಿನ್ನೆ ಹಲವಾರು ಜನ ಹಿರಿಯ ಸದಸ್ಯರು ಫಲಿತಾಂಶದ ಬಗ್ಗೆ, ಮಾತನಾಡುತ್ತಾ ಹೇಳುತ್ತಿದ್ದರು. ಅವರು ಒಂದು ಕಾಲೇಜಿನಲ್ಲಿ ಕಾಪಿಯಾಗಿದೆ ಎನ್ನುವಂತಹ ಸಂಶಯವನ್ನು ಇಲಾಖೆಯವರು ವ್ಯಕ್ತಪಡಿಸುತ್ತಿದ್ದಾರೆ ಎನ್ನುವಂತಹ ಮಾತನ್ನು ಹೇಳಿ, ಏಕೆ ನಮ್ಮದನ್ನು ಮಾತ್ರ ತನಿಖೆಗೆ ಒಳಪಡಿಸುತ್ತಿದ್ದೀರಿ, ಸಿಟಿಯಲ್ಲಿ ಮಾತ್ರ ಒಳ್ಳೆಯ result ಬರುತ್ತದೆ, ಹಳ್ಳಿಯಲ್ಲಿ ಬರುವುದಿಲ್ಲವೇ? ಗ್ರಾಮೀಣ ಪ್ರದೇಶದಲ್ಲಿ ಬರುವುದಿಲ್ಲವೇ ಅನ್ನತಕ್ಕಂಥ ಒಂದು ವಾದವನ್ನು ಇಲ್ಲಿ ಮಂಡನೆ ಮಾಡಿದಾಗ, ನನಗನಿಸಿದ್ದು ಖಂಡಿತವಾಗಿಯೂ ಇವತ್ತು ಬೆಂಗಳೂರು ನಗರ ಇರಬಹುದು, ಯಾವುದೇ ನಗರಗಳು ಇರಬಹುದು, ಪಟ್ಟಣಗಳು ಇರಬಹುದು, ಇಲ್ಲಿ ಎರಡು ನಾವು ಎರಡು ವರ್ಗದ ಜನಗಳನ್ನು ಸೃಷ್ಟಿ ಮಾಡುತ್ತಿದ್ದೇವೆ. ಎರಡು ವರ್ಗದ ವಿದ್ಯಾರ್ಥಿಗಳನ್ನು ಮತ್ತು ಮಕ್ಕಳನ್ನು ನಾವು ಸೃಷ್ಟಿ ಮಾಡುತ್ತಿದ್ದೇವೆ. ಬಹುಶಃ ನನಗೆ ಬಾಲ್ಯದ ನೆನಪಿನಲ್ಲಿ ಹೇಳುವುದಾದರೆ, ನಾವೆಲ್ಲರೂ ಶಿಶುವಿಹಾರದಲ್ಲಿ ಕಲಿತೆವು. ಶಿಶಿವಿಹಾರ ಎಂದರೆ Pre-nursery ಎಂದೇನು ನಾವು ಕರೆಯುತ್ತೇವೆಯೋ ಅದೇ ಆಗಿದೆ. ಇವತ್ತು ಶಿಶುವಿಹಾರದ ಪದ್ಧತಿ ಹೊರಟು ಹೋಗಿ ಬಿಟ್ಟಿದೆ. ಇವತ್ತು ಸರ್ಕಾರಿ ಶಾಲೆಗಳಿಗೆ ಬರುತ್ತಿರತಕ್ಕಂಥ ಮಕ್ಕಳು, ನೇರವಾಗಿ ಒಂದನೇ ತರಗತಿಗೆ ಬರುತ್ತಾರೆ. ಅಂಗನವಾಡಿ ಅಥವಾ ಬಾಲವಾಡಿಯಲ್ಲಿ ಏನಾದರೂ ಸ್ವಲ್ಪ ಅಕ್ಷರಾಭ್ಯಾಸ, ಸಂಖ್ಯಾಭ್ಯಾಸ ಮಾಡಿದ್ದರೆ ಮಾತ್ರ ಒಂದನೇ ಕ್ಲಾಸ್‌ಗೆ ಬಂದಾಗ ಅಲ್ಲಿರತಕ್ಕಂಥ ಸಿಲಬಸ್ ಅನ್ನು ಸ್ವಲ್ಪ ಪಿಕಪ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಲ್ಲಿ ಇವತ್ತು ಶಿಶುವಿಹಾರ ಪದ್ಧತಿ ಮತ್ತೆ ಬರತಕ್ಕಂಥದ್ದು ತೀರಾ ಅವಶ್ಯಕವಾಗಿದೆ.

ಇವತ್ತಿನ ವ್ಯವಸ್ಥೆಯಲ್ಲಿ ಬೇರೆ ಬೇರೆ ಕಡೆ ಬೇಬಿ ಸಿಟ್ಟಿಂಗ್ ಇದೆ, LKG ಇದೆ, UKG ಇದೆ ಎಂದು ಹೇಳಬಹುದು. ಸಾಮಾನ್ಯ ವರ್ಗದವರು ಮತ್ತು ಗ್ರಾಮೀಣ ಪ್ರದೇಶದ ರೈತರ ಮಕ್ಕಳು ಹೇಗೆ ಬರಲಿಕ್ಕೆ ಸಾಧ್ಯವಿದೆ? ಇವತ್ತು ನಗರದವರ ಜೊತೆಗೆ ಹೇಗೆ ಆ ಮಕ್ಕಳು compete ಮಾಡಲಿಕ್ಕೆ ಸಾಧ್ಯವಾಗುತ್ತದೆ? ಖಂಡಿತವಾಗಿಯೂ compete ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ, ಮತ್ತೆ ಶಿಶುವಿಹಾರಗಳ ಪದ್ಧತಿ ಜಾರಿಗೆ ತರಬೇಕು. ಬಹಳಷ್ಟು ನಿಮಗೆ ಗೊತ್ತಿದೆ. ಇವತ್ತು ಸುಮಾರು 20–25 ಸಾವಿರ ಜನ ನರ್ಸರಿ ಟೀಚರ್ಸ್ ಟ್ರೈನಿಂಗ್ ಮಾಡಿರತಕ್ಕಂಥವರು ನಿರುದ್ಯೋಗಿಗಳಾಗಿದ್ದಾರೆ. ಅವರನ್ನು ಮತ್ತೆ ಹೇಗಾದರೂ ತೊಡಗಿಸಿಕೊಳ್ಳತಕ್ಕಂಥ ಅವಶ್ಯಕತೆ ಇವತ್ತು ಇದೆ. ಬಹಳಷ್ಟು ಜನ ಇವತ್ತು ಆ ಟ್ರೈನಿಂಗ್ ಪಡೆದಂಥವರಿಗೆ, ಒಂದು ಕಡೆ ಉದ್ಯೋಗ ಇಲ್ಲ, ಪ್ರಾಥಮಿಕ ತರಗತಿಗಳಲ್ಲೂ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಬೇರೆ ಕಡೆ ಶಿಶುವಿಹಾರಗಳಲ್ಲೂ ಸಹ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಹೀಗಾಗಿ ಅವರು ಇವತ್ತು ಅತಂತ್ರ ಸ್ಥಿತಿಯಲ್ಲಿದ್ದಾರೆ. ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಒಂದನೇ ತರಗತಿಗೆ ಬರುವುದಕ್ಕಿಂತ ಮುಂಚಿತವಾಗಿ ಈ ಶಿಶುವಿಹಾರಗಳನ್ನು ತೆರೆಯತಕ್ಕಂಥದ್ದು ಆಗಬೇಕು. ನಮ್ಮ ಮಕ್ಕಳಾಗಲಿ ಅಥವಾ ವಿದ್ಯಾವಂತರು, ಪ್ರಜ್ಞಾವಂತರು ಇರತಕ್ಕಂಥ ಅಧಿಕಾರಿಗಳ ಮಕ್ಕಳಾಗಲಿ, ಆ ಮಕ್ಕಳು ಒಂದನೇ ತರಗತಿಗೆ ಬರುವುದಕ್ಕಿಂತ ಮುಂಚಿತವಾಗಿ, ಬೇಬಿ ಸಿಟ್ಟಿಂಗ್, LKG, UKG ಮುಗಿಸಿ, ಒಂದನೇ ಕ್ಲಾಸ್‌ಗೆ ಬರುವಷ್ಟೊತ್ತಿಗೆ ಆ ಮಗು ಪಕ್ವವಾಗಿ, ಮಾನಸಿಕವಾಗಿ ಸಿದ್ಧವಾಗಿರುತ್ತದೆ. ಆ ಮಗು ಒಂದನೇ ಕ್ಲಾಸಿನ ಸಿಲಬಸ್ ಅನ್ನು, CBSE ಸಿಲಬಸ್ ಆಗಲಿ, ಸ್ಟೇಟ್ ಸಿಲಬಸ್ ಆಗಲಿ, ಬಹಳ ಚೆನ್ನಾಗಿ ಪಿಕಪ್ ಮಾಡುತ್ತದೆ. ಆದರೆ ಇವತ್ತು ಏನಾಗುತ್ತಿದೆ? ಸರ್ಕಾರಿ ಶಾಲೆಗಳಿಗೆ ಬರತಕ್ಕಂಥ ಮಕ್ಕಳು, ಕೂಲಿ ಕಾರ್ಮಿಕರ ಮಕ್ಕಳು ಅಥವಾ ಸಂಘಟಿತ ಕಾರ್ಮಿಕರ ಮಕ್ಕಳು, ಅಥವಾ ತಂದೆ–ತಾಯಿ ಇಲ್ಲದಿರತಕ್ಕಂಥ ಮಕ್ಕಳು, ಈ ಮಕ್ಕಳಿಗೆ ಮತ್ತೆ ಇವತ್ತು ಶಿಶುವಿಹಾರವನ್ನು ಆರಂಭ ಮಾಡತಕ್ಕಂಥದ್ದು ತೀರಾ ಅವಶ್ಯಕವಾಗಿ ಬೇಕಾಗಿದೆ. ಇದರ ಜೊತೆಯಲ್ಲಿ ನಾನು ಇವತ್ತು ಒಂದು ಮಾತನ್ನು ಹೇಳುತ್ತೇನೆ. ಇವತ್ತು ಗುರುದಕ್ಷಿಣೆ; ಅಥವಾ ವರದಕ್ಷಿಣೆ ಎಷ್ಟು ಕೆಟ್ಟದ್ದೋ, ಅದೇ ರೀತಿಯಾಗಿ ಶಾಲಾ ಆಡಳಿತ ಮಂಡಳಿಗಳು ಮತ್ತು aided institutions ಸಹಿತ ಇವತ್ತೇನು ಡೊನೇಷನ್ ಅನ್ನು ಕಲೆಕ್ಟ್ ಮಾಡಿಕೊಂಡು, ಪೋಷಕರನ್ನು ಶೋಷಣೆ ಮಾಡುತ್ತಿದ್ದಾರೋ, ಇದಕ್ಕೆ ಕಡಿವಾಣ ಹಾಕತಕ್ಕಂಥದ್ದರ ಬಗ್ಗೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಾನು ಮೊನ್ನೆ ಶಿಕ್ಷಣ ಸಚಿವರಿಗೆ, ಸ್ವಾಮಿ, ಇಂಥಿಂಥ ಸ್ಕೂಲ್‌ಗಳಲ್ಲಿ, ಕಾಲೇಜ್‌ಗಳಲ್ಲಿ ಬೇರೆ ಬೇರೆ ಸ್ವರೂಪದಲ್ಲಿ ವಂತಿಗೆಯನ್ನು ಸ್ವೀಕಾರ ಮಾಡುತ್ತಿದ್ದಾರೆಂದು ದೂರೊಂದನ್ನು ಕೊಟ್ಟೆ. ಆ ಬಗ್ಗೆ ನಮ್ಮ ಅಧಿಕಾರಿಗಳು ಏನು ಮಾಡಿದರು ಎಂದರೆ, ಆ ಕಾಲೇಜಿನ

ಮ್ಯಾನೇಜ್‌ಮೆಂಟ್‌ನವರ ಹತ್ತಿರ ಹೋಗಿ, ಇಂತಹ ಶಾಸಕರು, ಇಂತಹ ದೂರನ್ನು ಕೊಟ್ಟಿದ್ದಾರೆ ಎಂದು ಆ ದೂರಿನ ಜೆರಾಕ್ಸ್ ಪ್ರತಿಗಳನ್ನೆಲ್ಲಾ ಅವರಿಗೆ ಕೊಟ್ಟಿದ್ದಾರೆ. ನಾನು ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಚಿವರನ್ನು ಆಗ್ರಹ ಮಾಡುತ್ತೇನೆ. ಇವರು ಇರತಕ್ಕಂಥದ್ದು ಏತಕ್ಕೆ? ಇವರು ಇದರ ಕರ್ತವ್ಯವನ್ನು ಮಾಡಬೇಕಾಗಿತ್ತು. ಇವತ್ತೊಂದು ಇವರ squad ಇದೆ, ಆ squad ಮೂಲಕ ಎಲ್ಲೆಲ್ಲಿ ಬೇರೆ ಬೇರೆ ರೂಪದಲ್ಲಿ ವಂತಿಗೆಗಳನ್ನು ತೆಗೆದುಕೊಳ್ಳುತ್ತಿದ್ದಾರೋ, ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ ಅವರು ಆ ಕಾಲೇಜ್‌ಗಳಿಗೆ ಹೋಗಿ, ಇಂತಹ ಶಾಸಕರು ನಿಮ್ಮ ವಿರುದ್ಧ ದೂರು ಕೊಟ್ಟಿದಾರೆ, ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ರೀತಿಯಾದರೆ ಹೇಗೆ? Aided institutions ಅಥವಾ Un-aided institutions ಗಳಿಗೆ ಸರ್ಕಾರ ರೂಪಿಸಿರುವಂತಹ ನಿಯಮಾವಳಿಗಳು ಇವೆ. ಅವರು ರೋಸ್ಟರ್ ಸಿಸ್ಟಂಗಳನ್ನು ಫಾಲೋ ಮಾಡುತ್ತಿಲ್ಲ. ಈ ರೋಸ್ಟರ್ ಸಿಸ್ಟಂ ಅನ್ನು ಫಾಲೋ ಮಾಡುತ್ತಿಲ್ಲದಿರುವುದರಿಂದ, ಸಾಮಾಜಿಕ ನ್ಯಾಯ ಇವತ್ತು ಕಾರ್ಯಾನುಷ್ಠಾನಕ್ಕೆ ಬರುತ್ತಿಲ್ಲ. ಇದರ ಬಗ್ಗೆ ಬಹಳ ಕಠಿಣವಾಗಿ ನಾವು ಇವತ್ತು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದೇ ಕಾರಣದಿಂದಾಗಿ ಎರಡು ವರ್ಗದ ಮಕ್ಕಳನ್ನು ನಾವು ಇವತ್ತು ಸೃಷ್ಟಿ ಮಾಡುತ್ತಿದ್ದೇವೆ. ಇಲ್ಲದಿರುವವರು ಮತ್ತು ಇರತಕ್ಕಂಥವರು ಎಂಬ ವರ್ಗಗಳು ಇವೆ. ಇರುವ ಮತ್ತು ಇಲ್ಲದಿರುವವರ ನಡುವೆ, haves and have-nots ನಡುವೆ ದೊಡ್ಡ ಕಂದಕ ಆಗುತ್ತಿದೆ. ಮಕ್ಕಳೂ ಸಹ ಮುಂದಿನ ಸ್ಪರ್ಧೆಯ ಈ ಜಗತ್ತಿನಲ್ಲಿ, ಇವತ್ತು globalisation ಮತ್ತು liberalisation ಆದ ಮೇಲೆ, ನಮ್ಮ ಮಕ್ಕಳಿಗೆ ಆಂಗ್ಲ ಭಾಷೆ ಕಲಿಸಬೇಕಾಗಿದೆ. ಅಂತಹವರಿಗೆ ಪ್ರತಿಯೊಂದು ಕಡೆಯೂ ಉದ್ಯೋಗ ಇದೆ. ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕುವುದರಿಂದ ಹಿಡಿದು ಅಥವಾ weighing machine ನಲ್ಲಿ weigh ಮಾಡುವುದಕ್ಕೂ ಇವತ್ತು computer knowledge ಬೇಕು, ಸ್ವಲ್ಪ ಇಂಗ್ಲೀಷ್ knowledge ಬೇಕು. Sales girls ಆಗಲಿ, Science ಆಗಲಿ, ಇವತ್ತು ಇಂಗ್ಲೀಷ್ knowledge ಬೇಕು. ನಮ್ಮ ಸಹೋದ್ಯೋಗಿ ಶಾಸಕರೊಬ್ಬರು ನನಗೆ ಇಂಗ್ಲೀಷ್ ಜೊತೆಗೆ ನಾವು ಇವತ್ತು ಹೊಂದಿಕೊಳ್ಳದಿದ್ದರೆ ಖಂಡಿತವಾಗಿಯೂ ಕಷ್ಟವಾಗುತ್ತದೆ ಎಂದು ಹೇಳುತ್ತಿದ್ದರು. ಇದು ಖಂಡಿತವಾಗಿಯೂ ನಿಜ. ನಾನೂ ಸಹ ಏಳನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿ ಕಲಿತವನು. 8–9ನೇ ತರಗತಿಗೆ ಕೊಳ್ಳೇಗಾಲದಿಂದ ಬೆಂಗಳೂರಿಗೆ ಬಂದಾಗ, ನನಗೆ ಆದಂತಹ ಕಷ್ಟ, ನಾನು ಅನುಭವಿಸಲಿಕ್ಕೇ ಆಗಲಿಲ್ಲ. ಏಕೆಂದರೆ, ಅಷ್ಟೊಂದು ಮುಜುಗರದ, embarrassing situation ಅನ್ನು ನಾನು face ಮಾಡಿದೆ. ನನ್ನ ಮಗ ಇವತ್ತು ಇಂಗ್ಲೀಷ್

ಮೀಡಿಯಮ್‌ನಲ್ಲಿ ಓದುತ್ತಿದ್ದರೂ ಕನ್ನಡವನ್ನು ಚೆನ್ನಾಗಿ ಕಲಿತಿದ್ದಾನೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಪ್ರಾಥಮಿಕ ಹಂತದಲ್ಲಿ ಆ grasping power ಜಾಸ್ತಿ ಇರುತ್ತದೆ. ಇವತ್ತು ಕಡ್ಡಾಯ ಇಂಗ್ಲೀಷ್ ಮಾಡದಿದ್ದರೂ, ಹೇಗೆ ಹಿಂದಿಯನ್ನು ಹಂತ ಹಂತವಾಗಿ, 50 marks ಇಟ್ಟು ಅದರಲ್ಲಿ 13 ಅಂಕಗಳನ್ನು ತೆಗೆದುಕೊಂಡು ಪಾಸು ಮಾಡಲಿ, ಮಾಡದೇ ಹೋಗಲಿ, ಇವತ್ತು ಅನುಮತಿಯನ್ನು ಕೊಟ್ಟರು. ಸರ್ಕಾರ ಇದರ ಬಗ್ಗೆ ಗಮನ ಹರಿಸಿ, ಇಂಗ್ಲೀಷನ್ನು ಭಾಷೆಯಾಗಿ ಕಲಿಸಬೇಕು. ಕಡ್ಡಾಯವಾಗಿ ಪಾಸು ಮಾಡಿದರೂ ಪರವಾಗಿಲ್ಲ, ಮಾಡದಿದ್ದರೂ ಪರವಾಗಿಲ್ಲ ಎನ್ನುವಂತೆ ಮಾಡಬೇಕು. Alphabets ಅನ್ನು ಕಲಿಸತಕ್ಕಂಥದ್ದು ಮತ್ತು ಪದವನ್ನು ಕಲಿಸತಕ್ಕಂಥದ್ದು, ವಾಕ್ಯ formation ಮಾಡತಕ್ಕಂಥ basics ಅನ್ನು ಕಲಿಸಿದರೆ, ಅವನಿಗೆ ತಳಹದಿ ಸಿಗುತ್ತದೆ. ಈ ದಿಕ್ಕಿನಲ್ಲಿ ನಾವು ದೂರದೃಷ್ಟಿಯನ್ನಿಟ್ಟುಕೊಂಡು, ನಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತು employment generation, ಇವತ್ತು ಕಲಿಯತಕ್ಕಂಥ ಮಕ್ಕಳು ಬೇರೆ ಬೇರೆ ದೇಶದಲ್ಲಿ ಉನ್ನತ ಶಿಕ್ಷಣವನ್ನು ಮಾಡಿರುವುದಿಲ್ಲ. ಸಾಮಾನ್ಯ ಶಿಕ್ಷಣದಿಂದ ಅವರು ಜಗತ್ತಿನಲ್ಲಿ ಯಾವುದೇ ಕೆಲಸವನ್ನು ಕೊಟ್ಟರೂ ಕೂಡ ತಕ್ಕಂತಹ ಸಾಮರ್ಥ್ಯವನ್ನು ಬೆಳೆಸುತ್ತಾರೆ. ಏಕಂದರೆ, ಭಾಷೆ. ಭಾಷೆ ಎಲ್ಲಾ ವ್ಯವಹಾರಗಳಲ್ಲಿ, ವಹಿವಾಟುಗಳಲ್ಲಿ, ಜೀವನ ವೃತ್ತಿಯಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯ ಬೋಧಕ ಶಿಕ್ಷಕರನ್ನು ಬಹಳಷ್ಟು ಕಡೆ ಏನು ಮಾಡಿದ್ದಾರೆಂದರೆ, ಆಫೀಸ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಹಾಕಿದ್ದಾರೆ. ಏಕೆ ಹಾಕಿದ್ದಾರೆಂದು ನಾನು ಈ ಪ್ರಶ್ನೆಯನ್ನು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ದಯವಿಟ್ಟು ಬೋಧಕ ಶಿಕ್ಷಕರನ್ನು ಯಾವ ಯಾವ ಆಡಳಿತಕ್ಕೆ ಹಾಕಿದ್ದಾರೆ ಅಥವಾ ಕಛೇರಿ ಕೆಲಸಕ್ಕಾಗಿ ಹಾಕಿದ್ದಾರೆ ಅವರುಗಳನ್ನು ವಾಪಸ್ ಕರೆಸಿ. ಎಷ್ಟೋ ಸ್ಕೂಲ್‌ಗಳಲ್ಲಿ ಹೆಡ್‌ಮಾಸ್ಟರ್‌ಗಳು ಇಲ್ಲ. ಎಷ್ಟೋ ಸ್ಕೂಲುಗಳಲ್ಲಿ ಪಾಠ ಮಾಡತಕ್ಕಂತಹ ಮಾಸ್ಟರ್‌ಗಳು ಇಲ್ಲ. ಎಲ್ಲಾ ಒಓಡಿ ಮೇಲೆ ಮತ್ತೊಂದು ಕೆಲಸಕ್ಕೆ ಹೋಗಿದ್ದಾರೆ. ಅವರನ್ನು ತೆಗೆದುಕೊಂಡರೆ ಎಷ್ಟೋ ಶಾಲೆಗಳಲ್ಲಿ ಕಾಲೇಜುಗಳಲ್ಲಿ ಪಾಠ ಮಾಡಲಿಕ್ಕೆ ಜನ ಸಿಗುತ್ತಾರೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನೊಂದು ಸಲಹೆ ಕೊಡುತ್ತೇನೆ, ನನ್ನ ಕ್ಷೇತ್ರದಲ್ಲಿ ಒಂದು ಪ್ರಯೋಗವನ್ನು ಮಾಡಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಏನು ಪ್ರಯೋಗ ಮಾಡಿದ್ದೇನೆಂದರೆ, ರಾಜಾಜಿನಗರ ಎಜ್ಯುಕೇಷನ್ ಟಾಸ್ಕ್‌ಫೋರ್ಸ್ ಎಂದು ಮಾಡಿದ್ದೇನೆ. ಎಲ್ಲೆಲ್ಲಿ ಶಿಕ್ಷಕರ ಕೊರತೆ ಇದೆ, ಎಲ್ಲೆಲ್ಲಿ ಏನೇನು ಕೊರತೆ ಇದೆ, ಅದನ್ನು ಸ್ಥಳೀಯವಾಗಿ ಇರುವ ಜನಗಳನ್ನು ಉಪಯೋಗಿಸಿಕೊಂಡು ಔಟ್‌ಸೋರ್ಸ್ ಮಾಡಿಕೊಂಡು ಒಂದು ಅಡ್‌ಹಾಕ್ ಸಿಸ್ಟಮ್ ಉಪಯೋಗಿಸಿಕೊಂಡು ಮಕ್ಕಳು ಮತ್ತು

ವಿದ್ಯಾರ್ಥಿಗಳಲ್ಲಿ ಶಿಕ್ಷಣ ಮತ್ತು ಟೈಮ್ ವೇಸ್ಟ್ ಆಗದ ರೀತಿಯಲ್ಲಿ ಆ ಗ್ಯಾಪ್ ಫಿಲ್ ಮಾಡುವ ಪ್ರಯತ್ನ ಮಾಡುತ್ತಿದ್ದೇನೆ. ಪ್ರತಿಯೊಂದು ಕಾನ್‌ಸ್ಟಿಟ್ಯೂಯನ್ಸಿ ಲೆವಲ್‌ನಲ್ಲಿ ಈ ಎಜ್ಯುಕೇಷನ್ ಟಾಸ್ಕ್‌ಫೋರ್ಸ್ ಆಗತಕ್ಕಂಥದ್ದು ಆಗಬೇಕಾಗಿದೆ. ಇಲ್ಲವೆಂದರೆ, ಕೆಲವೊಂದು ಸಾರಿ ಏನಾಗುತ್ತದೆಂಬುದಕ್ಕೆ ಇವತ್ತು ನಿಮಗೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಇದೇ ಸದನದಲ್ಲಿ ನಾನು ಹಲವಾರು ಬಾರಿ ಹೇಳಿದೆ, ಮಹಾಲಕ್ಷ್ಮಿ ಲೇಔಟ್‌ನ ರಾಜಾಜಿನಗರ ಕ್ಷೇತ್ರದ ಸರ್ಕಾರಿ ಶಾಲೆ ಕಟ್ಟಡ ಇಲ್ಲದೆ ಬಾಡಿಗೆ ಬಿಲ್ಡಿಂಗ್‌ನಲ್ಲಿ ನಡೆಯುತ್ತಿದೆ. ಇದುವರೆಗೆ ಆರೂವರೆ ವರ್ಷಗಳಿಂದ ಬಾಡಿಗೆ ಕೊಡದೆ ಹೀನಾಯ ಸ್ಥಿತಿಯಲ್ಲಿ ಆ ಶಾಲೆ ಇದೆ. ಇದರ ಓನರ್ ಆನೇಕಲ್‌ನ ಶಾರದ ಎಂಬ ನಿವೃತ್ತ ಶಿಕ್ಷಕಿ; ಯಾವ ಸಂದರ್ಭದಲ್ಲಿ ಬಾಡಿಗೆ ಕೊಡಲಿಲ್ಲವೆಂದು ಮಕ್ಕಳನ್ನು ಹೊರಗಡೆ ಹಾಕಿದಾಗ ನನ್ನ ಮನೆಯಲ್ಲಿ ಕೊಡುತ್ತೇನೆಂದು ಹೇಳಿ ಆಕೆ ಆಶ್ರಯ ಕೊಟ್ಟರು. ಆದರೆ ನಮ್ಮ ಸರ್ಕಾರದ ವ್ಯವಸ್ಥೆ ಏನು ಮಾಡಿತ್ತು ಅಂದರೆ ಜಿಲ್ಲಾ ಪಂಚಾಯಿತಿಯವರು ಇದುವರೆಗೆ ಬಾಡಿಗೆ ಕೊಡಲಿಲ್ಲ. ರಾಜಾಜಿನಗರದ ಐದನೇ ಬ್ಲಾಕ್‌ನ ಶಾಲೆಗೆ ಬಿಲ್ಡಿಂಗ್ ಕೊಡಲಿಲ್ಲ. ಬಿಡಿಎಗೆ ಅವತ್ತಿನಿಂದ ಹೇಳುತ್ತಿದ್ದೇನೆ. ಯಾವುದೋ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಕೊಡುತ್ತೀರಿ, ಕ್ಲಬ್‌ಗಳಿಗೆ ಕೊಡುತ್ತೀರಿ, ನಮ್ಮ ಸರ್ಕಾರಿ ಶಾಲೆಗಳಿಗೆ ಕೊಡಿ ಎಂದರೆ ಕೊಡುವುದಕ್ಕೆ ಮೀನಮೇಷ ಎಣಿಸುತ್ತಿದ್ದೀರಿ. ಪ್ರತಿಯೊಂದು ಕ್ಷೇತ್ರದಲ್ಲಿ ಎಲ್ಲೆಲ್ಲಿ ಸರ್ಕಾರಿ ಶಾಲೆಗಳು ಇವೆ, ಎಲ್ಲಿ ಸರ್ಕಾರಿ ಜಾಗಗಳು ಇವೆ ಅಲ್ಲಿ ನಾವು ಈ ನಿವೇಶನಗಳನ್ನು ಕೊಡತಕ್ಕಂತಹ ಕಡ್ಡಾಯ ಸ್ವರೂಪ ಆಗಬೇಕಾದರೆ ಆ ಕ್ಷೇತ್ರಗಳಲ್ಲಿ ಇದು ಒಂದು ಕಠಿಣವಾದ ನಿರ್ಧಾರ ಆಗಬೇಕು. ನಿವೇಶನಗಳನ್ನು ಕಡ್ಡಾಯವಾಗಿ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಬಹಳ ದೊಡ್ಡ ಕೆಲಸವನ್ನು ನಮ್ಮ ಹಿಂದಿನ ಸರ್ಕಾರ ಮತ್ತು ಈಗಿನ ಸರ್ಕಾರ ಮಾಡಿದೆ. ಅಕ್ಷರ ದಾಸೋಹ, ಮಧ್ಯಾಹ್ನದ ಊಟದ ಕಾರ್ಯಕ್ರಮದಿಂದ ಎಲ್ಲ ಶಾಲೆಗಳಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಮಕ್ಕಳು ಜಾಸ್ತಿಯಾಗುತ್ತಿದ್ದಾರೆ. ಈ ಶಾಲೆಗಳಿಗೆ ಕೊಠಡಿಗಳನ್ನು ಕೊಡುವ ಬಗ್ಗೆ ನಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರಾದ ಮಾನ್ಯ ರಾಮಲಿಂಗಾರೆಡ್ಡಿಯವರು ಪ್ರಥಮ ಬಾರಿಗೆ ನಮ್ಮನ್ನೆಲ್ಲಾ ಕರೆಸಿ ನಿಮ್ಮ ಕೋರಿಕೆಗಳು ಏನು ಇವೆ ಎಂದು ಕೇಳತಕ್ಕಂಥದ್ದನ್ನು ಮಾಡಿದ್ದಕ್ಕೋಸ್ಕರ ನಾನು ಈ ಸಂದರ್ಭದಲ್ಲಿ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಸ್ಥಳೀಯವಾಗಿ ಮಕ್ಕಳು ಇವತ್ತು ಹೆಚ್ಚಿಗೆ ಆಗುತ್ತಿದ್ದಾರೆ. ಮಕ್ಕಳ ಸಂಖ್ಯೆಗನುಗುಣವಾಗಿ ಶಿಕ್ಷಕರು ಬೇಕಾಗುತ್ತಾರೆ. ಇನ್ನು ಒಂದು ಮಾತನ್ನು ಹೇಳುತ್ತೇನೆ, ಇವತ್ತು ಉನ್ನತ ಶಿಕ್ಷಣದಲ್ಲಿ ನಗರ ಪ್ರದೇಶ ಎಂದರೆ ಎಲ್ಲರೂ ಮೂಗು ಮುರಿಯುತ್ತಾರೆ. ನನಗೆ ಇದು ಏಕೋ ಅರ್ಥವಾಗುತ್ತಿಲ್ಲ. ನಾನು ಮಾನ್ಯ ಮಂಜುನಾಥ್‌ರವರಿಗೆ ಅವತ್ತಿನಿಂದ ಕೇಳುತ್ತಿದ್ದೇನೆ, ಸ್ವಾಮಿ ರಾಜಾಜಿ

ನಗರ ಕ್ಷೇತ್ರದಲ್ಲಿ ಯಾವುದೇ ಫಸ್ಟ್ ಗ್ರೇಡ್ ಕಾಲೇಜ್ಇಲ್ಲ, ಬಿಕಾಂಗೆ ಆಗಲಿ ಅಥವಾ ಬಿಎಸ್‌ಸಿಗೆ ಆಗಲಿ, ಬಿಎಗೆ ಆಗಲಿ ಹೋಗಬೇಕೆಂದರೆ ಬಹಳ ಕಷ್ಟ ಇದೆ. ದಯವಿಟ್ಟು ಫಸ್ಟ್ ಗ್ರೇಡ್ ಕಾಲೇಜ್ ಕೊಡಿ ಎಂದು ಕೇಳಿದ್ದೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಕೊಟ್ಟು ಸೇರುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲಾ ಕಡೆ ಪಿಯುಸಿ ಮತ್ತು ಸೆಕೆಂಡ್ ಪಿಯುಸಿ.ಯ 3–4 ಸೆಕ್ಷನ್‌ಗಳು ಇದ್ದರೆ ಡಿಗ್ರಿಯ ಒಂದು ಸೆಕ್ಷನ್ ಇರುತ್ತದೆ. ಬಹಳ ಕಷ್ಟ ಇದೆ. ಆರ್‌ಸಿ ಕಾಲೇಜಿನಲ್ಲಿ ಸೀಟ್ ಸಿಗುವುದಿಲ್ಲ, ವಿಜಯನಗರದ ಕಾಲೇಜಿನಲ್ಲಿ ಸೀಟ್ ಸಿಗುವುದಿಲ್ಲ. ಮಹಾರಾಣೀಸ್ ಕಾಲೇಜಿನಲ್ಲಿ ಸೀಟ್ ಸಿಗುವುದಿಲ್ಲ ಎಂದರೆ ಜನಸಾಮಾನ್ಯರ ಮಕ್ಕಳು ಎಲ್ಲಿ ಹೋಗಿ ಕಲಿಯುವುದಕ್ಕೆ ಸಾಧ್ಯವಾಗುತ್ತದೆ? ಇದು ಬಹಳ ಕಷ್ಟವಾಗುತ್ತದೆ. ಇಷ್ಟು ರಿಸೋರ್ಸ್‌ಫುಲ್ ಕಾರ್ಮಿಕರು ಇರತಕ್ಕಂತಹ, ಬಡ ವರ್ಗದ ಜನ ಇರತಕ್ಕಂತಹ, 740 ಸ್ಲಂ ಇರತಕ್ಕಂತಹ ಬೆಂಗಳೂರು ನಗರದಲ್ಲಿ ಇಂತಹ ಉನ್ನತ ಶಿಕ್ಷಣದ ಅವಶ್ಯಕತೆ ಇದೆ. ಶಾಂತಿ ನಗರದ ಕಾಲೇಜನ್ನು ದಯವಿಟ್ಟು ಬೆಂಗಳೂರಿನಿಂದ ಹೊರಗಡೆ ಕಳುಹಿಸಬೇಡಿ ಎಂದು ಮನವಿ ಮಾಡಿದೆ. ಈಗಲೂ ಮತ್ತೆ ಮನವಿ ಮಾಡುತ್ತೇನೆ.

ಅಧ್ಯಕ್ಷರು :– ನರೇಂದ್ರಬಾಬುರವರೇ ಬೇಗ ಮುಗಿಸಿ, 15 ನಿಮಿಷ ತೆಗೆದುಕೊಂಡಿದ್ದೀರಿ.

ಶ್ರೀ ನೆ.ಲ ನರೇಂದ್ರಬಾಬು :– ಇವತ್ತು ಪಾಠ ಪ್ರವಚನದ ಬಗ್ಗೆ ನಾನು ಒಂದು ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ನಮ್ಮ ಇತಿಹಾಸದ ಪುಟಗಳಲ್ಲಿ ಎಲ್ಲ, ಭಾರತ ದೇಶ ಈ ಯುದ್ಧದಲ್ಲಿ ಸೋತಿತು, ಆ ಯುದ್ಧದಲ್ಲಿ ಸೋತಿತು ಎಂದು ಹೇಳಿ ಹೇಡಿಗಳನ್ನಾಗಿ ಮಾಡತಕ್ಕಂತಹ ಪಾಠಗಳನ್ನು ಕಿತ್ತು ಹಾಕಿ ರಣವೀರರನ್ನು ಮಾಡತಕ್ಕಂತಹ ಪಾಠಗಳು ಬರಲಿ. ಹುಮ್ಮಸ್ಸು ಬರತಕ್ಕಂತಹ ಸ್ಫೂರ್ತಿ ಬರತಕ್ಕಂತಹ ಆ ಬಾಲ್ಯದಲ್ಲೇ ವೀರ ರಸ ತುಂಬತಕ್ಕಂತಹ ಹಾಗೂ ಜೊತೆಯಲ್ಲಿ ದೇಶದ ಬಗ್ಗೆ ಸ್ವಾಭಿಮಾನ ಮತ್ತು ದೇಶ ಪ್ರೇಮ ಬರತಕ್ಕಂತಹ ಪಾಠಗಳನ್ನು ಅಳವಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯದ ಬಗ್ಗೆ ನಾನು ಆಗ್ರಹಿಸುತ್ತೇನೆ, ಯಾವುದೇ 'ಏಡೆಡೆ ಆಗಲಿ, ಅನ್ ಏಡೆಡ್ ಸ್ಕೂಲ್ ಆಗಲಿ, ಬೇರೆ ಬೇರೆ ಸ್ವರೂಪಗಳಲ್ಲಿ ಹಣ ಪಡೆಯುತ್ತಾರೆ, ಇದು ಸಿಎಜಿಯಿಂದ ಅಡಿಟ್ ಆಗಬೇಕು. ಜೊತೆಗೆ ಪಾರದರ್ಶಕತೆ ಇರಬೇಕು. ದಯವಿಟ್ಟು ಇದರ ಬಗ್ಗೆ ಜನಗಳಿಗೆ ಗೊತ್ತಾಗಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ....

ಅಧ್ಯಕ್ಷರು :– ದಯಮಾಡಿ 15 ನಿಮಿಷದ ಮೇಲೆ ಆಯಿತು, ಬಹಳ ಜನ ಮಾತನಾಡುವವರಿದ್ದಾರೆ, ಬೇಗ ಮುಗಿಸಿ ಕನ್‌ಕ್ಲೂಡ್ ಮಾಡಿ.

ಶ್ರೀ ನೆ.ಲ. ನರೇಂದ್ರಬಾಬು :– ಕೃಷಿ ಬಗ್ಗೆ ಬಹಳಷ್ಟು ವಿಚಾರಗಳನ್ನು ಹೇಳಬೇಕೆಂದು ಇದ್ದರೂ ಸಮಯದ ಅಭಾವದಿಂದ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಕರ್ನಾಟಕದಲ್ಲಿ ಬಹಳಷ್ಟು ಜಿಲ್ಲೆಗಳು ನೀರಾವರಿಯಿಂದ ಫಲಕಾರಿ ಆಗಿ ಆಗುತ್ತಿವೆ. ಆದರೆ ಕೆಲವು ಜಿಲ್ಲೆಗಳು ಇದರಿಂದ ವಂಚಿತರಾಗುತ್ತಿರುವುದನ್ನು ನೋಡಿದಾಗ ಏಕೆ ಈ ತಾರತಮ್ಯ? ನೀವು ನಿರ್ಧಾರ ತೆಗೆದುಕೊಳ್ಳುವಾಗ ಕಠಿಣವಾಗಿ ಮತ್ತು ದೂರದೃಷ್ಟಿ ಇಟ್ಟುಕೊಂಡು ನಿರ್ಧಾರ ತೆಗೆದುಕೊಳ್ಳುತ್ತಿಲ್ಲ? ವಿಶೇಷವಾಗಿ ತುಮಕೂರು ಜಿಲ್ಲೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆ, ಮತ್ತು ಮೈಸೂರು ಈ ಎಲ್ಲಾ ಜಿಲ್ಲೆಗಳಲ್ಲಿ ಬಹುಶಃ ಚಿತ್ರದುರ್ಗ ಜಿಲ್ಲೆಯಿಂದ ಇರಬಹುದು, ಪಶ್ಚಿಮ ಘಟ್ಟದಿಂದ ಸಮುದ್ರಕ್ಕೆ ಹೋಗುವ ನೂರಾರು ಟಿಎಮ್‌ಸಿ ನೀರು ಪೋಲಾಗುವುದನ್ನು ಈ ಕಡೆಯಿಂದ ಡೀವಿಯೇಟ್ ಮಾಡುವ ಸರ್ವೇಗೆ ದೂರದೃಷ್ಟಿ ಇಟ್ಟುಕೊಂಡು ಹಣ ಕೊಟ್ಟರೆ ಮುಂದಿನ 20 ವರ್ಷಗಳಲ್ಲಿ ಕುಡಿಯುವ ನೀರು ಮತ್ತು ನೀರಾವರಿಗೆ ಬೇಕಾಗತಕ್ಕಂತಹ ಈ ಜಿಲ್ಲೆಗಳಲ್ಲಿ ಅನುಕೂಲವಾಗುತ್ತದೆ. ಕೋಲಾರದಲ್ಲಿ ಇವತ್ತು ಚಿನ್ನ ಇಲ್ಲ, ಚಿನ್ನದಂತಹ ತರಕಾರಿಯನ್ನು ಬೆಳೆಯುವುದನ್ನು ನಾವು ನೋಡುತ್ತಿದ್ದೇವೆ. 800 ಅಡಿ 900 ಅಡಿ ಆಳಕ್ಕೆ ಹೋಗಿ ನೀರನ್ನು ತೆಗೆಯತಕ್ಕಂತಹ ನಮ್ಮ ಬಂಧುಗಳು ಅಲ್ಲಿ ಇವತ್ತು ತರಕಾರಿ ಬೆಳೆಯುವುದನ್ನು ನಾವು ನೋಡುತ್ತಿದ್ದೇವೆ. ಈ ದೂರದೃಷ್ಟಿ ಇಟ್ಟುಕೊಂಡು ಹಳೆಯ ಮೈಸೂರು ಕಡೆ ಅಥವಾ ಈ ಕಡೆ ನೀರಾವರಿಗೆ ಇರತಕ್ಕಂತಹ ಯೋಜನೆಗಳನ್ನು ರೂಪಿಸಬೇಕೆಂದು ಈ ಸಂದರ್ಭದಲ್ಲಿ ನಾನು ಆಗ್ರಹಿಸುತ್ತೇನೆ.

ಅಧ್ಯಕ್ಷರು :– ಮುಗಿಸಿ ಸ್ವಾಮಿ, ಸಮಯ ಇಲ್ಲ, 10 ನಿಮಿಷ ಮಾತನಾಡಿ ಎಂದರೆ ಸುಮ್ಮನೆ ಎಳೆದುಕೊಂಡು ಹೋಗುತ್ತಿದ್ದೀರಿ. ಬೇರೆಯವರಿಗೆ ಹೇಗೆ ಅವಕಾಶ ಕೊಡುತ್ತೀರಿ? ಬೇಗ ಮುಗಿಸಿ.

ಶ್ರೀ ನೆ.ಲ. ನರೇಂದ್ರಬಾಬು :– ಇನ್ನು ಉದ್ಯೋಗಕ್ಕೆ ಸಂಬಂಧಪಟ್ಟ ಹಾಗೆ ಹೇಳಬೇಕೆಂದರೆ, ಇವತ್ತು ಬಹಳ ಸವಾಲಾಗಿರತಕ್ಕ ಸಮಸ್ಯೆ ಎಂದರೆ, ನಿರುದ್ಯೋಗ ಸಮಸ್ಯೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳು ಎಲ್ಲ ಔಟ್ ಡೇಟೆಡ್ ಆಗಿವೆ. ಅಲ್ಲಿ ಇರತಕ್ಕಂತಹವರು ನಿರುದ್ಯೋಗಿಗಳಾಗಿದ್ದಾರೆ. ಯಾವುದೇ ಖಾಸಗಿಯವರಾಗಲಿ ಅಥವಾ ಯಾವುದೇ ಕಾರ್ಖಾನೆಗಳವರಾಗಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ಕಾರ್ಮಿಕರನ್ನು ನೇಮಕ ಮಾಡತಕ್ಕಂತಹ ವ್ಯವಸ್ಥೆ ಇಲ್ಲ. ನಮ್ಮ ಸಚಿವರು ಹಿಂದೆ ಹೇಳಿದರು ಬಹಳಷ್ಟು ಕಡೆ ಅನೌನ್ಸ್ ಮಾಡಿದರು, ಎಂಪ್ಲಾಯ್‌ಮೆಂಟ್ ಪಾರ್ಕ್‌ಗಳನ್ನು ಪ್ರತಿಯೊಂದು ಕ್ಷೇತ್ರದಲ್ಲಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ಗಳಲ್ಲಿ ಮಾಡುತ್ತೇವೆಂದು ಹೇಳಿದರು. ಏಕೆ ತಡವಾಗುತ್ತಿದೆ ಎಂಬ ಬಗ್ಗೆ, ದಯವಿಟ್ಟು ಉತ್ತರ ಕೊಡಬೇಕು. ಯಾವುದೇ

ಖಾಸಗಿಯವರಾಗಲಿ, ಇನ್‌ಫೋಸಿಸ್‌ನವರಾಗಲಿ ಯಾವುದೇ ಸಣ್ಣ ಕಾರ್ಖಾನೆಯವರಾಗಲಿ ಸ್ಥಳೀಯರಿಗೆ ಉದ್ಯೋಗ ಕೊಡತಕ್ಕಂತಹ ವ್ಯವಸ್ಥೆ ಆಗಬೇಕು. ಎಲ್ಲಾ ಸೌಲಭ್ಯಗಳನ್ನು ಅಂದರೆ ಜಮೀನು, ನೀರು, ಪವರ್ ಎಲ್ಲಾ ರೀತಿಯ ಸೌಲಭ್ಯಗಳನ್ನು ಇಟ್ಟುಕೊಂಡು ಸ್ಥಳೀಯರಿಗೆ ಉದ್ಯೋಗ ಕೊಡುವುದಿಲ್ಲ ಎಂದರೆ, ಇದರ ಬಗ್ಗೆ ನಾವು ಬಹಳ ತೀವ್ರವಾಗಿ, ಯುವ ಜನಾಂಗದ ಬಗ್ಗೆ ದೂರದೃಷ್ಟಿ ಇಟ್ಟುಕೊಂಡು ಯೋಚನೆ ಮಾಡಬೇಕು. ಅಸಂಘಟಿತ ಕಾರ್ಮಿಕರ ಬಗ್ಗೆ ಚೈತನ್ಯ ಯೋಜನೆಯನ್ನು ಅನುಷ್ಠಾನ ಮಾಡಬೇಕೆಂದು ಸರ್ಕಾರದ ನಿಲುವು ಏನಿದೆ ಈ ಒಂದು ಕಾರ್ಯಕ್ರಮವನ್ನು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಎಂಪ್ಲಾಯ್‌ಮೆಂಟ್ ಪಾರ್ಕ್ ಎಂದು ನಿಮ್ಮ ದೂರದೃಷ್ಟಿ ಏನಿದೆ, ಅದನ್ನು ದಯವಿಟ್ಟು ಪ್ರಾರಂಭ ಮಾಡಿ. ಇದು ಖಂಡಿತವಾಗಿ ಅವಶ್ಯಕತೆ ಇದೆ. ಯಾವ ಪೇಪರ್ ಆಗಲಿ, ಯಾವ ಎಕ್ಸ್‌ಛೇಂಜ್‌ಗೆ ಹೋದರೂ ಮಾಹಿತಿ ಸಿಗುತ್ತಿಲ್ಲ. ದಯಮಾಡಿ ಈ ಸರ್ಕಾರ ಈ ದಿಕ್ಕಿನಲ್ಲಿ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಬಾಲಕಾರ್ಮಿಕರ ಪರಿಸ್ಥಿತಿ ಹೇಳತೀರದು. ಇಲ್ಲೀಗಲ್ ಆಗಿ ಮೈನಿಂಗ್ ಏನು ನಡೆಯುತ್ತಿದೆ, ಅಲ್ಲಿ ಬಹಳಷ್ಟು ಬಾಲ ಕಾರ್ಮಿಕರನ್ನು ಉಪಯೋಗಿಸುತ್ತಿರುವ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿಯನ್ನು ಚೈಲ್ಡ್ ರೈಟ್ ಟ್ರಸ್ಟ್‌ನವರು ಕೊಟ್ಟಿದ್ದಾರೆ. ಇದುವರೆಗೆ ಇದರ ಬಗ್ಗೆ ಕಠಿಣವಾದ ಕ್ರಮವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿಲ್ಲ? ತೆಗೆದುಕೊಂಡಿದ್ದರೆ ದಯವಿಟ್ಟು ಹೇಳಬೇಕೆಂಬ ಮಾತನ್ನು ಹೇಳಿ, ಈ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ಹೇಳಬೇಕೆಂದು ಇದ್ದರೂ, ಸಮಯ ನಿಗದಿಮಾಡಿರುವುದರಿಂದ ಹೆಚ್ಚು ಲಂಬಿಸದೆ, ಈ ಸಂದರ್ಭದಲ್ಲಿ ನನ್ನ ಮಾತುಗಳನ್ನು ಮುಗಿಸಿ. ಮತ್ತೊಂದು ಅವಕಾಶ ಬಂದಾಗ ನನ್ನ ಅಭಿಪ್ರಾಯಗಳನ್ನು, ನನ್ನ ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆಂದು ಹೇಳಿ ಮತ್ತೊಮ್ಮೆ ನಿಮಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಚರ್ಚೆ ಮುಗಿಸೋಣ, 12 ಗಂಟೆ ಆಯಿತು, ಎರಡು ಗಂಟೆ ಒಳಗಡೆ ಉತ್ತರ ಕೊಡಬೇಕು. ದಯಮಾಡಿ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಐದು ಜನ ಮಂತ್ರಿಗಳು ಉತ್ತರ ಕೊಡಬೇಕು. ಎರಡು ಗಂಟೆ ಒಳಗೆ ಇದನ್ನು ಮುಗಿಸಬೇಕು. ಆದ್ದರಿಂದ ದಯಮಾಡಿ ಇನ್ನೊಂದು ಬೇಡಿಕೆ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ, ಅರ್ಥ ಮಾಡಿಕೊಳ್ಳಿ. ಒಬ್ಬರು ಅರ್ಧ ಗಂಟೆ ಉತ್ತರ ಕೊಟ್ಟರೂ ಎರಡು ಗಂಟೆ ಬೇಕಾಗುತ್ತದೆ. ಇನ್ನೊಂದು ಬೇಡಿಕೆ ತೆಗೆದುಕೊಳ್ಳೋಣ.

ಶ್ರೀ ಗೋವಿಂದ ಮಕ್ತಪ್ಪ ಕಾರಜೋಳ :- ಒಂದು ಗಂಟೆಯವರೆಗೆ ಅವಕಾಶ ಕೊಡಿ.

ಅಧ್ಯಕ್ಷರು :- ಒಂದು ಗಂಟೆಯವರೆಗೆ ಅವಕಾಶ ಕೊಡುವುದಾದರೆ ಮುಂದಿನ ಬೇಡಿಕೆಗಳ ಗತಿ ಏನು? ನೀವೇ ಯೋಚನೆ ಮಾಡಿ. ಮುಂದೆ ಇನ್ನೂ ಅನೇಕ ಪ್ರಮುಖ ಬೇಡಿಕೆಗಳಿವೆ. ಅವುಗಳ ಬಗ್ಗೆ ಎಲ್ಲ ಮಾತನಾಡಲಿ. ಸಿ.ಎಸ್. ಪುಟ್ಟೇಗೌಡರು ನೀವು ಪ್ರಾರಂಭ ಮಾಡಿ. ಐದು ನಿಮಿಷ ಎಂದು ಕೇಳಿದಿರಿ, ಐದಾರು ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ (ಪಾಂಡವಪುರ) :- ಮಾನ್ಯ ಸಭಾಧ್ಯಕ್ಷರೆ, ನಾನು ಈ ಶಿಕ್ಷಣ ಮತ್ತು ಕೃಷಿ ಬಗ್ಗೆ ಮಾತನಾಡುವುದಕ್ಕೆ ಆರಂಭ ಮಾಡುತ್ತಾ, ಸಮಯವನ್ನು ಹೆಚ್ಚು ತೆಗೆದುಕೊಳ್ಳದೆ, ಶಿಕ್ಷಣದ ಬಗ್ಗೆ ನಾನು ಹೇಳುವುದಾದರೆ, ಬಹುಶಃ 10 ವರ್ಷಗಳಿಂದ ಈಚೆಗೆ ಈ ಶಿಕ್ಷಣಕ್ಕೆ ಅತ್ಯಂತ ಹೆಚ್ಚಿನ ಮಹತ್ವ ಬಂದಿದೆ; ಮತ್ತು ಬಹಳ ಅಭಿವೃದ್ಧಿ ಕೂಡ ಆಗಿದೆ. ಶಾಲಾಕಾಲೇಜುಗಳಲ್ಲಿ ಇವೊತ್ತು ಹಳ್ಳಿಗಳಲ್ಲಿ ಕಾಲೇಜು ವ್ಯವಸ್ಥೆ ಹದಗೆಟ್ಟಿದೆ ಎಂಬುದನ್ನು ನಾವು ಕಂಡಿದ್ದರೂ ಕೂಡ ಪ್ರೈಮರಿ ಸ್ಕೂಲ್ ಹಾಗೂ ಹೈಸ್ಕೂಲ್‌ಗಳೇನಿವೆ ಅವುಗಳ ಗುಣಮಟ್ಟ ಚೆನ್ನಾಗಿದೆ. ಒಂದು ನಾಲ್ಕಾರು ಸರ್ಕಾರಗಳು ಬಂದಮೇಲೆ ಈಚೆಗೆ ಅಲ್ಲಿ ಹಳ್ಳಿಗಾಡಿನಲ್ಲಿ ಹೆಣ್ಣು ಮಕ್ಕಳು, ಗಂಡು ಮಕ್ಕಳು ಸಮೇತವಾಗಿ ಎಲ್ಲರೂ ಕೂಡ ವಿದ್ಯಾಭ್ಯಾಸದಲ್ಲಿ ತೊಡಗಿದ್ದಾರೆ. ಚೆನ್ನಾಗಿ ಕಲಿಯುತ್ತಿದ್ದಾರೆ, ಒಳ್ಳೆಯ ಮಾರ್ಕ್ಸ್‌ನ್ನು ತೆಗೆದುಕೊಳ್ಳುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಅಲ್ಲಿರತಕ್ಕಂಥ ಹಲವಾರು ತೊಡಕಗಳನ್ನು ನಾವು ನೋಡಬೇಕಾಗಿದೆ. ಮಾನ್ಯ ರಾಮಲಿಂಗಾರೆಡ್ಡಿಯವರು ಒಳ್ಳೆಯವರು, ಕೆಟ್ಟವರು ಎಂದು ನಿನ್ನೆಯ ದಿನ ಈ ಸದನದಲ್ಲಿ ಚರ್ಚೆಯಾಗುತ್ತಿತ್ತು. ಅವರು ಒಳ್ಳೆಯವರು, ಕೆಟ್ಟವರು ಎನ್ನುವ ಚರ್ಚೆಯಲ್ಲ, ಅವರ ಕಾರ್ಯಕ್ರಮ ಒಳ್ಳೆಯದೋ, ಕೆಟ್ಟದ್ದೋ ಎಂಬುದು ನಮ್ಮ ಮುಂದಿರತಕ್ಕಂಥ ವಿಚಾರ. ಅವರು ಡಾ|| ನಂಜುಂಡಪ್ಪನವರ ವರದಿ ಆಧಾರದ ಮೇಲೆ ಮಾತ್ರ ಸ್ಕೂಲ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಡಾ|| ನುಂಜುಂಡಪ್ಪನವರು ವರದಿ ಕೊಡುವಾಗ ಎಲ್ಲಿ ಹಿಂದುಳಿದ ವರ್ಗ ಇದೆ ಎನ್ನುವುದನ್ನು ಹೇಳಿದರೇ ವಿನಃ ಹಿಂದುಳಿದ ಜಾಗ ಇದೆ ಎನ್ನುವುದನ್ನು ಹೇಳಿದರೆ ವಿನಃ ಇನ್ನೆಲ್ಲಿ ಸಮಸ್ಯೆ ಇದೆ ಅಲ್ಲಿಗೆ ಕೊಡಬೇಡಿ ಎಂದು ಅವರು ಎಲ್ಲೂ ಹೇಳಿಲ್ಲ. ದಯಮಾಡಿ ನಮ್ಮ ಕಡೆ ಕೂಡ ನಗರಗಳಲ್ಲಿ ಶಾಲೆಯನ್ನು ನೀವು ಬರೇ ಅದನ್ನೇ ಆಧಾರವಾಗಿ ಇಟ್ಟುಕೊಂಡು ಅಲ್ಲಿಗೇ ಕೊಟ್ಟರೆ ಇನ್ನು ಇತ್ತ ಕಡೆ ಬಹಳ ಶೂನ್ಯವಾಗುತ್ತದೆ, ಇದು ಖಂಡಿತ. ನೀವು ಆ ಭಾಗಕ್ಕೆ ಕೊಡಿ. ನಾವು ಬೇಡ ಎಂದು ಹೇಳುವುದಿಲ್ಲ. ನೀವು ಅಲ್ಲಿಗೆ ನಾಲ್ಕು ಕೊಟ್ಟಾಗ ಇಲ್ಲಿಗೆ ಎರಡನ್ನಾದರೂ ಕೋಡಬೇಕಲ್ಲ. ನೀವು ಅದೊಂದನ್ನೇ ಆಧಾರವಾಗಿಟ್ಟುಕೊಂಡು ಬಿಟ್ಟರೆ ಹೇಗೆ? ನೀವಾಗಲೀ, ಸಿದ್ಧರಾಮಯ್ಯನವರಾಗಲೀ, ರಾಮಲಿಂಗಾರೆಡ್ಡಿ ಸಾಹೇಬರಾಗಲೀ, ಅಥವಾ ಧರ್ಮಸಿಂಗ್‌ರವರಾಗಲೀ ಆ ವರದಿಯೊಂದನ್ನೇ ಇಟ್ಟುಕೊಂಡುಬಿಟ್ಟರೆ ಅದು ತಪ್ಪು

ಎಂದು ನಾನು ಹೇಳುತ್ತಾ ಬೇರೆ ಭಾಗಕ್ಕೂ ಕೂಡ ಇರತಕ್ಕಂಥ ಅಗತ್ಯತೆಯನ್ನು ಗುರುತಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಸಂದರ್ಭದಲ್ಲಿ ಮೇಸ್ಟ್ರನ್ನು ಕಂಡರೆ, ಪೊಲೀಸರನ್ನು ಕಂಡರೆ ಸ್ವಲ್ಪ ದಯೆ, ಕರುಣೆ ಇರಲಿ, ಬೇರೆ ಇಲಾಖೆ ನೌಕರರಿಗಿಂತ ನಿಜವಾಗಲೂ ಇವರು ಸೇವಾ ಮನೋಭಾವನೆ ಉಳ್ಳವರು. ನಿಮ್ಮ ಹತ್ತಿರ ಪ್ರೈಮರಿ ಸ್ಕೂಲ್ ಮೇಸ್ಟ್ರುಗಳು ಟ್ರಾನ್ಸ್‌ಫರ್‌ಗೆ ಬಂದರೆ 5 ವರ್ಷ ಆಗಿರಬೇಕು ಎಂದು ಹೇಳುತ್ತೀರಿ ಯಾರೋ ಒಬ್ಬ ಹೆಣ್ಣು ಮಗಳು ಬಿಜಾಪುರದಲ್ಲೋ, ಬೆಳಗಾಂನಲ್ಲೋ ಕೆಲಸ ತೆಗೆದುಕೊಂಡರೆ ಆ ಯಮ್ಮಾ ಐದು ವರ್ಷ ಅಲ್ಲೇ ಇರಬೇಕು; ಅವರು ಟ್ರಾನ್ಸ್‌ಫರ್ ಆಗಿ ಇಲ್ಲಿ ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಪಾಪ ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಅತ್ಯಂತ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದೆ. ಇಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್, ಬ್ರೀಕ್ ಇನ್ಸ್‌ಪೆಕ್ಟರ್, ಸಬ್ ರಿಜಿಸ್ಟ್ರಾರ್ ದಿನಕ್ಕೆ, ತಿಂಗಳಿಗೆ 50 ಸಾವಿರ, ಲಕ್ಷ ರೂ.ಗಳನ್ನು ತೆಗೆದುಕೊಳ್ಳುತ್ತಾರಲ್ಲಾ, ಇವರಿಗೆಲ್ಲಾ ಏಕೆ ಸ್ವಾಮಿ ನೀವು ಎರಡೆರಡು ದಿವಸಕ್ಕೆ ಟ್ರಾನ್ಸ್‌ಫರ್ ಮಾಡುತ್ತೀರಾ? ಆದರೆ ಪ್ರೈಮರಿ ಸ್ಕೂಲ್ ಮಾಸ್ಟರ್‌ಗಳಿಗೆ ಯಾರಿಗೂ ಕಾಸು ಸಿಕ್ಕುವುದಿಲ್ಲ. ಅವರು ಏನೇ ಆಗಲೀ ಪಾಪ ಅಲ್ಲಿದ್ದು ಆ ಭಾಗಕ್ಕೆ ಹೋಗಿ ಕಷ್ಟಪಟ್ಟು ಅವರು ದುಡಿಯುತ್ತಿದ್ದಾರೆ; ಬೆಳಗಿನಿಂದ ಸಂಜೆಯವರೆಗೂ ಪಾಠ ಮಾಡಿ ಈ ಬದುಕಿಗೆ, ಜಗತ್ತಿಗೆ ಮಕ್ಕಳಿಗೆ ಕಣ್ತೆರಿಸುತ್ತಿದ್ದಾರೆ. ಪಾಪ ಒಬ್ಬ ಹೆಣ್ಣು ಮಗಳು ಈ ಕಡೆಯವಳು ಅಲ್ಲಿ ಬಿಜಾಪುರದಲ್ಲಿ ಕೆಲಸ ಮಾಡುತ್ತಿದ್ದವಳನ್ನು ಅವರ ತಂದೆ ತಾಯಿ ಇಲ್ಲಿ ಇದ್ದುದ್ದರಿಂದ ತಮ್ಮ ಮಗಳನ್ನು ಈ ಭಾಗಕ್ಕೆ ವರ್ಗ ಮಾಡಿ ಎಂದು ಕೇಳುವುದು ತಪ್ಪೇ? ನೀವು ಅದನ್ನು ಏಕೆ ಮಾಡುತ್ತಿಲ್ಲ? ಇಲ್ಲಿ ಎಜುಕೇಶನ್ ಡಿಪಾರ್ಟ್‌ಮೆಂಟಿನಲ್ಲಿ ಇರುವವರು, ಕಮೀಷನರ್ ಆಫೀಸಿನಲ್ಲಿ ಇರುವವರು ಎಷ್ಟೆಷ್ಟು ವರ್ಷಗಳಿಂದ ಇದ್ದಾರೆ? ಮಲ್ಟಿ ಸ್ಟೋರೀಡ್ ಬಿಲ್ಡಿಂಗ್‌ನಲ್ಲಿ ಇರುವವರು ಎಷ್ಟೆಷ್ಟು ವರ್ಷಗಳಿಂದ ಇದ್ದಾರೆ? ಈ ಸಬ್ ರಿಜಿಸ್ಟ್ರಾರ್ ದಿನಾ ಸಂಜೆಯ ಹೊತ್ತಿಗೆ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋಗುತ್ತಾನಲ್ಲಾ, ಅವನಿಗೆ ಏಕೆ ನೀವು ಈ ನಿಯಮವನ್ನು ಹೇಳುವುದಿಲ್ಲ? ಬಿಜಾಪುರದಲ್ಲಿ ವೆಹಿಕಲ್ ಇನ್ಸ್‌ಪೆಕ್ಟರ್ ಅನ್ನು ಹಾಕಿದ್ದಾರೆ. ಪಾಪ ಅವನಿಗ್ಯಾಕೆ ಪಾಪ ನೀವು ಇಲ್ಲಿಗೆ ಹಾಕ್ತೀರಿ? ಅಲ್ಲಿಗೆ ಇರುವವರಿಗೆ ಪ್ರಿಫರೆನ್ಸ್ ಕೊಡಿ. ಅವರಿಗೆ ಏಕೆ ನೀವು ಮುಗಿಬೀಳ್ತೀರಾ? ಅವರು ಲಕ್ಷಾಂತರ ರೂಪಾಯಿ ಲೂಟಿ ಮಾಡ್ತಾರೆ. ಅವರನ್ನು ನೀವು ಆರು ತಿಂಗಳಿಗೆ, ಮೂರು ತಿಂಗಳಿಗೆ ಬದಲಾವಣೆ ಮಾಡುವುದಕ್ಕೆ ಆಗುತ್ತದೆ. ಇದು ನ್ಯಾಯವಲ್ಲ, ನೀವು ಸ್ವಲ್ಪ ದಯಮಾಡಿ, ಅವರನ್ನು ವರ್ಗ ಮಾಡಿಬೇಡ ಅನ್ನುವುದಿಲ್ಲ. ಒಂದೆರಡು ವರ್ಷವೋ ಮೂರು ವರ್ಷವೋ ಇರಲಿ. ಆ ಭಾಗದಲ್ಲಿ ಮೇಸ್ಟ್ರಿಗೆ ನೀವು ತೊಂದರೆ ಕೊಡಿ ಎಂದು ನಾವು ಹೇಳುವುದಿಲ್ಲ. ಈ ಭಾಗದ ಒಬ್ಬ ಹೆಣ್ಣು ಮಗಳು ಉದ್ಯೋಗ ಹೊಂದಲಿ ಎಂದು ಹೇಳಿ ಎಲ್ಲರಿಗೂ ಬಯಕೆ ಇರುತ್ತದೆ. ಓದುತ್ತಾರೆ, ಅಲ್ಲಿ

ಕೆಲಸ ತೆಗೆದುಕೊಳ್ಳುತ್ತಾರೆ. ನೀವೆಲ್ಲಾ ಜಾತೀವಾರು ಕೆಲಸ ಕೊಡುವಾಗ ಒಕ್ಕಲಿಗರೆಲ್ಲಾ ಅಲ್ಲಿಗೆ ಹೋಗ್ತಾರೆ, ಒಕ್ಕಲಿಗರು ಇಲ್ಲದೇ ಇರುವ ಕಡೆಗೆ ಹೋಗುತ್ತಾರೆ. ಲಿಂಗಾಯತರೆಲ್ಲಾ ಇಲ್ಲಿಗೆ ಬರ್ತಾರೆ, ನಾಯಕರೆಲ್ಲಾ ನಾಯಕರು ಇಲ್ಲದೇ ಇರುವ ಕಡೆಗೆ ಹೋಗ್ತಾರೆ ಮತ್ತು ಅಲ್ಲಿ ಕೆಲಸ ತೆಗೆದುಕೊಂಡಿದ್ದಾರೆ. ನೀವು ಬೇಕಾದರೆ ಸೆಲೆಕ್ಷನ್ನನ್ನು ರಾಜ್ಯ ಮಟ್ಟದಲ್ಲಿ ಮಾಡಿ. ನೀವು ಅದನ್ನು ಬಿಟ್ಟು ನಮ್ಮ ಮಕ್ಕಳೂ ಕೂಡ ಅಲ್ಲಿಗೆ ಹೋಗಿದ್ದರೂ, ನಮ್ಮ ಮಗಳೇ ಬಿಜಾಪುರದಲ್ಲೋ, ಧಾರವಾಡದಲ್ಲೋ ಇದ್ದರೆ ರಾತ್ರಿ ಮನೆಗೆ ಹೋದರೆ ಹೆಂಡ್ತಿ ಸಮಾಧಾನವಾಗಿ ಊಟಕ್ಕೆ ಹಾಕ್ತಾಳಾ?

ಶ್ರೀ ರಾಮಲಿಂಗಾರೆಡ್ಡಿ :– ಮಾನ್ಯ ಅಧ್ಯಕ್ಷರೆ, ಅಲ್ಲಿ ಅವರನ್ನು ಆ ಭಾಗದಲ್ಲಿ ರಿಕ್ರೂಟ್ ಮಾಡುವಾಗಲೀ ಕನಿಷ್ಟ 5 ವರ್ಷ ಅಲ್ಲಿರಬೇಕು ಎಂದೇ ರಿಕ್ರೂಟ್‌ಮೆಂಟ್ ಮಾಡಿರುತ್ತೇವೆ. ಆ ಭಾಗದಲ್ಲಿ ಮೊದಲೇ ಟೀಚರ್ಸ್ ಇಲ್ಲ. ವಿದ್ಯಾಭ್ಯಾಸದಲ್ಲಿ ಬಹಳಷ್ಟು ಜನ ಅಲ್ಲಿ ಬಹಳ ಹಿಂದೆ ಉಳಿದುಕೊಂಡಿದ್ದಾರೆ. ನಾವು ಇಲ್ಲಿಂದ ಸರ್ಕಾರದಿಂದ ಆದೇಶ ಕೊಟ್ಟರೂ ಕೂಡ ಆ ಭಾಗದಲ್ಲಿ ಜಿಲ್ಲಾ ಪಂಚಾಯತಿಯಲ್ಲಿ ರೆಸಲ್ಯೂಶನ್ ಮಾಡಿಬಿಟ್ಟಿದ್ದಾರೆ, ಟೀಚರ್ಸ್ ಯಾರನ್ನೂ ಕೂಡ ಬಿಡುಗಡೆ ಮಾಡಬಾರದು ಎಂದು. ಇಲ್ಲಿರತಕ್ಕಂಥವರೆಲ್ಲಾ ಅಲ್ಲಿ ಹೋಗಿ ರಿಕ್ರೂಟ್ ಆಗುತ್ತಾರೆ, ಎರಡು ವರ್ಷಕ್ಕೂ ಮುಂಚೆಯೇ ಪ್ರೊಬೇಶನರಿ ಪೀರಿಯಡ್ ಡಿಕ್ಲೇರ್ ಆಗಿರುವುದಿಲ್ಲ. ಆಗಲೇ ಈ ಕಡೆಗೆ ಬರಬೇಕು ಅನ್ನುತ್ತಾರೆ. ಅಲ್ಲಿ ಟೀಚರ್ಸ್ ಉಳಿಯಬೇಕೋ ಬೇಡವೋ? ಆ ಭಾಗದಲ್ಲಿ ಪಾಠ ಪ್ರವಚನಗಳು ಆಗಬೇಕೋ, ಬೇಡವೋ? ಆದಕಾರಣ ರಿಕ್ರೂಟ್‌ಮೆಂಟ್ ಮಾಡುವಾಗಲೀ ನಾವು ಅಲ್ಲಿ ಬಿಜಾಪುರ, ಗುಲ್ಬರ್ಗಾ, ಬೀದರ್ ಭಾಗದಲ್ಲಿ ಕನಿಷ್ಟ 5 ವರ್ಷ ಸೇವೆ ಮಾಡಬೇಕು ಎಂದು ಆದೇಶ ಮಾಡಿರುತ್ತೇವೆ.

ಅಧ್ಯಕ್ಷರು :– ಅಲ್ಲಿಯ ಸ್ಥಳೀಯರನ್ನೇ ಆಯ್ಕೆ ಮಾಡಿಕೊಳ್ಳುವುದಕ್ಕೆ ನಿಮಗೆ ಏನು ಸ್ವಾಮಿ ಸಮಸ್ಯೆ?

ಶ್ರೀ ಸಿ.ಎಸ್. ಪುಟ್ಟೇಗೌಡ :– ನಮ್ಮ ಕಡೆಯವರಿಗೆ ಬಹಳ ಸಮಸ್ಯೆ ಇದೆ ಸ್ವಾಮಿ. ದಯಮಾಡಿ ತಾವು ಯೋಚನೆ ಮಾಡಬೇಕು. ಸಬ್–ರಿಜಿಸ್ಟ್ರಾರ್‌ರನ್ನು ಏಕೆ ತಾವು....

ಅಧ್ಯಕ್ಷರು :– ಪುಟ್ಟೇಗೌಡರೆ, ಅಲ್ಲಿ ಸ್ಥಳೀಯರನ್ನೇ ಹಾಕುವುದಕ್ಕೆ ಆಡಳಿತದ್ದು ಏನು ತೊಂದರೆ ಇದೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಸ್ವಲ್ಪ ಕೇಳಿ.

ಶ್ರೀ ರಾಮಲಿಂಗಾರೆಡ್ಡಿ :– ಈಗ ಮಲೆನಾಡು ಪ್ರದೇಶದಲ್ಲಿ ಉಡುಪಿ ಮತ್ತು ನಾರ್ತ ಕೆನರಾ ಮತ್ತು ಸೌತ ಕೆನರಾ ಮತ್ತು ಶಿವಮೊಗ್ಗ ಭಾಗದಲ್ಲೂ ಕೂಡ ಟೀಚರ್ಸ್ ಯಾರೂ ಉಳಿದುಕೊಳ್ಳುವುದೇ ಇಲ್ಲ. ನಾವು ಆ ರೀತಿ ತೆಗೆದರೆ ಏನಾಗುತ್ತದೆಂದರೆ

ಎಲ್ಲಾ ಈ ಕಡೆಗೆ ಬಂದುಬಿಡುತ್ತಾರೆ, ಅಲ್ಲಿ ಟೀಚರ್ಸ್ ಇರುವುದಿಲ್ಲ. ನೋಡಿ ಅವರ ಕಾನ್ಸ್‌ಟ್ಯೂಯೆನ್ಸಿಯಲ್ಲಿ 22 ಜನರನ್ನು ತೆಗೆದುಬಿಟ್ಟಿದ್ದಾರೆ ಎಂದರು. ಆದರೆ ಉದಾಸಿಯವರ ಕಾನ್ಸ್‌ಟಿಟ್ಯುಯೆನ್ಸಿಯಲ್ಲಿ 150 ಜನ ಟೀಚರ್ಸ್ ಇಲ್ಲ. ಆದ್ದರಿಂದ ಕನಿಷ್ಟ ಅಲ್ಲಿ 5 ವರ್ಷ ಸೇವೆ ಮಾಡದಿದ್ದರೆ ಹೇಗೆ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :– ಮಾನ್ಯ ಸಚಿವರೆ, ಜಿಲ್ಲಾ ಪಂಚಾಯತಿಯಲ್ಲಿ ವರ್ಗಾವಣೆಯ ವಿಷಯದಲ್ಲಿ ಭಾರಿ ಅವ್ಯವಹಾರ ನಡೆಯುತ್ತಿದೆ. ಇದನ್ನು ಸರಿಯಾಗಿ ತಡೆಹಿಡಿಯಬೇಕು. ಹೆಣ್ಣು ಮಕ್ಕಳಿಗೆ ಆದ್ಯತೆ ಕೊಡಬೇಕು. ಹೆಣ್ಣು ಮಕ್ಕಳ ಬಗ್ಗೆ ಯತ್ರ ನಾರಿಯಸ್ತು ಪೂಜ್ಯಂತು ರಮಂತೇ ತತ್ರ ದೇವತಾ' ಎಂದು ಎಲ್ಲಾ ಮಾತನಾಡುತ್ತಾರೆ.

ಅಧ್ಯಕ್ಷರು :– ಹೌದು, ಹಿರಿನುಡಿ ಇದೆ, ಆದರೆ ಅದು ಬೇರೆ.

ಶ್ರೀ ಸಿ.ಎಂ. ಉದಾಸಿ :– ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ...

ಅಧ್ಯಕ್ಷರು :– ಹೇಗೆ ನೀವು ಮಧ್ಯೆ ಇಂಟರ‍್ರ್ಯೂಸವಿನ ಆದರೆ ಹೇಗೆ? ಪುಟ್ಟೇಗೌಡರಿಗೆ ಮಾತನಾಡಲು ಕೊಟ್ಟಿರುವುದೇ 5 ನಿಮಿಷ.

ಶ್ರೀ ಬಿ.ಆರ್. ಪಾಟೀಲ್ :– ರೆಮಿಡಿ ಏನಾದರೂ....

ಶ್ರೀ ಸಿ.ಎಸ್. ಪುಟ್ಟೇಗೌಡ :– ನಾನ್ ಹೇಳುತ್ತೇನೆ ಸ್ವಾಮಿ, ನಿಮ್ಮ ಕಡೆಗೆ ಮೇಸ್ಟ್ರನ್ನು ಹಾಕಬೇಡಿ, ಅಪಾಯಿಂಟ್‌ಮೆಂಟ್ ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ನಾಳೆ ಮಾಡಿಕೊಳ್ಳಿ. ಆದರೆ 5 ವರ್ಷ ಅಲ್ಲಿ ಸೇವೆ ಮಾಡಬೇಕು ಎಂದು ಇರುವುದನ್ನು ಕನಿಷ್ಟ...

ಶ್ರೀ ಬಿ.ಆರ್. ಪಾಟೀಲ್ :– ನೀವ್ಯಾಕೆ ಬರ್ತೀರಾ ಅಲ್ಲಿಗೆ?

ಶ್ರೀ ಸಿ.ಎಸ್. ಪುಟ್ಟೇಗೌಡ :– ಸ್ವಾಮಿ ಬಿ.ಆರ್. ಪಾಟೀಲರೆ, ನೀವ್ಯಾಕೆ ಬಂದಿದ್ದೀರಾ ಬೆಂಗಳೂರಿಗೆ? ನಿಮಗ್ಯಾಕೆ ಹೆಚ್.ಎಸ್.ಆರ್ ಲೇಔಟ್‌ನಲ್ಲಿ ಸೈಟು? ರೀ, ಸ್ವಾಮಿ, ಬಿ.ಆರ್.ಪಾಟೀಲರೆ ನಿಮಗ್ಯಾಕೆ ಹೆಚ್.ಎಸ್.ಆರ್. ಲೇಔಟ್‌ನಲ್ಲಿ ಸೈಟು ಬೇಕು? ನೀವ್ಯಾಕೆ ಬರ್ತೀರಾ ಅಲ್ಲಿಗೆ ಎಂದರೆ ನಿಮಗ್ಯಾಕೆ ಬೇಕು ಸ್ವಾಮಿ ಹೆಚ್.ಎಸ್.ಆರ್.ಲೇಔಟ್‌ನಲ್ಲಿ ಶಾಸಕರಿಗೆ ಸೈಟು?

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೆ, ಈ ರೀತಿ ಆಗುವುದು ಬೇಡ. ಅವರವರ ಪ್ರದೇಶದ ಸಮಸ್ಯೆ ಏನಿದೆ ಅದನ್ನು ಸರ್ಕಾರ ಸರಿಮಾಡುತ್ತದೆ. ಅವರ ಪ್ರದೇಶಕ್ಕೆ ಸೀಮಿತವಾಗಿ ಹೇಳಲಿ. ಅದನ್ನು ಬಿಟ್ಟು ಆ ಜಿಲ್ಲೆಯದು, ಈ ಜಿಲ್ಲೆಯದು ಎಂದು ಹೇಳುವುದು ಬೇಡ.

(ಗೊಂದಲ)

ಅಧ್ಯಕ್ಷರು :– ಪುಟ್ಟೇಗೌಡರೆ ನೀವು ಬೇಗ ಮುಗಿಸಿ, ಮುಗಿಸಿ ಬೇಗ.

ಶ್ರೀ ಬಿ.ಆರ್. ಪಾಟೀಲ್ :– ಗುಲ್ಬರ್ಗಾ ಜಿಲ್ಲೆಯೂ ಕರ್ನಾಟಕದ ಒಂದು ಭಾಗವೇ.

ಶ್ರೀ ಸಿ.ಎಸ್. ಪುಟ್ಟೇಗೌಡ :– ಅಲ್ಲಿಗೆ ಈ ಕಡೆಯವರನ್ನು ಹಾಕಿಕೊಳ್ಳಬೇಡಿ ಎನ್ನುವುದು ನಮ್ಮ ವಾದವಲ್ಲ. ನೀವು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು :– ನೀವು ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ? ಈ ರೀತಿಯಾದರೆ ರೆಕಾರ್ಡ್ ಕೂಡ ಯಾವುದೂ ಸರಿಯಾಗಿ ಆಗುವುದಿಲ್ಲ. ವರದಿಗಾರರಿಗೆ ಏನೂ ಗೊತ್ತಾಗುವುದಿಲ್ಲ.

ಶ್ರೀ ಬಿ.ಆರ್. ಪಾಟೀಲ್ :– ಗುಲ್ಬರ್ಗಾ ಕೂಡ ಕರ್ನಾಟಕದ ಭಾಗ. ಏಕೆ ಅಲ್ಲಿಂದ ಇವರು ವಾಪಸ್ಸು ಬರಬೇಕು? ಅಲ್ಲೇ ಇದ್ದು ನೌಕರಿ ಮಾಡಬೇಕಲ್ಲವೆ?

ಶ್ರೀ ಸಿ.ಎಸ್. ಪುಟ್ಟೇಗೌಡ :– ಸ್ವಾಮಿ, ನೀವು 100 ಟಿ.ಸಿ.ಹೆಚ್. ಕಾಲೇಜನ್ನು ಅಲ್ಲಿ ಹೆಚ್ಚು ಕೊಡಿ. ನಮ್ಮದು ತಕರಾರಿಲ್ಲ. ಆ ಭಾಗದಲ್ಲಿ ನೀವು ಕೊಡತಕ್ಕಂಥ ವಿದ್ಯಾಭ್ಯಾಸಕ್ಕಾಗಿ ವಿದ್ಯಾ ಇಲಾಖೆಗೆ ಹೆಚ್ಚು ಹಣಕಾಸವನ್ನು ಖರ್ಚು ಮಾಡಿ. ನಾವು ಯೋಚನೆ ಮಾಡಬೇಕು. ನಾವೆಲ್ಲ ಏಕೆ ಬೆಂಗಳೂರಿನಲ್ಲಿಯೇ ವಾಸ ಮಾಡುತ್ತೇವೆ? ಸ್ವಾಮಿ, ಅವರೂ ಕೂಡ ಮನುಷ್ಯರು. ನೀವು ಇಟ್ಟಿರುವ 5 ವರ್ಷಗಳ ಅವಧಿಯನ್ನು ರಿಲ್ಯಾಕ್ಸ್ ಮಾಡಿ, ಕಡಿಮೆ ಮಾಡಿ. ಎರಡೂವರೆ ವರ್ಷವೆಂದೋ ಅಥವಾ ಮೂರು ವರ್ಷವೆಂದೋ ಮಾಡಿ. ಹೊಸ ಅಪಾಯಿಂಟ್‌ಮೆಂಟ್ ಮಾಡಿ.

ಶ್ರೀ ಗೋವಿಂದ ಎಂ. ಕಾರಜೋಳ :– ಮಾನ್ಯ ಅಧ್ಯಕ್ಷರೆ, ಮಾನ್ಯ ಪುಟ್ಟೇಗೌಡರು ಏನು ಹೇಳುತ್ತಿದ್ದಾರೆಂದರೆ, ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್ ಬೆಂಗಳೂರಿನವರು ಬಿಜಾಪುರಕ್ಕೆ ವರ್ಗಾವಣಿ ಕೇಳುತ್ತಾರೆ, 20 ಲಕ್ಷ, 30 ಲಕ್ಷ ರೂ.ಗಳನ್ನು ಅಲ್ಲಿ ಹಾಕಿಸಿಕೊಂಡು ಬರುತ್ತಾರೆ. ಸಬ್ ರಿಜಿಸ್ಟ್ರಾರ್ ಬೆಂಗಳೂರಿನವರು ಬಿಜಾಪುರಕ್ಕೆ ವರ್ಗಾವಣೆ ಕೇಳುತ್ತಾರೆ. ಏಕೆ ಆ ರೀತಿ ವರ್ಗಾವಣೆ ಅವರು ಕೇಳುತ್ತಾರೆ ಎಂದು ಮಾನ್ಯ ಪುಟ್ಟೇಗೌಡರು ಕೇಳುತ್ತಿದ್ದಾರೆ. ಅದನ್ನು ಅವರು ಪ್ರಶ್ನೆ ಮಾಡುತ್ತಿದ್ದಾರೆ. ಏಕೆಂದರೆ ಅಲ್ಲಿ ಲಾಭ ಇದೆಯೆಂದು ಆ ಕಡೆಗೆ ಹೋಗುತ್ತಾರೆ. ಟೀಚರ್ಸ್ ಆದರೆ ಈ ಕಡೆಗೆ ಓಡಿಬರ್ತಾರೆ ಎಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು :– ಅದು ವಾಸ್ತವ. ಅವರು ವಾಸ್ತವದ ಸತ್ಯವನ್ನು ಹೇಳುತ್ತಿದ್ದಾರೆ.

ಶ್ರೀ ಸಿ.ಎಸ್. ಪುಟ್ಟೇಗೌಡ :– ಆದುದರಿಂದ 5 ವರ್ಷದ್ದು ಏನಿದೆ ಅದನ್ನು ಸ್ವಲ್ಪ ಕಡಿಮೆ ಮಾಡಲು ರಿಲ್ಯಾಕ್ಸ್ ಮಾಡಬೇಕೆಂದು ಮಾನ್ಯ ರಾಮಲಿಂಗಾರೆಡ್ಡಿಯವರಿಗೆ, ಸರ್ಕಾರಕ್ಕೆ ಹೇಳುತ್ತೇನೆ. ಇನ್ನು ಮಕ್ಕಳು ಓದಲು ಅನುಕೂಲವಾಗುವಂತೆ ವರಮಾನ ಪತ್ರವನ್ನು ಮೊದಲು ಕೊಡುತ್ತಿದ್ದರು. ಮೊದಲು ಯಾರೋ ಒಬ್ಬ ವಿಲೇಜ್ ಅಕೌಂಟೆಂಟ್‌ರವರ ಹತ್ತಿರ ಬರಿಸಿಕೊಂಡು ಶೇಕದಾರರ ಹತ್ತಿರ ಬರೆಸಿಕೊಂಡು ಹೋಗಿ ತಹಶೀಲ್ದಾರರು ಸೈನ್ ಹಾಕಿದರೆ ಅವರು ಒಂದು ವಾರದೊಳಗೆ ಸರ್ಟಿಫಿಕೇಟ್ ಕೊಡುತ್ತಿದ್ದರು. ಈಗ ಏನಾಗಿದೆ ಎಂದರೆ ತಹಶೀಲ್ದಾರ್‌ರವರ ಹತ್ತಿರ ಹೋಗಿ ಮತ್ತೆ ಅವರು ಮೂರು ದಿವಸ ಕಡ್ಡಾಯವಾಗಿ ಇರಲೇಬೇಕಂತೆ ರೆವಿನ್ಯೂ ಇನ್ಸ್‌ಪೆಕ್ಟರ್‌ರವರ ಹತ್ತಿರ, ಆಮೇಲೆ ಅದೇನೋ ಐದು ದಿನ ವಿಲೇಜ್ ಅಕೌಂಟೆಂಟ್ ಅವರು ಬರುವುದರೊಳಗೆ ಮಕ್ಕಳಿಗೆ ಸ್ಕೂಲ್‌ನಲ್ಲಿ ಸೀಟ್ ಕೊಡುವುದಿಲ್ಲ, ಇಂಥ ಸಮಸ್ಯೆ ಇದೆ. ಇದನ್ನು ರಿಲ್ಯಾಕ್ಸ್ ಮಾಡಬೇಕು. ರೆವಿನ್ಯೂ ಮಿನಿಸ್ಟರ್ ಈಗ ಇಲ್ಲ. ದಯಮಾಡಿ ಸರ್ಕಾರಕ್ಕೆ ತಮ್ಮ ಮೂಲಕ ನಿವೇದನೆಯನ್ನು ಮಾಡುತ್ತೇನೆ. ಇನ್ನು ಶಾಲಾಭಿವೃದ್ಧಿ ಸಮಿತಿ ಎಂದು ನಾವು ಹಳ್ಳಿಗಾಡಿನಲ್ಲಿ ಏನು ಮಾಡಿದ್ದೇವೆ ಅಲ್ಲಿ ಈಗೇನಾಗಿದೆ ಎಂದರೆ ನಮ್ಮಿಂದಲೇ ಈ ರಾಜಕೀಯ ಅಧಿಕಾರ ವಿಕೇಂದ್ರೀಕರಣ ಮಾಡಿ ಇವೊತ್ತು ಹಳ್ಳಿ ಹಳ್ಳಿಯಲ್ಲಿ ಪಾರ್ಟಿ ಇದೆ. ಅಲ್ಲಿ ಹಳ್ಳಿಯವರು ಎಲ್ಲರೂ ಕೂಡ ಹಂಚಿಕೊಂಡುಬಿಟ್ಟಿದ್ದಾರೆ. ಹಬ್ಬ, ಹರಿದಿನ ಸ್ಕೂಲ್ ಮಕ್ಕಳ ಕೆಲಸಕ್ಕೆಲ್ಲಾ ಬಿ.ಜೆ.ಪಿ.ಯವರ ಗುಂಪು ಇದು, ಕಾಂಗ್ರೆಸ್‌ನವರ ಗುಂಪು ಇದು, ಜೆ.ಡಿ.(ಎಸ್) ನವರ ಗುಂಪು ಇದು ಎಂದು. ಯಾರಾದರೂ ಅಲ್ಲಿಗೆ ಒಬ್ಬ ಮೇಸ್ಟ್ರು ಹೋದರೆ ಅವರು ಇಂಪಾರ್ಶಿಯಲ್ ಆಗಿ ಅಲ್ಲಿ ಕೆಲಸ ಮಾಡುವುದು ಬಹಳ ಕಷ್ಟ. ನನ್ನ ಹತ್ತಿರಕ್ಕೆ ಬಂದರೆ ನಾನು ಆದರಿಸುತ್ತೇನೆ, ಆ ಕಡೆ ಅವರು ಇನ್ನ್ಯಾರೋ ಪಾಪ ಅವರು ಕಾಂಗ್ರೆಸ್ ಲೀಡರ್ ಬಿಡುವುದಿಲ್ಲ. ಅವನು ಆದರಿಸುತ್ತಾನೆ. ಇನ್ನ್ಯಾರೋ ಬಿ.ಜೆ.ಪಿ.ಯವರ ಕಡೆ ಇದು ಬಹಳ ತೊಂದರೆ ಇದೆ. ಈ ನ್ಯೂನತೆಯನ್ನು ಸರಿಪಡಿಸುವುದಕ್ಕೆ ಏನಾದರೂ ಒಂದು ಸರಿಯಾದಂಥ ಒಂದು ಆಲೋಚನೆಯನ್ನು ಮಾಡಿ ಒಂದು ಕಮಿಟಿ ಮಾಡಿಯೋ ಇನ್ನೊಂದು ಮಾಡಿಯೋ ಅವರನ್ನು ಆ ಜವಾಬ್ದಾರಿಗೆ ಸಿಕ್ಕಿಸಬೇಡಿ ಆ ಮೇಸ್ಟ್ರನ್ನು, ಏಕೆಂದರೆ ಅವರು ಅಲ್ಲಿ ಹಳ್ಳಿಗಾಡಿನಲ್ಲಿ ನಿಭಾಯಿಸುವುದು ಬಹಳ ಕಷ್ಟ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ನಿವೇದನೆ ಮಾಡುತ್ತೇನೆ. ಇನ್ನು ಏನು ಇವೊತ್ತು ಅಭಿವೃದ್ಧಿಯಾಗುತ್ತಿದೆ ಅದು ನಿಜವಾಗಲೂ ಅದು ಶ್ಲಾಘನೀಯ. ಹಳ್ಳಿಗಾಡಿನಲ್ಲಿ ಪ್ರೌಢ ಶಿಕ್ಷಣ ಅಂತೂ ಬಹಳ ಚೆನ್ನಾಗಿದೆ. ಇವೊತ್ತು ಎಲ್ಲಾ ಗಂಡು ಮಕ್ಕಳು, ಹೆಣ್ಣು ಮಕ್ಕಳು ಎಲ್ಲರೂ ಕೂಡ ಎಸ್.ಎಸ್.ಎಲ್.ಸಿ. ಮಾಡಿ ಪಿ.ಯು.ಸಿ. ಮಾಡುತ್ತಿದ್ದಾರೆ. ಮೆಡಿಕಲ್ ಎಜ್ಯುಕೇಶನ್, ಇಂಜಿನಿಯರಿಂಗ್ ಎಜ್ಯುಕೇಶನ್

ಅನ್ನು ಬಿಡಿ, ಪಾಪ, ಅದು ಸಣ್ಣ ಪುಟ್ಟವರು ಓದುವಂಥದ್ದಲ್ಲ. ಅದರ ಬಗ್ಗೆ ಬೇರೆ ಸದಸ್ಯರೆಲ್ಲರೂ ಬಹಳ ಚೆನ್ನಾಗಿ ಎಕ್ಸ್‌ಪ್ಲೈನ್ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿ, ಸಮಯದ ಅಭಾವ ಇರುವುದರಿಂದ ಇನ್ನು ಕೃಷಿ ಇಲಾಖೆ ಬಗ್ಗೆ ಮಾತನಾಡುವುದಾದರೆ ಈಗ ಈ ಸರ್ಕಾರ ಮತ್ತು ಇಲಾಖೆ ಬಹುಶಃ ರೈತನಿಂದಲೇ ಎಲ್ಲಾ ಸುತ್ತುವರಿದಿರುವುದು, ಕೆ.ಇ.ಬಿ. ಆಗಿರಲಿ, ಶ್ರೀನಿವಾಸಗೌಡರಾಗಿರಲಿ ಇನ್ಯಾರೋ ನಮ್ಮ ಚೆನ್ನಿಗಪ್ಪನವರಾಗಿರಲಿ, ತೋಟಗಾರಿಕೆ ಶ್ರೀನಿವಾಸರವರಾಗಿರಲಿ, ಎಲ್ಲರ ಇಲಾಖೆಯೂ ಕೂಡ ರೈತರ ಸುತ್ತ ಇರತಕ್ಕಂಥ ಇಲಾಖೆಯೇ ಆಗಿದೆ. ರೈತನಿಗೆ ಸ್ಪಷ್ಟವಾಗಿ ಫಸ್ಟ್ ಮಾಹಿತಿ ಇರಬೇಕು. ನನಗೋಸ್ಕರ ಖರ್ಚು ಮಾಡುವ ದುಡ್ಡು ಎಷ್ಟು ಈ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಎಂಬುದು ಅವನಿಗೆ ಗೊತ್ತಾಗಬೇಕು. ಏಕೆಂದರೆ ಅವನು ಕೇಳುವುದು ಮಿನಿಮಂ ಮೂರ್‍ನಾಲ್ಕು ಸೌಲಭ್ಯಗಳು. ಒಂದು ನೀರು, ವಿದ್ಯುಚ್ಛಕ್ತಿ, ಬೆಲೆ ಮತ್ತು ಸರಿಯಾದ ಮಾಹಿತಿ, ಇದು ಅವನಿಗೆ ಬೇಕಾದುದು. ಅವನ ಹೆಸರಲ್ಲೆ, 50 ವರ್ಷದಿಂದಲೂ ಕೂಡ ಒಂದೊಂದು ಸರ್ಕಾರ ಬಂದಾಗ ನಾಲ್ಕ್ನಾಲ್ಕು ಕಾರ್ಯಕ್ರಮಗಳನ್ನು ಮಾಡಿ, ಆ ಕಾರ್ಯಕ್ರಮಗಳು ಯಾವುದೆಂದು ಗೊತ್ತಿಲ್ಲ, ಯಾರಿಗೋ ನಾಲ್ಕು ಜನರಿಗೆ ಕುಂಟೆ ಕೊಡುತ್ತೇವೆಂದು ಹೇಳುವುದು. ಆದರೆ ಅವುಗಳು ದಲ್ಲಾಳಿಗೆ ಸಿಗುತ್ತವೆ. ಹಿಂದುಳಿದ ರೈತನಿಗೆ ಪಂಪ್‌ಸೆಟ್ ಕೊಡುತ್ತೇನೆ ಎಂದು ಹೇಳಿದರು, ಅದನ್ನು ಯಾರೋ ದಲ್ಲಾಳಿ ತಿಂದುಕೊಂಡು ಹೋಗುತ್ತಾನೆ. ಇಂತಹ ಸಣ್ಣಪುಟ್ಟವುಗಳನ್ನು ತೆಗೆದು, ಅವನು ಕೇಳತಕ್ಕಂಥ ನೀರಾವರಿ ಮತ್ತು ವಿದ್ಯುಚ್ಛಕ್ತಿಯನ್ನು ಎಷ್ಟರಮಟ್ಟಿಗೆ ಸುಲಭಸಾಧ್ಯ ಮಾಡಿಕೊಡುವುದಕ್ಕೆ ಸಾಧ್ಯ ಇದೆ, ಅದನ್ನು ರೈತನಿಗೆ ಮಾಡಿಕೊಡಬೇಕು. ಏನಾಗಿದೆ ಎಂದರೆ ಎಲ್ಲರೂ ಬಳಸುವಾಗ ರೈತನ ಹೆಸರನ್ನು ಬಳಸುತ್ತೇವೆ. ರೈತನ ಜೀವನ 10 ವರ್ಷಗಳಿದಿಂದೀಚೆಗೆ ಬಹಳ ದುಸ್ತರವಾಗಿದೆ ಕಟ್ಟ ಕಡೆಯ ಶಾಪಚಿತ್ತನು ಎಂದರೆ ರೈತ. ನಾವು ಓಟು ಕೇಳುವಾಗ, ಇನ್ನೊಂದು ಕೆಲಸ ಮಾಡುವಾಗ ರೈತರು ಹೆಸರೇ ಹೇಳುವುದು. ರೈತನ ಮನೆಯಲ್ಲಿ ಎರಡೇ ಚೆನ್ನಾಗಿರುವುದು, ಒಂದು ಕೋಳೀ ಸಾರು ಚೆನ್ನಾಗಿ ಇರುತ್ತದೆ, ಇನ್ನೊಂದು ಸೊಪ್ಪಿನ ಸಾರು ಚೆನ್ನಾಗಿ ಇರುತ್ತದೆ. ಅವನು ಪಾಪ ಅಷ್ಟೊಂದು ಮಾಡಿಕೊಡಬಲ್ಲನೇ ಹೊರತು, ಯಾರು ರೈತ ಎಂದು ಬದುಕುತ್ತಿದ್ದಾನೆ ಈ ರಾಜ್ಯದಲ್ಲಿ ಮತ್ತು ದೇಶದಲ್ಲಿ ಅವನು ಬದುಕು ಅತ್ಯಂತ ನಿಕೃಷ್ಟವಾಗಿದೆ. ಅವನು ಹುಡುಕುತ್ತಿದ್ದಾನೆ, ಬೇರೆ ಎಡಕಾಡುತ್ತಿದ್ದಾನೆ ಬೆಂಗಳೂರಿನಲ್ಲಿ ಯಾವುದಾದರೂ ಒಂದು ಪೀವನ್ ಅಥವಾ ಯಾವುದಾದರೂ ಟೈಲರಿಂಗ್ ಕೆಲಸವೋ ಅಥವಾ ಯಾವುದಾದರೂ ಬಾರ್‌ನಲ್ಲಿ ನಮ್ಮ ಮಕ್ಕಳು ಕೆಲಸ ಮಾಡಿದರೂ ಪರವಾಗಿಲ್ಲ, ಈ ವ್ಯವಸಾಯ ಮಾಡುವುದು ಒಳ್ಳೆಯದಲ್ಲ ಎನ್ನುವಂತಹ ಭಾವನೆ ಅವನಿಗೆ ಬಂದಿದೆ. ನಮ್ಮದು ಇದಕ್ಕೆ ಸರಿಯಾದ ದಾರಿ ಕೂಡ

ಇಲ್ಲ, ನಮ್ಮದೊಂದು ಲೆಕ್ಕಾಚಾರ ಕೂಡ ಇಲ್ಲ. ಏನಾಗಿದೆ ಎಂದರೆ, ನಾನು ಪಾಶ್ಚಿಮಾತ್ಯ ದೇಶಕ್ಕೆ ಸ್ಪೀಕರ್ ಅವರೊಡನೆ ಚೈನಾಕ್ಕೆ ಹೋಗಿದ್ದೆ. ನಮ್ಮಲ್ಲಿ ಒಂದು ಭಾವನೆ ಇತ್ತು, ನಮ್ಮಲ್ಲೆ ಜನಸಂಖ್ಯೆ ಜಾಸ್ತಿ ಇರುವುದರಿಂದ ಇಲ್ಲೆ ಇಷ್ಟು ಸಮಸ್ಯೆ ಇದೆ ಎಂದು. ನಿಜವಾಗಿಯೂ ಅಲ್ಲಿ ಅವರು ಯಾರ್ಯಾರು ಯಾವ್ಯಾವ ಕೆಲಸ ಮಾಡಬೇಕು, ಯಾವುದನ್ನು ಎಷ್ಟು ಬೆಳೆದರೆ ಒಳ್ಳೆಯದು, ಎಷ್ಟು ಬೇಕಾಗುತ್ತದೆ ಎನ್ನುವ ಮಾಹಿತಿಯನ್ನು ಕೊಡುತ್ತಾರೆ. ಇಲ್ಲಿ ಅದರ ಅಭಾವ ಇದೆ. ಇಲ್ಲಿ ಎಲ್ಲರೂ ತೆಂಗು ಹಾಕಿದರೆ ತೆಂಗು ಹಾಕುತ್ತಾರೆ, ಕಬ್ಬು ಹಾಕಿದರೆ ಕಬ್ಬು ಹಾಕುತ್ತಾರೆ, ಪಾಪ ಅವನ ಬದುಕು ಬಹಳ ದುಸ್ತರ. ಹತ್ತು ವರ್ಷದ ಆಚೆಗೆ ಎಲ್ಲರನ್ನೂ ಸಹ ಸಲಹಿ, ಬಂದವರಿಗೆಲ್ಲಾ ಊಟ ಹಾಕಿ, ಅವನು ಸರ್ಕಾರದ ಕಡೆ ಮುಖ ಹಾಕುತ್ತಿರಲಿಲ್ಲ. ಸರ್ಕಾರ ಅವನ ಕಡೆ ಮುಖ ಹಾಕುತ್ತುದ್ದುದು, ಯಾವಾಗ ಎಂದರೆ ಯಾವುತ್ತೋ ನಮ್ಮಂತಹವರು ಚುನಾವಣೆಗೋ ಅಥವಾ ಅಧಿಕಾರಿಗಳು ತಹಸೀಲ್ದಾರ್ ಬಂದಾಗ. ಅದು ಬಿಟ್ಟರೆ ಅವನ ಬದುಕು ಎಂದರೆ ಮೋಡ ಮತ್ತು ನೆಲ ನೋಡಿಕೊಂಡು ಬದುಕುತ್ತಿದ್ದ. ಆದುದರಿಂದ ಅವನಿಗೆ ಬೇಕಾದಂತಹ ವಿದ್ಯುಚ್ಛಕ್ತಿ ನೀರು, ಬೆಲೆ ಮತ್ತು ಮಾಹಿತಿ ಕೊಡುವಂತಹ ವಿಚಾರದಲ್ಲಿ ಅವನ ಬಗ್ಗೆ ಅತ್ಯಂತ ಗಮನಹರಿಸಬೇಕೆಂದು ಹೇಳುತ್ತಾ, ಇನ್ನು ಇಲಾಖೆ ಬಗ್ಗೆ ಹೇಳುವುದಾದರೆ ಹತ್ತಾರು ಇಲಾಖೆಗಳು ಇರುವುದು ಒಳ್ಳೆಯದಲ್ಲವೇನೋ. ನನಗೇನೋ ಈ ತೋಟಗಾರಿಕೆ, ಕೃಷಿ ಇವುಗಳನ್ನೆಲ್ಲ ಒಂದೇ ಇಲಾಖೆ ಮಾಡಿ, ಸಮಗ್ರವಾಗಿ ಒಂದು ಮಾಸ್ಟರ್ ಪ್ಲಾನ್ ಮಾಡಿ. 50 ವರ್ಷಗಳ ಹಿಂದಿನ ರೈತನ ಬದುಕಿಗೂ, ಇವತ್ತಿನ ರೈತನ ಬದುಕಿಗೂ ಅತ್ಯಂತ ಬದಲಾವಣೆಯಾಗಿದೆ. ಆದುದರಿಂದ ಅವನನ್ನು ಹೇಗೆ ಮೇಲಕ್ಕೆ ತರುವುದಕ್ಕೆ ಸಾಧ್ಯವೆನ್ನುವಂತಹದ್ದನ್ನು ನೋಡಬೇಕು; ಮತ್ತು ಅವನಿಗೆ ಸಾಲ ಕೊಡುವಂತಹ ಸಂದರ್ಭದಲ್ಲೆ ಅತ್ಯಂತ ಹೆಚ್ಚಾಗಿ ಅವನು ಅಲ್ಲೇ ಮುಳುಗಿ ಹೋಗಿರುವುದು, ಬಡ್ಡಿಗೆ ಸಾಲ ತಂದು ಇವತ್ತು ರೈತನ ಮಕ್ಕಳೆಲ್ಲಾ ಹಾಳಾಗಿ ಹೋಗಿರುವುದು. ಅವನಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲೆ ಕೊಡತಕ್ಕಂಥ, ಕೃಷಿ ಸಾಲವನ್ನು ಹೆಚ್ಚು ಮಾಡುವಂತಹ ಕಾರ್ಯಕ್ರಮವನ್ನು ಮಾಡಬೇಕೆಂದು ನಾನು ಹೇಳುತ್ತಾ, ಇಷ್ಟು ಹೇಳಿ ಬೇರೆಯವರು ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿರುವುದರಿಂದ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ – ನಮ್ಮ ಜಾಗದಲ್ಲಿ ತೆಂಗು ನಾಶವಾಗಿ ಹೋಯಿತು. ಬಹಳ ಮಂದಿ ರೈತರು ತೆಂಗನ್ನು ನಂಬಿ ಬದುಕಿದ್ದರು. ಮೊದಲು ಯಾರಾದರೂ ಸಂಬಂಧ ಮಾಡಬೇಕಾದರೆ, ಯಾರಾದರೂ ನೆಂಟರಾಗಬೇಕಾದರೆ ಮಂಡ್ಯಕ್ಕೆ ಹೋದರೆ ಕಬ್ಬು ನೋಡಿಯೋ, ಆ ಕಡೆಯವರು ತುಮಕೂರಿಗೆ ಬಂದರೆ ತೆಂಗು ನೋಡಿಯೋ, ಒಂದೊಂದು ಕಡೆ ಒಂದೊಂದು ಬೆಳೆಯನ್ನು ನೋಡಿ, ಕೆಲವು ಕಡೆ ದ್ರಾಕ್ಷಿ ನೋಡಿ ಆ ಬೆಳೆಗಳನ್ನು ಬೆಳೆಯುತ್ತಿದ್ದರು. ಇವತ್ತು ಏನಾಗಿದೆ

ಎಂದರೆ ಏನು ಮಾಡಿದರೂ ಅವನು ಮಾಡಿರುವ ಸಾಲದ ಮೇಲಿನ ಬಡ್ಡಿಯನ್ನು ಕಟ್ಟುವುದಕ್ಕೆ ಆಗಿಲ್ಲ. ಆದುದರಿಂದ ರೈತನಿಗೆ ಎಷ್ಟು ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವುದಕ್ಕೆ ಸಾಧ್ಯ ಇದೆ, ಅದು ಒಂದು ಒಳ್ಳೆಯ ಕಾರ್ಯಕ್ರಮ. ನಮ್ಮ ಸರ್ಕಾರಗಳು ಏನು ಮಾಡುತ್ತಾರೆ ಎಂದರೆ ಸಾಲವನ್ನು ಮನ್ನಾ ಮಾಡುತ್ತಾರೆ. ಅದೂ ಭಂಡರಿಗೆ ಸಾಲ ಮನ್ನಾ ಮಾಡುತ್ತಾರೆ. ಸರಿಯಾದ ಸಮಯಕ್ಕೆ ಯಾರು ಸಾಲ ಕಟ್ಟುತ್ತಾನೆ ಅವನಿಗೆ ಯಾವುದೇ ರಿಯಾಯಿತಿ ಸಿಗುವುದಿಲ್ಲ. ಯಾರಾದರೂ ನನ್ನಂತಹ ಘಟಿಂಗ್ ನೋಡೋಣ ಎಂದು ಮುಂದೆ ತಳ್ಳುತ್ತೇನೆ ಅಂದರೆ ಅಂತಹ ಭಂಡರಿಗೆ ಸಾಲ ಮನ್ನಾ ಆಗುತ್ತದೆ. ಇನ್ನು ನ್ಯಾಯವಾಗಿ ರೈತ ಹೊಟ್ಟೆ, ಬಟ್ಟೆ ಕಟ್ಟಿ, ತಾಳಿಯನ್ನೋ ಅಥವಾ ಮಾಂಗಲ್ಯವನ್ನೋ ಅಡವಿಟ್ಟು ಸರಿಯಾಗಿ ಸಮಯಕ್ಕೆ ಸಾಲ ಕಟ್ಟುವವನಿಗೆ ಏನು ಕೊಟ್ಟಿದ್ದೀರಿ ನೀವು? ದಯಮಾಡಿ ಸಾಲದ ನೀತಿ ಕೂಡ ಸಮಗ್ರವಾಗಿ ಬದಲಾವಣೆಯಾಗಬೇಕು. ರೈತನ ಬದುಕಲ್ಲಿ ನಾವು ಅವನ ಪರವಾಗಿ ನಿಲ್ಲದೆ ಇದ್ದರೆ, ಅವನಿಗೆ ಒಂದು ಒಳ್ಳೆಯ ಕಾರ್ಯಕ್ರಮ ಮಾಡಿ ಮಾಸ್ಟರ್ ಪ್ಲಾನ್ ಮಾಡದೇ ಇದ್ದರೆ ಖಂಡಿತ ನಾವು ಬರೀ ಬಾಯಿ ಮಾತಿನಲ್ಲಿ ಉಪಚಾರ ಮಾಡಿದ ಹಾಗೆ ಆಗುತ್ತದೆ ಎನ್ನುವ ಮಾತನ್ನು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಮಾನ್ಯ ರಾಯರೆಡ್ಡಿಯವರೆ, ತಾವು ಐದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ ಎಂದು ಹೇಳಿದ್ದೀರಿ, 5 ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ) :– ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಾಲಿಸುತ್ತೇನೆ. ನನಗೆ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಮೊದಲಿಗೆ ತಮಗೆ ವಂದನೆಯನ್ನು ಸಲ್ಲಿಸುತ್ತೇನೆ. 2005–06ನೇ ಸಾಲಿಗೆ ಕೃಷಿ ಮತ್ತು ಶಿಕ್ಷಣ ಹಾಗೂ ಇನ್ನಿತರ ಇಲಾಖೆಗಳ ಬಗ್ಗೆ ಏನು ಸಚಿವರುಗಳು ಬೇಡಿಕೆಯನ್ನು ಮಂಡಿಸಿದ್ದಾರೆ, ಆ ವಿಚಾರದಲ್ಲಿ ಕೆಲವೊಂದು ಸಲಹೆಗಳನ್ನು ನೀಡುತ್ತಾ, ಈ ಬೇಡಿಕೆಗಳನ್ನು ನಾನು ಬೆಂಬಲಿಸುತ್ತೇನೆ. ಈ ವರ್ಷ ನಮ್ಮ ಸರ್ಕಾರ, ದೇಶಕ್ಕೆ ಮಾದರಿಯಾಗುವಮತಹ ಬಜೆಟನ್ನು ಮಾನ್ಯ ಮುಖ್ಯಮಂತ್ರಿಗಳಾದ ಧರ್ಮಸಿಂಗ್ ಅವರ ನೇತೃತ್ವದಲ್ಲಿ ಇರುವಂತಹ ಸರ್ಕಾರ, ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳು ಆಗಿರುವಂತಹ ಮಾನ್ಯ ಸಿದ್ಧರಾಮಯ್ಯನವರು ಕೊಟ್ಟಿದ್ದಾರೆ. ಅದರ ಜೊತೆಗೆ ಕೃಷಿ, ನೀರಾವರಿ ಮತ್ತು ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ಈ ಸರ್ಕಾರ ನೀಡಿದೆ, ಅದಕ್ಕೆ ನಾನು ಅಭಿನಂದಿಸುತ್ತೇನೆ. ಆದರೂ ಕೂಡ ಇನ್ನೂ ನಮ್ಮ ಬೇಡಿಕೆಗಳು ಸಾಕಷ್ಟು ಇವೆ. ಅದನ್ನು ಸುಧಾರಣೆ ಮಾಡುವುದಕ್ಕೆ ಈಗಿರುವಂತಹ ಹಣಕಾಸಿನ ಚೌಕಟ್ಟಿನಲ್ಲಿ ಸಾಧ್ಯವಿದೆ. ಈಗ ಏನು ನಮ್ಮ ಕೃಷಿ ಮಂತ್ರಿಗಳು ಬೇಡಿಕೆಯನ್ನು ಮಂಡಿಸಿದ್ದಾರೆ, 2005–06ನೇ

ಸಾಲಿನಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ, ಅದರಲ್ಲಿ ಹಲವಾರು ಬಹಳ ಒಳ್ಳೆಯ ಕಾರ್ಯಕ್ರಮಗಳು ಇವೆ. ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಹೇಳಿದಂತೆ ಕೃಷಿ ವಲಯಕ್ಕೆ ಸಂಬಂಧಪಟ್ಟಿದ್ದು ಮುಖ್ಯವಾಗಿ ವಿದ್ಯುತ್ ಮತ್ತು ನೀರಾವರಿ; ಅವೆರಡೂ ಬೇಕೇಬೇಕಾಗುತ್ತದೆ. ವಿದ್ಯುತ್ ಮತ್ತು ನೀರಾವರಿ ಇಲ್ಲದೆ ಇದ್ದರೆ ಕೃಷಿ ಚಟುವಟಿಕೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಆ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ನೀರಾವರಿ ಮತ್ತು ವಿದ್ಯುತ್ ವಲಯಕ್ಕೆ ಅತೀ ಹೆಚ್ಚಿನ ಹಣವನ್ನು ಕೊಟ್ಟಿದೆ. ಅದರಲ್ಲಿ ವಿಶೇಷವಾಗಿ ನೀರಾವರಿ ಕಾಮಗಾರಿಗಳನ್ನು ನಮ್ಮ ರಾಜ್ಯದಲ್ಲಿ ಸಂಪೂರ್ಣಗೊಳಿಸುವ ಸಲುವಾಗಿ ಈ ಸಾರಿ, ಸುಮಾರು 4,400 ಕೋಟಿ ರೂಪಾಯಿ ರೂ.ಗಳ ಯೋಜನಾ ವೆಚ್ಚದಲ್ಲಿ ಹಣವನ್ನು ನಿಗದಿಪಡಿಸಿದ್ದಾರೆ. ಇದು ಬಹಳ ಉತ್ತಮ ಕೆಲಸ. ಇವತ್ತೇನು ನಮ್ಮ ಕೃಷಿ ಮಂತ್ರಿಗಳು ಇದ್ದಾರೆ, ಇನ್ನೂ ಹಲವಾರು ಒಳ್ಳೆಯ ಕೆಲಸಗಳನ್ನು ತಮಗೆ ನಿಗದಿಪಡಿಸಿರುವಂತಹ ಹಣದಲ್ಲಿ ಮಾಡುವುದಕ್ಕೆ ಸಾಧ್ಯವಿದೆ. ಏಕೆಂದರೆ ನಮ್ಮ ದೇಶದಲ್ಲಿ ಶೇಕಡ 60ರಷ್ಟು ರೈತರು ಇದ್ದರೆ, ನಮ್ಮ ರಾಜ್ಯದ ಜನಸಂಖ್ಯೆಯಲ್ಲಿ ಶೇಕಡ 69ರಷ್ಟು ಜನ ರೈತರು ಇದ್ದಾರೆ. ರೈತರಿಗೆ ಈವರೆಗೆ ಕೂಡ ವೈಜ್ಞಾನಿಕವಾದಂತಹ ರೀತಿಯಲ್ಲಿ ಕೃಷಿಯನ್ನು ಹೇಗೆ ಮಾಡಬೇಕು ಎಂದು ಯಾವ ಸರ್ಕಾರ ಕೂಡ ತಿಳಿಸಿಲ್ಲ. ಯಾವ ಒಬ್ಬ ರೈತರೂ ಕೂಡ ಒಂದು ಎಕರೆ ಜಮೀನಿನಲ್ಲಿ ಯಾವ ಬೆಳೆ ಬೆಳೆದರೆ ಎಷ್ಟು ಬರುತ್ತದೆ ಎನ್ನುವ ಜ್ಞಾನವನ್ನು ನಮ್ಮ ಕೃಷಿ ಅಧಿಕಾರಿಗಳು ಕಳುಹಿಸಿಕೊಡಲಿಲ್ಲ. ಕಾರಣ, ಕೃಷಿ ಅಧಿಕಾರಿಗಳಿಗೂ ಕೂಡ ಕೆಲವೊಂದು ವಿಚಾರಗಳು ಗೊತ್ತಿಲ್ಲ. ಇದು ಬಹಳ ಸೋಜಿಗದ ಸಂಗತಿ. ಅದಕ್ಕಾಗಿ ನಾವು ಹೆಚ್ಚು ಕೃಷಿ ಶಾಲೆಗಳನ್ನು ತೆರೆಯಬೇಕಾಗಿತ್ತು. ಆದರೆ ಕೃಷಿ ಶಾಲೆಗಳನ್ನು ತೆರೆಯುವುದರ ಬಗ್ಗೆ ನಾವು ಯೋಚನೆ ಮಾಡಲಿಲ್ಲ. ನಾನು ಎಂಎಲ್‌ಎ ಆಗಿ ಸುಮಾರು 21 ವರ್ಷವಾಯಿತು, ಹಿಂದೆ 1983–84ನೇ ಸಾಲಿನಲ್ಲಿ ಹತ್ತು ಕೃಷಿ ಹೈಸ್ಕೂಲ್‌ಗಳನ್ನು ತೆರೆದಿದ್ದರು. ಅದಕ್ಕೆ ನಾನು ನಮ್ಮ ಅಧಿಕಾರಿಗಳನ್ನು ಈ ವರ್ಷ ಎಷ್ಟು ಕೃಷಿ ಶಾಲೆಗಳನ್ನು ತೆರೆದಿದ್ದೀರಿ ಎಂದು ಕೇಳಿದೆ. ಅದಕ್ಕೆ ಅವರು ಇಲ್ಲ ಸಾರ್, ಆ ಹತ್ತು ಶಾಲೆಗಳನ್ನು ಬಂದ್ ಮಾಡಿದ್ದೇವೆ ಎಂದು ಹೇಳಿದರು. ನನಗೆ ಅದರಿಂದ ಬಹಳ ಶಾಕ್ ಆಯಿತು. 10 ಕೃಷಿ ಪ್ರೌಢ ಶಾಲೆಗಳನ್ನು 20 ವರ್ಷದ ಹಿಂದೆ ತೆರೆದಿದ್ದನ್ನು ಈಗ ಬಂದ್ ಮಾಡಿದ್ದಾರೆ. ಆದುದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ, ಇದರ ಬಗ್ಗೆ ಸಮಗ್ರವಾಗಿ ತಾವು ವಿಚಾರ ಮಾಡಿ. ಏಕಂದರೆ ನನಗೆ ಅದು ಫಸ್ಟ್ ಹ್ಯಾಂಡ್ ಇನ್‌ಫಾರ್ಮೇಷನ್. ನಾನೇನು ಹೇಳಿದೆ ಎಂದು ನಿಮ್ಮ ಆಫೀಸರ್‌ಗೆ ಗೊತ್ತಿದೆಯೋ ಇಲ್ಲವೋ? ನನ್ನ ಹತ್ತಿರ ಫಸ್ಟ್ ಹ್ಯಾಂಡ್ ಇನ್‌ಫಾರ್ಮೇಷನ್ ಇದೆ. ಅದಕ್ಕೆ ಇದನ್ನು ಸಮಗ್ರವಾಗಿ ತಾವು ತನಿಖೆ ಮಾಡಿ, ಆ ಸ್ಕೂಲ್‌ಗಳು ಬಂದ್ ಆಗಿದ್ದರೆ, ದಯವಿಟ್ಟು

ಓಪನ್ ಮಾಡಿಸಿ. ಅಷ್ಟೇ ಅಲ್ಲಿ ತಾವು ದಯಮಾಡಿ, ಈ ವರ್ಷದ ಆಯವ್ಯಯದಲ್ಲಿ ಹೆಚ್ಚು ಹಣ ಸಿಗುತ್ತದೆ, ಬಹುಶಃ ಈಗೇನು ಸಪ್ಲಿಮೆಂಟರಿ ಬಜೆಟ್ ಅನ್ನು ಮಂಡನೆ ಮಾಡುತ್ತಾರೆ ಆಗ ನಿಮಗೆ ಗೊತ್ತಾಗುತ್ತದೆ. ಈ ಸಾರಿ ಹೆಚ್ಚು ಹಣ ಸಿಗುತ್ತದೆ, ಏಕೆಂದರ ವ್ಯಾಟ್‌ನಲ್ಲಿ ನಮಗೆ ಹೆಚ್ಚು ಹಣ ಬಂದಿದೆ. 900 ಕೋಟಿ ರೂಪಾಯಿಗಳನ್ನು ಈಗಾಗಲೇ ಫಸ್ಟ್ ಕ್ವಾರ್ಟರ್ಸ್‌ನಲ್ಲಿ ತೆರಿಗೆಯೆಂದು ಸೇಲ್ಸ್ ಟ್ಯಾಕ್ಸ್ ಅನ್ನು ವಸೂಲೆ ಮಾಡಿದ್ದಾರೆ. ಹೀಗಾಗಿ ಇನ್ನು ಹೆಚ್ಚು ಹಣ ಸಿಗುತ್ತದೆ. ಅದಕ್ಕಾಗಿ ನೀವು ಈ ಕೃಷಿ ಶಾಲೆಗಳನ್ನು ಕನಿಷ್ಟ ಪಕ್ಷ ಜಿಲ್ಲೆಗೆ ಒಂದರಂತೆ ತೆರೆಯಲೇಬೇಕು. ಇದರಿಂದ ರೈತರು ಮತ್ತು ಮುಂದೆ ಬರುವಂತಹ ರೈತನ ಮಕ್ಕಳಿಗೆ, ಕೃಷಿ ಶಿಕ್ಷಣದ ಬಗ್ಗೆ ಹೆಚ್ಚು ಮಹತ್ವ ಕೊಟ್ಟ ಹಾಗೆ ಆಗುತ್ತದೆ. ಮತ್ತು ಯಾವ್ಯಾವ ಬೆಳೆಗಳನ್ನು ಹೇಗೆ ಹಾಕಬೇಕು? ಏನು ಮಾಡಬೇಕು? ಮತ್ತು ಕೃಷಿ ಮಾರ್ಕೆಟ್ ಬಗ್ಗೆ ಎಲ್ಲಾ ರೀತಿಯಲ್ಲಿ ಸಮಗ್ರವಾದಂತಹ ವಿಚಾರವನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಅರಗಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವರಾಜ ರಾಯರೆಡ್ಡಿಯವರೇ, ಒಂದು ನಿಮಿಷ, ನಾನು ಮಾತನಾಡುತ್ತೇನೆ. ಮಾನ್ಯ ಬಸವರಾಜ ರಾಯರೆಡ್ಡಿಯವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಕೃಷಿಗೆ ಸಂಬಂಧಪಟ್ಟ ಹಾಗೆ ಪ್ರೌಢಶಾಲೆಯನ್ನು ಮುಚ್ಚಿದ್ದಾರೆಂದು ಹೇಳಿದ್ದಾರೆ. ಇವರು ಪ್ರೌಢಶಾಲೆಯನ್ನು ಮುಚ್ಚಿದ್ದು ಮಾತ್ರವಲ್ಲ. ಈ ಪ್ರೌಢಶಾಲೆಯಲ್ಲಿ ಹಾರ್ಟಿಕಲ್ಚರ್ ಮತ್ತು ಕೃಷಿಯನ್ನು ಹೇಳಿಕೊಡುವಂತಹ ಡಿಪ್ಲೊಮಾ ಮಾಡಿದಂತಹ ಟೀಚರ್ಸ್ ಇದ್ದರು. ಇದರ ಬಗ್ಗೆ ಟಿ.ಎ.ಎಸ್.ಆಫೀಸರ್ಸ್ ಎಲ್ಲಾ ಕುಳಿತು 5 ವರ್ಷಗಳ ಹಿಂದೆ ಒಂದು ಪ್ರೊಸೀಡಿಂಗ್ಸ್ ಮಾಡಿದ್ದಾರೆ. ಆ ಹುದ್ದೆಯನ್ನು ರದ್ದು ಮಾಡಿ ಆ ಜಾಗಕ್ಕೆ ಕ್ರಾಫ್ಟ್ ಮತ್ತು ಟೈಲರಿಂಗ್ ಟೀಚರ್ಸ್ ಅನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವಂಥಾದ್ದಕ್ಕೆ ಅಧಿಕಾರವನ್ನು ಕೊಟ್ಟಿದ್ದಾರೆ. ಇಲ್ಲಿ ಒಬ್ಬ ಎಸ್.ಎಸ್.ಎಲ್.ಸಿ. ಮಾಡಿ ಹೊರಗಡೆ ಬಂದಂಥವನು, ಕೃಷಿಕನ ಮಗ ಒಬ್ಬ ಒಳ್ಳೆಯ ಕೃಷಿಕನಾಗಬಾರದೆಂದು ಹೇಳುವಂಥಾದ್ದು, ನಿಮ್ಮ ಅಧಿಕಾರಿಗಳ ತಲೆಯಲ್ಲಿ ಇದೆಯೆಂದರೆ, ಮಾನ್ಯ ಶ್ರೀನಿವಾಸಗೌಡರೇ, ಇದರ ಬಗ್ಗೆ ತಾವು ಸ್ವಲ್ಪ ಯೋಚನೆಯನ್ನು ಮಾಡಿ. ಇಲ್ಲಿ ಪ್ರೌಢಶಾಲೆಯಲ್ಲಿರುವಂತಹ, ಕೃಷಿ ಹೇಳಿಕೊಡುವಂತಹ ಡಿಪ್ಲೊಮಾ ಆದಂತಹ ಹುದ್ದೆಯನ್ನು ಈ ಅಧಿಕಾರಿಗಳು ರದ್ದು ಮಾಡಿದರು. ಇದನ್ನು ಮಾಡಿ 5 ವರ್ಷಗಳಾಗಿದೆ. ಇದು ಅಧಿಕಾರಿಗಳು ಕುಳಿತುಕೊಂಡು ಮಾಡಿರುವಂತಹ ಪ್ರೊಸೀಡಿಂಗ್ಸ್, ಇದನ್ನು ಜಾರಿಗೆ ತಂದು ಬಿಟ್ಟಿದ್ದಾರೆ. ಇದನ್ನು ಯಾರಿಗೂ ಹೇಳಲಿಲ್ಲ, ಕೇಳಲಿಲ್ಲ. ಈ ಬಗ್ಗೆ ಹಿಂದಿನ ಎಜುಕೇಷನ್ ಮಿನಿಸ್ಟರರವರಿಗೂ ಹೇಳಿದ್ದೆ. ಇದನ್ನು ಈಗ ಎಜುಕೇಷನ್ ಮಿನಿಸ್ಟರ್‌ರವರು ಗಮನಿಸಬೇಕು, ಇದು ನಿಮಗೆ ಬರುತ್ತದೆ. ನಾನು ಅಧಿಕಾರಿಗಳಿಗೆ ಹೇಳಿದ್ದೆ, ಆದರೆ ಅವರಿಗೆ ಅದು ಅರ್ಥವಾಗಲಿಲ್ಲ. ಅರಗ ಜ್ಞಾನೇಂದ್ರರವರೆ ನೀವೇ ಅಧಿಕಾರಿಗಳಿಗೆ ಕೇಳಿ ಎಂದು ಹೇಳಿದರು. ಅವರಿಗೆ ನಾನು

ಹೇಳಿದೆ. ನಮ್ಮ ಐ.ಎ.ಎಸ್. ಅಧಿಕಾರಿಗಳಿಗೆ ಕನ್ವಿನ್ಸ್ ಮಾಡುವಂತಹ ಯೋಗ್ಯತೆ ನಮಗೆ ಇಲ್ಲ. ನಾವೆಲ್ಲಾ ರೈತಾಪಿ ವರ್ಗದಿಂದ ಬಂದಿರುವರು. ನೀವು ಸರ್ಕಾರಿ ನೌಕರಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ಅವರಿಗೆ ಕೃಷಿಯ ಬಗ್ಗೆಯಾದರೂ ಹೇಳಿ ಕೊಡಿ. ಅವರಿಗೆ ಯಾವ ಗೊಬ್ಬರವನ್ನು ಹಾಕಬೇಕು, ಯಾವ ಬಿತ್ತನೆಯನ್ನು ಮಾಡಬೇಕು. ಹೇಗೆ ವಾಟರ್ ಮ್ಯಾನೇಜ್‌ಮೆಂಟ್ ಅನ್ನು ಮಾಡಬೇಕು, ಗಿಡಗಳು ಹೇಗೆ ಬೆಳೆಯುತ್ತವೆಂಬುದನ್ನು ಹೇಳಿಕೊಡಬೇಕು.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜ ರಾಯರೆಡ್ಡಿಯವರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಈಗ ಮಾನ್ಯ ಕೃಷಿ ಸಚಿವರು ಇದ್ದಾರೆ. ಈಗ ಮಾನ್ಯ ಅರಗಜ್ಞಾನೇಂದ್ರರವರು ಹೇಳಿದ್ದಾರೆ, ನಾವು ಈಗ ನಮ್ಮಲ್ಲಿ ಹೈಸ್ಕೂಲಿಗೆ ಹಾರ್ಟಿಕಲ್ಚರ್ ಅನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ಈಗ ಅವರು ಜಿಲ್ಲೆಗೆ ಒಂದು ಎಂದು ಹೇಳುತ್ತಾರಲ್ಲಾ, ನಮ್ಮ ಎಲ್ಲಾ ಹೈಸ್ಕೂಲ್‌ನಲ್ಲೂ ಒಂದು ಸಬ್ಜೆಕ್ಟ್ ಅನ್ನು ಇಂಟ್ರಡ್ಯೂಸ್ ಮಾಡಬೇಕು. ಈ ಅಗ್ರಿಕಲ್ಚರ್ ಮತ್ತು ಹಾರ್ಟಿಕಲ್ಚರ್ ಅನ್ನು ಕಲಿಸುವಂತಹ ವ್ಯವಸ್ಥೆ ನಮ್ಮ ಎಲ್ಲಾ ಹೈಸ್ಕೂಲ್‌ಗಳಲ್ಲೂ ಮಾಡುವಂಥ ಸಾಧ್ಯತೆಗಳು ಇವೆ. ಈಗ ನಮ್ಮ ಕಲ್ಕೆರೆ ಹೈಸ್ಕೂಲ್‌ನಲ್ಲಿ ನಾವು ಹಾರ್ಟಿಕಲ್ಚರ್ ಸಬ್ಜೆಕ್ಟ್ ಅನ್ನು ಇಂಟ್ರಡ್ಯೂಸ್ ಮಾಡಿದ್ದೇವೆ. ಅದು ಚೆನ್ನಾಗಿ ನಡೆಯುತ್ತಿದೆ. ತಾವು ಅದನ್ನು ದಯವಿಟ್ಟು ತೆಗೆದರೆ, ಈಗ ಸಮಗ್ರವಾಗಿ ಜಿಲ್ಲೆಗೊಂದು ಹೈಸ್ಕೂಲ್ ತೆರೆಯುವಂಥಾದ್ದು ಆದರೆ, ಅನುಕೂಲವಾಗುತ್ತದೆ. ಆದುದರಿಂದ ಈಗ ಮಾನ್ಯ ಸಚಿವರು ಇಲ್ಲೇ ಇದ್ದಾರೆ. ಈ ಹಾರ್ಟಿಕಲ್ಚರ್ ಮತ್ತು ಅಗ್ರಿಕಲ್ಚರ್ ಅನ್ನು ಒಂದೊಂದು ಸಬ್ಜೆಕ್ಟ್ ಆಗಿ ಇಂಟ್ರಡ್ಯೂಸ್ ಮಾಡಿದರೆ ಖಂಡಿತವಾಗಿಯೂ ನಮ್ಮ ಹಳ್ಳಿಯ ಮಕ್ಕಳು ಕಲಿಯುತ್ತಾರೆ, ಅದರಲ್ಲೂ ನಮ್ಮ ಹೆಣ್ಣು ಮಕ್ಕಳು ಕಲಿಯುತ್ತಾರೆ. ಇದನ್ನು ನಾವು ಪ್ರತಿ ಹಳ್ಳಿಯಲ್ಲೂ ಮಾಡುವುದರಿಂದ ಮತ್ತು ಹೆಣ್ಣುಮಕ್ಕಳಿಗೆ ನಾವು ಬೇಸಾಯವನ್ನು ಕಲಿಸುವುದರಿಂದ, ಹೆಚ್ಚು ಬೇಸಾಯಕ್ಕೆ ಇವತ್ತು ಅನುಕೂಲವಾಗುತ್ತದೆ. ಆ ಕಾರಣದಿಂದ ಸನ್ಮಾನ್ಯ ಕೃಷಿ ಸಚಿವರು ಹಾಗೂ ವಿದ್ಯಾ ಸಚಿವರು ಇಲ್ಲೇ ಇದ್ದಾರೆ. ಇದನ್ನು ಪರಿಶೀಲನೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ :– ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾನ್ಯ ಕೃಷಿ ಸಚಿವರು ತಮ್ಮ ಉತ್ತರದಲ್ಲಿ ಹೇಳುತ್ತಾರೆಂದು ನಾನು ಬಯಸುತ್ತೇನೆ. ಇನ್ನು ಈ ವರ್ಷ ಉತ್ತಮ ಗುಣಮಟ್ಟದ ಬಿತ್ತನೆಯ ಬೀಜಗಳನ್ನು ರೈತರಿಗೆ ರಿಯಾಯಿತಿ ದರದಲ್ಲಿ ಕೊಡುವುದಕ್ಕೆ ಆಯವ್ಯಯದಲ್ಲಿ ಕೇವಲ 52 ಕೋಟಿ 32 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ. ಈ ಹಣ ಯಾವುದಕ್ಕೂ ಸಾಕಾಗುವುದಿಲ್ಲ. ಈ 52 ಕೋಟಿ 34 ಲಕ್ಷ ರೂಪಾಯಿಗಳು ನಮ್ಮ ರಾಜ್ಯದಲ್ಲಿರುವಂತಹ ಶೇ.69 ರೈತರಿಗೆ ಯಾವುದಕ್ಕೂ ಸಾಕಾಗುವುದಿಲ್ಲ. ಇದನ್ನು

ನೀವು ಕನಿಷ್ಠ ಪಕ್ಷ 200 ಕೋಟಿ ರೂಪಾಯಿಗಳಿಗೆ ಏರಿಕೆ ಮಾಡಬೇಕು. ಇಲ್ಲಿ ಉತ್ತಮ ಗುಣಮಟ್ಟದ ಬಿತ್ತನೆಯ ಬೀಜವನ್ನು ರೈತರಿಗೆ ಸಬ್ಸಿಡಿಯಲ್ಲಿ ಕೊಡದಿದ್ದರೆ, ಇವತ್ತು ರೈತರು ಬದುಕುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಆ ದೃಷ್ಟಿಕೋನದಲ್ಲಿ ನೀವು ಇದನ್ನು 200 ಕೋಟಿ ರೂಪಾಯಿಗಳಿಗೆ ಕನಿಷ್ಠ ಒಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳಂತೆ ಕೊಡುವಂಥಾದ್ದು ಆಗಬೇಕು. ರೈತರಿಗೆ ರಿಯಾಯಿತಿ ದರದಲ್ಲಿ ಬರುವ ಹಾಗೆ ಇದನ್ನು ಏರಿಕೆ ಮಾಡಬೇಕು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ಹಣಕಾಸಿನ ಮಂತ್ರಿಯವರ ಹತ್ತಿರ ನಾವು ಒತ್ತಾಯವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇನ್ನು ನಮ್ಮ ಸರ್ಕಾರ ಇನ್ನು ಒಂದು ಒಳ್ಳೆಯ ಯೋಜನೆಯನ್ನು ರೈತರಿಗೆ ಮತ್ತು ಕಾರ್ಮಿಕರಿಗೆ ತಂದಿದೆ. ಅದು "ಯಶಸ್ವಿನಿ ಮತ್ತು ಸಂಜೀವಿನಿ" ಕಾರ್ಯಕ್ರಮಗಳು ಇವು ನಿಜವಾಗಿಯೂ ಕೂಡ ಮಾನವೀಯತೆಯ ಕೆಲಸವಾಗಿದೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬಹಳಷ್ಟು ರೈತರಿಗೆ ಕ್ಯಾನ್ಸರ್, ಹೃದಯರೋಗಕ್ಕೆ ಸಂಬಂಧಪಟ್ಟಂತಹ ರೋಗಗಳು ಇನ್ನಿತರ ದೊಡ್ಡ ದೊಡ್ಡ ಪ್ರಮಾಣದಲ್ಲಿ ಹಣ ಖರ್ಚು ಆಗುವಂತಹ ರೋಗಗಳು ಬರುತ್ತಿವೆ.

(ಮಾನ್ಯ ಉಪಾಧ್ಯಕ್ಷರು ಶ್ರೀ ಎನ್.ವೈ. ಗೋಪಾಲಕೃಷ್ಣ ಅಧ್ಯಕ್ಷ ಪೀಠವನ್ನಲಂಕರಿಸಿದರು)

ಆದರೆ ರೈತ ಇವತ್ತು ಅಷ್ಟು ಹಣವನ್ನು ವೆಚ್ಚ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಇವತ್ತು ಈ "ಯಶಸ್ವಿನಿ ಮತ್ತು ಸಂಜೀವಿನಿ" ಕಾರ್ಯಕ್ರಮಗಳು ಬಂದಿವೆ, ಈ ಯೋಜನೆಗಳು ಬೆಂಗಳೂರಿನಲ್ಲಿರುವಂತಹ ಹೈಟೆಕ್ ಆಸ್ಪತ್ರೆಗಳಿಗೆ ಮಾತ್ರ ಸೀಮಿತ ಆಗಿದೆ. ಇದು ಅಷ್ಟೇ ಅಲ್ಲ, ಕೆಲವು ಆಸ್ಪತ್ರೆಗಳು ಯಶಸ್ವಿನಿ ಕಾರ್ಡು ಇದ್ದರೂ ಸಹಿತ ರೈತರನ್ನು ಶೋಷಣೆ ಮಾಡುತ್ತವೆ. ನಾನು ನಿನ್ನೆ ನನ್ನ ಕಣ್ಣೆದುರು ಆದಂತಹ ಉದಾಹರಣೆಯನ್ನು ಹೇಳುತ್ತೇನೆ. ಡಾ॥ ದೇವಿಶೆಟ್ಟಿಯವರು ಇರುವಂತಹ ನಾರಾಯಣ ಹೃದಯಾಲಯಕ್ಕೆ ನಮ್ಮ ಕೊಪ್ಪಳಕ್ಕೆ ಸಂಬಂಧಪಟ್ಟಂತಹ ಒಬ್ಬ ವ್ಯಕ್ತಿ ಹೃದಯ ರೋಗಕ್ಕೆ ತುತ್ತಾಗಿದಂಥ ಸಣ್ಣ ಹುಡುಗಿಯನ್ನು ಕರೆದುಕೊಂಡು ಬಂದಿದ್ದರು. ಯಶಸ್ವಿನಿ ಯೋಜನೆಯಡಿಯಲ್ಲಿ ಅವರ ತಂದೆಯವರು ಕಾರ್ಡ್ ಅನ್ನು ಮಾಡಿಸಿದ್ದರು. ಅವರು ಯಶಸ್ವಿನಿ ಕಾರ್ಡ್ ಮಾಡಿಸಿದ್ದರೂ, ಆ ಕಾರ್ಡ್ ಮಾಡಿಸಿದ್ದರೂ, ಆ ಕಾರ್ಡ್ ಅನ್ನು ತೆಗೆದುಕೊಳ್ಳುತ್ತಿಲ್ಲ. ಅದಕ್ಕೆ 28 ವಿಚಾರಗಳನ್ನು ಹೇಳುತ್ತಾರೆ, ನೀವು ಪಂಚ್ ಮಾಡಿಸಿಕೊಂಡು ಬನ್ನಿ, ಇನ್ನು ಏನೋ ಹೇಳಿದರು. ಇಲ್ಲಿ ಅವರಿಗೆ ಯಶಸ್ವಿನಿ ಕಾರ್ಡ್ ಇದ್ದರೂ ಸಹಿತ ಏಕೆ ತೆಗೆದುಕೊಳ್ಳುತ್ತಿಲ್ಲ? ಆದುದರಿಂದ ಇದರ ಬಗ್ಗೆ ಕಟ್ಟುನಿಟ್ಟಿನ ಆದೇಶವನ್ನು ಸರ್ಕಾರ ಈ ಎಲ್ಲಾ ಆಸ್ಪತ್ರೆಗಳಿಗೂ ಕೊಡಬೇಕು. ಯಾರಿಗೆ ಈ ಯಶಸ್ವಿನಿ ಕಾರ್ಡ್ ಇದೆ, ಅವರಿಗೆ ಯಾವುದೇ ಮುಲಾಜು ಇಲ್ಲದೆ,

ಅವರನ್ನು ಆಸ್ಪತ್ರೆಗೆ ಅಡ್‌ಮಿಟ್ ಮಾಡಿಕೊಂಡು, ಅವರ ರೋಗವನ್ನು ವಾಸಿ ಮಾಡಬೇಕು. ಇದರಲ್ಲಿ ಅವರಿಗೆ ಏನು ಸೌಲಭ್ಯಗಳು ಇವೆ, ಆ ಸೌಲಭ್ಯಗಳು ಅವರಿಗೆ ಸಿಗಬೇಕು. ಇನ್ನು ಇದು ಬೆಂಗಳೂರಿನಲ್ಲಿ ಇರುವಂತಹ ಕೆಲವೇ ಕೆಲವು ಆಸ್ಪತ್ರೆಗಳಿಗೆ ಇದೆ. ಈಗ ಬೀದರ್‌ನಿಂದ ಬೆಂಗಳೂರಿಗೆ ಬರಬೇಕೆಂದರೆ 700 ಕಿ.ಮೀ ದೂರದಿಂದ ಬರುವುದಕ್ಕೆ ಆಗುತ್ತದೆಯೇ? ಈಗ ನನ್ನ ಕ್ಷೇತ್ರ 400 ಕಿ.ಮೀ ಇದೆ, ಅಲ್ಲಿಂದ ಬರುವುದಕ್ಕೆ ಸಾಧ್ಯವಿದೆಯೇ? ಹೀಗಾಗಿ ಎಲ್ಲಾ ಜಿಲ್ಲೆಗಳಲ್ಲೂ ಖಾಸಗಿ ಆಸ್ಪತ್ರೆಗಳು ಚೆನ್ನಾಗಿ ಬಂದಿವೆ, ಇದನ್ನು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲೂ ಈ "ಯಶಸ್ವಿನಿ ಮತ್ತು ಸಂಜೀವಿನಿ" ಕಾರ್ಡ್ ಅನ್ನು ಅಕ್ಸೆಪ್ಟ್ ಮಾಡುವಂಥಾದ್ದಕ್ಕೆ ಸರ್ಕಾರ ಆದೇಶ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಉಪಾಧ್ಯಕ್ಷರೇ, ಈ ವಿಷಯದ ಬಗ್ಗೆ ಕಳೆದ ಬಾರಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಆರ್.ವಿ. ದೇಶಪಾಂಡೆಯವರು ಹೇಳಿದರು. ನಾನು ಅವರಿಗೆ ಹೇಳಿದೆ, ಈ ಯಶಸ್ವಿನಿ ಕಾರ್ಡ್ ಇದ್ದ ಕೂಡಲೇ, ಆಸ್ಪತ್ರೆಯವರು ಅದನ್ನು ಕ್ರೆಡಿಟ್ ಕಾರ್ಡ್ ರೀತಿಯಲ್ಲಿ ಅಕ್ಸೆಪ್ಟ್ ಮಾಡಿ, ಅವರಿಗೆ ಟ್ರೀಟ್‌ಮೆಂಟ್ ಅನ್ನು ಕೊಡಬೇಕು. ಅನಂತರ ಸರ್ಕಾರದಿಂದ ಹಣವನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದೆ. ಅದಕ್ಕೆ ಮಾನ್ಯ ಆರ್.ವಿ. ದೇಶಪಾಂಡೆಯವರು ಉತ್ತರವನ್ನು ಕೊಟ್ಟಿದ್ದರು. ಆ ರೀತಿ ಏನಾದರೂ ತೊಂದರೆಯಾದರೆ ಅಂತಹ ಆಸ್ಪತ್ರೆಗಳನ್ನು "ಬ್ಲಾಕ್ ಲಿಸ್ಟ್" ಮಾಡುತ್ತೇನೆಂದು ಹೇಳಿದ್ದರು. ಈ ಸದನದಲ್ಲಿ ಇವತ್ತು ಆ ಆಸ್ಪತ್ರೆಗಳಲ್ಲಿ "ಯಶಸ್ವಿನಿ ಕಾರ್ಡ್" ಅನ್ನು ತೋರಿಸಬೇಕು, ಅವರ ಮನವಿ ಮೊದಲು ಯಶಸ್ವಿನಿಯವರಿಗೆ ಹೋಗಬೇಕು. ಅವರು ಅನುಮೋದನೆಯನ್ನು ಕೊಟ್ಟಮೇಲೆ ಇವರು ನೋಡುವಂಥಾದ್ದು ಇಲ್ಲಿ ಅವರ ಅನುಮೋದನೆಯಾಗುವವರೆಗೆ ಅಪರೇಷನ್ ತಡೆಯುತ್ತದೆಯೆ? ಇದು ಪರಿಸ್ಥಿತಿ ಇರುವಂಥಾದ್ದು. ಆದುದರಿಂದ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಆರ್.ವಿ. ದೇಶಪಾಂಡೆಯವರು ಉತ್ತರವನ್ನು ಹೇಳಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ :– ಮಾನ್ಯ ಉಪಾಧ್ಯಕ್ಷರೇ, ಇದಕ್ಕೆ ಮಾನ್ಯ ದೇಶಪಾಂಡೆಯವರು ಉತ್ತರವನ್ನು ಹೇಳಲಿ, ಆದರೆ ಇಲ್ಲಿ ರೈತರ ಪರವಾಗಿ ಕೃಷಿ ಸಚಿವರು ಉತ್ತರವನ್ನು ಹೇಳಬೇಕಾಗುತ್ತದೆ. ಇನ್ನು ಈ ವರ್ಷ 2005–06ನೇ ಇಸವಿಯಲ್ಲಿ "ಕೃಷಿ ವಿಜ್ಞಾನ ಕೇಂದ್ರ" ವನ್ನು ಈ ವರ್ಷ ಬಾಗಲಕೋಟೆಯಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಇದು ಸಂತೋಷ, ಆದರೆ ಒಂದು "ಕೃಷಿ ವಿಜ್ಞಾನ ಕೇಂದ್ರ" ವನ್ನು ಮಾಡಿದರೆ ಸಾಕಾಗುವುದಿಲ್ಲ. ಇದು ಕೇಂದ್ರ ಸರ್ಕಾರದ ಧನ ಸಹಾಯದಿಂದ ಈ "ಕೃಷಿ ವಿಜ್ಞಾನ ಕೇಂದ್ರ"ಗಳನ್ನು ಮಾಡುವ ಸಾಧ್ಯತೆ ಇದೆ. ಆದರೆ ಒಂದು ವಿಚಾರ ನಾವು ಭಾರತ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ಕರ್ನಾಟಕ ರಾಜ್ಯ ಎಲ್ಲಾ

ಇಲಾಖೆಗಳಲ್ಲೂ ಇದರ ಉಪಯೋಗವನ್ನು ಕಡಿಮೆ ತೆಗೆದುಕೊಳ್ಳುತ್ತಿದ್ದೇವೆ. ಈ ಕೃಷಿ ಇಲಾಖೆಯೂ ಕೂಡ ಇದರಿಂದ ಹೊರತಾಗಿಲ್ಲ. ಈ "ಕೃಷಿ ವಿಜ್ಞಾನ ಕೇಂದ್ರ" ಗಳನ್ನು ಸ್ಥಾಪನೆ ಮಾಡಲು ಭಾರತ ಸರ್ಕಾರ ಎಲ್ಲಾ ಸೌಕರ್ಯಗಳನ್ನು ಕೊಡುತ್ತದೆ. ಇದಕ್ಕೆ ಶೇ.50 ಅಥವಾ ಶೇ.25ರಷ್ಟೋ ನನಗೆ ಗೊತ್ತಿಲ್ಲ, ಆ ಮೊತ್ತವನ್ನು ರಾಜ್ಯ ಸರ್ಕಾರವೂ ಕೊಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಕೃಷಿ ಮಂತ್ರಿಯವರು ಕೇಂದ್ರ ಸರ್ಕಾರದ ಮಾನ್ಯ ಶರದ್ ಪವಾರರವರ ಜೊತೆಯಲ್ಲಿ ಮಾತನಾಡಿ, ಕೇಂದ್ರದ ಮಂತ್ರಿಯವರೊಡನೆ ಮಾತನಾಡಿ, ನಮ್ಮ ರಾಜ್ಯದಲ್ಲಿ ಕನಿಷ್ಟ ಪಕ್ಷ ಎಲ್ಲಾ ಜಿಲ್ಲೆಗಳಲ್ಲೂ ಒಂದೊಂದು "ಕೃಷಿ ವಿಜ್ಞಾನ ಕೇಂದ್ರ" ಗಳನ್ನು ಸ್ಥಾಪನೆ ಮಾಡಬೇಕು. ಇದು ಸಾಧ್ಯವಾಗುತ್ತದೆ. ಸಾಧ್ಯವಾಗುವುದಿಲ್ಲವೆಂದು ಇಲ್ಲ. ಇದಕ್ಕೆ ಕೇಂದ್ರ ಸರ್ಕಾರವೂ ಹಣವನ್ನು ಕೊಡುತ್ತದೆ. ಆ ಹಿನ್ನೆಲೆಯಲ್ಲಿ ಮಾನ್ಯ ಮಂತ್ರಿಗಳು ಕ್ರಿಯಾಶೀಲರಾಗುತ್ತಾರೆಂದು ನಾನು ಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ತಾವು ಸಮಯವನ್ನು ಬಹಳ ಕಡಿಮೆ ಕೊಟ್ಟಿದ್ದರಿಂದ, ನಾನು ಹ ಹಾರ್ಟಿಕಲ್ಚರ್ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಲಿಚ್ಛಿಸುತ್ತೇನೆ. ಇವತ್ತು ನಮ್ಮ ಸರ್ಕಾರ ಇಸ್ರೇಲ್ ಮಾದರಿಯ ತುಂತುರು ನೀರಾವರಿಯ ವಿಚಾರದಲ್ಲಿ 5 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿಟ್ಟಿದ್ದಾರೆ. ನಾವು ಈ ಕಾನ್ಸೆಪ್ಟ್ ಅನ್ನು ಸ್ವಾಗತ ಮಾಡಬೇಕು, ಮತ್ತು ಇದು ಒಳ್ಳೆಯದು ಆಗಿದೆ. 1988-89ನೇ ಸಾಲಿನಲ್ಲಿ ನಾನು ಮತ್ತು ಮಾನ್ಯ ಬಿ.ಆರ್. ಪಾಟೀಲ್‌ರವರು ಹಾಗೂ ಇನ್ನಿತರ ಸ್ನೇಹಿತರುಗಳೊಡನೆ 20-25 ದಿವಸಗಳು ಇಸ್ರೇಲ್ ಗೌವರ್ನಮೆಂಟ್‌ನ ಆಹ್ವಾನದ ಮೇರೆಗೆ ಹೋಗಿದ್ದೆವು. ಅಲ್ಲಿ ಅವರ ನೀರಿನ ನಿರ್ವಹಣೆಯನ್ನು ನಿಜವಾಗಿಯೂ ನಾವು ಮೆಚ್ಚುತಕ್ಕಂಥಾದ್ದು. ಅಲ್ಲಿ ಇರುವಂತಹ ಸ್ಪ್ರಿಂಕಲರ್ ಇರಿಗೇಷನ್ ಇರಬಹುದು, ಡ್ರಿಪ್ ಇರಿಗೇಷನ್ ಇರಬಹುದು. Today they are at the Mist Irrigation. ನಾವು ಮಿಸ್ಟ್ ಇರಿಗೇಷನ್ ಬಗ್ಗೆ ಮಾತನಾಡುತ್ತಿಲ್ಲ. ನಾವು ಇನ್ನು ತುಂತುರು ನೀರಾವರಿ, ಡ್ರಿಪ್ ಇರಿಗೇಷನ್ ಬಗ್ಗೆ ಮಾತನಾಡುತ್ತೇವೆ. ನಾವು ಮಿಸ್ಟ್ ಇರಿಗೇಷನ್ ಬಗ್ಗೆ ಮಾತನಾಡುತ್ತಿಲ್ಲ. ದಯವಿಟ್ಟು Flouriculture ಏನು ಇದೆ. Flouriculture can be developed under Mist Irrigation. ಅದರ ಬಗ್ಗೆ ಮಾನ್ಯ ಸಚಿವರು, ರೈತರಿಗೆ ಹೆಚ್ಚು ಮಾಹಿತಿಯನ್ನು ಕೊಡಬೇಕಾಗುತ್ತದೆ. ಆದುದರಿಂದ ಸರ್ಕಾರ ಮಿಸ್ಟ್ ಇರಿಗೇಷನ್ ಬಗ್ಗೆಯೂ ಕೂಡ ಯೋಚನೆ ಮಾಡಲಿ, ಮತ್ತು ಈ ಇಸ್ರೇಲ್ ತಂತ್ರಜ್ಞಾನಕ್ಕೆ ಏನು 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ; ಇದು ಸಾಲುವುದಿಲ್ಲ, ಇದು ಬಹಳ ಕಡಿಮೆ ಇದೆ. ತಾವು ಕೆಲವೇ ಕೆಲವು ಸೆಲೆಕ್ಟೆಡ್ ತಾಲ್ಲೂಕುಗಳನ್ನು ಮಾಡಿದ್ದೀರಿ. ಇವತ್ತು ಉತ್ತರ ಕರ್ನಾಟಕದಲ್ಲಿ ಕೊಪ್ಪಳ, ರಾಯಚೂರು, ಗದಗ್ ಬಾಗಲಕೋಟೆ, ಬಿಜಾಪುರ, ಇವು ಹಾರ್ಟಿಕಲ್ಚರ್‌ಗೆ ಅನುಕೂಲವಾಗುವಂತಹ

ಹವಾಮಾನವಿರುವಂತಹ ಜಿಲ್ಲೆಗಳಾಗಿವೆ. ಈ ಜಿಲ್ಲೆಯಲ್ಲಿ ಇದನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕೆಂದು, ಮತ್ತು ಈ ಜಿಲ್ಲೆಗಳಿಗೆ ವಿಸ್ತಾರ ಮಾಡಬೇಕೆಂದು ಮಾನ್ಯ ತೋಟಗಾರಿಕೆಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಹಿಂದೆ ಕೇಂದ್ರ ಸರ್ಕಾರದಲ್ಲಿ ಎನ್.ಡಿ.ಎ. ಸರ್ಕಾರಕ್ಕಿಂತ ಮೊದಲು ಇದ್ದಂತಹ ಸರ್ಕಾರದಲ್ಲಿ ಮಾನ್ಯ ಐ.ಕೆ.ಗುಜ್ರಾಲ್ ಮತ್ತು ಮಾನ್ಯ ಹೆಚ್.ಡಿ. ದೇವೇಗೌಡರು ಇದ್ದಂತಹ ಕಾಲದಲ್ಲಿ ಸ್ಪ್ರಿಂಕಲರ್ ಇರಿಗೇಷನ್‌ಗೆ ರೈತರಿಗೆ ಶೇ.70ರಷ್ಟು ಸಬ್ಸಿಡಿಯನ್ನು ಕೊಡುತ್ತಿದ್ದರು. For a woman enterpreneur, ಮಹಿಳಾ ರೈತರಿಗೆ 90 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದರು. ಆದರೆ ಈಗ ಸಬ್ಸಿಡಿಯನ್ನು ಕೆಲವೇ ಕೆಲವು ಜಿಲ್ಲೆಗಳಿಗೆ ಅಂದರೆ ಕೋಲಾರ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಿಬಿಟ್ಟಿದ್ದೀರಿ. ಶ್ರೀನಿವಾಸಗೌಡರೇ don't become too selfish.

ಶ್ರೀ ಕೆ. ಶ್ರೀನಿವಾಸಗೌಡ :– ಬಿಜಾಪುರಕ್ಕೆ ಕೊಟ್ಟಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ :– ಬಿಜಾಪುರಕ್ಕೆ ಕೊಟ್ಟಿದ್ದೇವೆ ಎಂದರೆ, ನಮ್ಮ ಜಿಲ್ಲೆಗೆ ಕೊಟ್ಟಿಲ್ಲವಲ್ಲಾ. ನಾನು ನೋಡಿದ್ದೇವೆ, ಕೋಲಾರ ಜಿಲ್ಲೆಯವರು ನೀವೆಲ್ಲಾ ಒಂದಾಗಿ ಬಿಡುತ್ತೀರಿ. ಬೇರೆ ಕಡೆ ಮಾಡಿದ್ದರೆ ಒಪ್ಪಬೇಕಾಗುತ್ತದೆ. ಆದರೆ ಅದಕ್ಕೆ ಸರ್ಕಾರಿ ಆಜ್ಞೆ ಬರಬೇಕು ಮತ್ತು ಬಜೆಟ್‌ನಲ್ಲಿ ಸಬ್ಸಿಡಿಗೆ ಹಣ ಇಡಬೇಕು. ಬರೀ ಒಂದು ಸ್ಟೇಟ್‌ಮೆಂಟ್ ಹೇಳಿದರೆ ಆಗುವುದಿಲ್ಲ, where is the money? ಅದಕ್ಕೆ ಹಣ ಹೇಗೆ ಜೋಡಿಸುತ್ತಾರೆ ಎಂದು ಹೇಳಬೇಕಲ್ಲವೇ? ಅದಕ್ಕೆ ಹಣ ಇಡುತ್ತೇವೆ, ರಾಜ್ಯದಲ್ಲಿ 70 ಪರ್ಸೆಂಟ್ ಸಬ್ಸಿಡಿ ಹಣವನ್ನು ವಿತರಣೆ ಮಾಡುತ್ತೇವೆ ಎಂದು ಹೇಳಿಬಿಟ್ಟರೆ ಆಗುವುದಿಲ್ಲ. ಅದಕ್ಕೆ ಹಣವನ್ನು ಜೋಡಿಸುತ್ತಾರೆ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಇನ್ನು, ಬೋರ್ಡ್‌ಗಳ ವಿಷಯವನ್ನು ಹೇಳುವುದಾದರೆ, ಉತ್ತರ ಕರ್ನಾಟಕದಲ್ಲಿ ಬೆಳೆಯುವಂಥ ಬೆಳೆಗಳಲ್ಲಿ ತೊಗರಿ ಬೆಳೆಗೆ ತೊಗರಿ ಮಂಡಳಿ ಎಂದು ಮಾಡಿರುವುದನ್ನು ಬಿಟ್ಟರೆ ಬೇರೆ ಯಾವುದೇ ಬೆಳೆಗಳಿಗೆ ಬೋರ್ಡ್ ಇಲ್ಲ. ಗೋಡಂಬಿಗಾಗಿ ಬೋರ್ಡ್ ಇದೆ, ಸ್ಪೈಸ್ ಬೋರ್ಡ್ ಇದೆ. ಉತ್ತರ ಕರ್ನಾಟಕದಲ್ಲಿ ಹಾರ್ಟಿಕಲ್ಚರ್ ಬೆಳೆ ಸಾಕಷ್ಟು ಬರುತ್ತದೆ. ಅಲ್ಲಿ ಗ್ರೇಪ್ಸ್ ಬರುತ್ತದೆ, ದಾಳಿಂಬೆ ಬರುತ್ತದೆ. ಈ ಎಲ್ಲಾ ಬೆಳೆಗಳ ಅಭಿವೃದ್ಧಿಯನ್ನು ಹೇಗೆ ಮಾಡಬೇಕು, ರೈತರಿಗೆ ಹೇಗೆ ಅನುಕೂಲತೆಯನ್ನು ಮಾಡಬೇಕು ಮುಂತಾದ ವಿಚಾರಗಳ ಬಗ್ಗೆ ತಿಳುವಳಿಕೆ ನೀಡಲು ಪ್ರತ್ಯೇಕವಾದಂಥ ಒಂದು ಸಂಸ್ಥೆ ಇಲ್ಲದೇ ಇರುವುದು ಬಹಳ ತೊಂದರೆಯಾಗಿದೆ. ಅದಕ್ಕಾಗಿ, ದಯಮಾಡಿ ಗ್ರೇಪ್ಸ್,

ದಾಳಿಂಬೆ, ಮ್ಯಾಂಗೋ ಹಾಗೂ ಇನ್ನಿತರ ಬೇರೆ ಬೇರೆ ಹಾರ್ಟಿಕಲ್ಚರ್ ಪ್ರಾಡಕ್ಟ್ಸ್‌ಗೆ ಒಂದು ಪ್ರತ್ಯೇಕವಾದ ಬೋರ್ಡ್ ಸ್ಥಾಪನೆ ಮಾಡಬೇಕು. Mango is also very important.

ಮ್ಯಾಂಗೋವನ್ನು ಉತ್ತರ ಕರ್ನಾಟಕದಲ್ಲಿ ಬೆಳೆಯುತ್ತಾರೆ ಮತ್ತು ಕೋಲಾರದಲ್ಲಿ ರಾಜ್ಯದ ಶೇಕಡಾ 40ರಷ್ಟು ಮ್ಯಾಂಗೋವನ್ನು ಬೆಳೆಯುತ್ತಾರೆ. ಇದಕ್ಕೂ ಒಂದು ಬೋರ್ಡ್ ಇಲ್ಲ. ಇಂಥ ಬೆಳೆಗಳನ್ನೆಲ್ಲಾ ಸೇರಿಸಿ ಒಂದು ಪ್ರತ್ಯೇಕವಾದ ಬೋರ್ಡ್ ಅನ್ನು ಸ್ಥಾಪನೆ ಮಾಡಿದರೆ ಬಹಳ ಒಳ್ಳೆಯದು. ಕೃಷಿ ಬಗ್ಗೆ ಹೇಳುವುದು ಇನ್ನೂ ಸಾಕಷ್ಟಿದ್ದರೂ, ಸಮಯ ಕಡಿಮೆ ಇರುವುದರಿಂದ, ಶಿಕ್ಷಣದ ಬಗ್ಗೆ ಎರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವತ್ತು ಶಿಕ್ಷಣ ಮನುಷ್ಯನಿಗೆ ಬಹಳ ಮಹತ್ವವಾದುದು. ಆಹಾರ, ನೀರು, ವಾಯು ಇವುಗಳು ಹೇಗೆ ಬಹಳ ಮುಖ್ಯವೋ ಹಾಗೆಯೇ ಶಿಕ್ಷಣವೂ ಕೂಡ ಬಹಳ ಮುಖ್ಯವಾದುದು. ಇವತ್ತು ಮನುಷ್ಯ ಶಿಕ್ಷಣವನ್ನು ಕಲಿಯದಿದ್ದರೆ ಪ್ರಾಣಿಗಳಿಗಿಂತ ಕಡೆಯಾಗುತ್ತಾನೆ. ಎಲ್ಲಾ ರಂಗದಲ್ಲಿಯೂ ಕೂಡ ಶಿಕ್ಷಣ ಬೇಕಾಗುತ್ತದೆ. ಅದಕ್ಕಾಗಿ, ವಿದ್ಯೆಗೆ ಹೆಚ್ಚು ಮಹತ್ವವನ್ನು ನಮ್ಮ ದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಕೊಟ್ಟಿದ್ದರೂ ಕೂಡ, ನಮ್ಮ ದೇಶದಲ್ಲಿ ಇನ್ನೂ ಸುಮಾರು 50 ಪರ್ಸೆಂಟಿಗಿಂತಲೂ ಹೆಚ್ಚು ಜನ ಇಲ್ಲಿಟರೇಟ್ಸ್ ಇದ್ದಾರೆ. ನಮ್ಮ ದೇಶದಲ್ಲಿ 59 ಪರ್ಸೆಂಟ್ ಲಿಟರೆಸಿ ಇಲ್ಲ. ಮಾಸ್ ಎಜ್ಯುಕೇಷನ್ ಇದೆ, ಸಮುದಾಯ ಶಾಲೆಗಳಿವೆ. ಆದರೆ ಇವೆಲ್ಲವೂ ಅಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಿಲ್ಲ. ಇವತ್ತು ಕಮ್ಯುನಿಟಿ ಕೆಲಸ ಮಾಡಬೇಕಾಗಿತ್ತು.

ಉಪಾಧ್ಯಕ್ಷರು :- ರಾಯರೆಡ್ಡಿಯವರೇ, ಒಂದು ಗಂಟೆಯೊಳಗೆ ಚರ್ಚೆ ಮುಗಿಯಬೇಕು. ಮಾತನಾಡುವವರು ಇನ್ನೂ 5–6 ಜನರಿದ್ದಾರೆ. ಬೇಗ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ :- 12.40ಕ್ಕೆ ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

ಉಪಾಧ್ಯಕ್ಷರು :- ನೀವು ಸಬ್ಜೆಕ್ಟ್ ಮೇಲೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ನೀವು ಸ್ವಲ್ಪ ಮೊದಲೇ ಪ್ರಾರಂಭ ಮಾಡಿದ್ದರೆ ಚೆನ್ನಾಗಿತ್ತು.

ಶ್ರೀ ಬಸವರಾಜ ರಾಯರೆಡ್ಡಿ :- 12.40ಕ್ಕೆ ಮುಗಸಿಬಿಡುತ್ತೇನೆ. Please set a time.

ಉಪಾಧ್ಯಕ್ಷರು :- ಐದು ನಿಮಿಷ ಕಡಿಮೆ ಮಾಡಿಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ :- ಆಯಿತು. ಇವತ್ತು ಪ್ರಾಥಮಿಕ ಶಿಕ್ಷಣ ಬಹಳ ಮುಖ್ಯ. ನಾವು ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ.

ಆದರ ಈ ವರ್ಷ ಪ್ರಾಥಮಿಕ ಶಿಕ್ಷಣಕ್ಕೆ ಕಡಿಮೆ ಹಣ ಕೊಟ್ಟಿದ್ದಾರೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿ ನೋಡಿದರೆ ಈ ವರ್ಷ ಕಡಿಮೆ ಹಣವನ್ನು ಕೊಟ್ಟಿದ್ದಾರೆ. 2004–05ನೇ ಸಾಲಿನಲ್ಲಿ ಶೇಕಡಾ 59.27ರಷ್ಟು ಹಣವನ್ನು ಪ್ರಾಥಮಿಕ ಶಿಕ್ಷಣಕ್ಕೆ ಕೊಟ್ಟಿದ್ದಾರೆ. ಈ ವರ್ಷ, ಅಂದರೆ 2005–06ನೇ ಸಾಲಿನಲ್ಲಿ ಶೇಕಡಾ 58.20 ರಷ್ಟು ಹಣವನ್ನು ಇಟ್ಟಿದ್ದಾರೆ. ಅಂದರೆ ಪ್ರಾಥಮಿಕ ಶಿಕ್ಷಣಕ್ಕೆ ಸುಮಾರು 0.93 ಪರ್ಸೆಂಟ್ ಹಣ ಕಡಿಮೆ ಆಯಿತು. ಇದನ್ನು ಕಡಿಮೆ ಮಾಡಬಾರದಿತ್ತು. ಏಕೆಂದರೆ ನಮ್ಮ ದೇಶದಲ್ಲಿ ಜನಸಂಖ್ಯೆ ಪ್ರಮಾಣ ಬೆಳೆಯುತ್ತಿದೆ. ಬಹಳಷ್ಟು ಜನ ಶಾಲೆಗೆ ಹೋಗಬೇಕೆಂದು ಬಯಸುತ್ತಾರೆ. ಅದಕ್ಕಾಗಿ ನೀವು ಪ್ರಾಥಮಿಕ ಶಿಕ್ಷಣಕ್ಕೆ ಕೊಡುವ ಬಜೆಟ್ಟನ್ನು ಕನಿಷ್ಟ ವರ್ಷ 60 ಪರ್ಸೆಂಟ್‌ಗೆ ಏರಿಸಿ. ಸಿದ್ಧರಾಮಯ್ಯನವರೇ, ಆಗಲೇ ತಾವು ಇರಲಿಲ್ಲ. ತಾವು ಇಲ್ಲದೇ ಇದ್ದ ಸಮಯದಲ್ಲಿ ಹೇಳಿದೆ, ಈ ಸಲ ಫೈನಾನ್ಸ್ ಬಹಳ ಚೆನ್ನಾಗಿ ಆಗಿದೆ, ಮುಂದೆಯೂ ಕೂಡ ಹಣ ಯಾವ ರೀತಿ ಬರುತ್ತದೆ ಎಂದು ನಾನು ಹೇಳಿದೆ.

ಶ್ರೀ ಬಿ.ಆರ್. ಪಾಟೀಲ್ :– ರಾಯರೆಡ್ಡಿಯವರೇ ಒಂದು ನಿಮಿಷ. ಬಹಳ ಮಹತ್ವವಾದ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಅನುದಾನವನ್ನು ಕೊಡಬೇಕೆಂದು ತಾವು ಹೇಳುತ್ತಿದ್ದೀರಿ. ಸಂವಿಧಾನದ ಉಲ್ಲಂಘನೆ ಕೂಡ ಆಗುತ್ತಿದೆ. 1 ರಿಂದ 14ನೇ ವಯಸ್ಸಿನ ಮಕ್ಕಳಿಗೆ ಮುಕ್ತವಾದ ಶಿಕ್ಷಣವನ್ನು ಕೊಡಬೇಕು ಎನ್ನುವಂತ ಮಾತನ್ನು ಸಂವಿಧಾನದಲ್ಲಿ ಹೇಳಿದ್ದಾರೆ. ಆದರೆ ಇವತ್ತು ಸಾವಿರಾರು ಖಾಸಗೀ ಶಾಲೆಗಳು ಅನುಮತಿಯನ್ನು ಪಡೆದುಕೊಂಡು ಅನುದಾನವಿಲ್ಲದೇ ನಡೆಯುತ್ತಿವೆ. ಅವರೆಲ್ಲಾ ಹೈಕೋರ್ಟಿನ ಕಟ್ಟೆ ಏರಿದರು. ಸಂವಿಧಾನದ ಉಲ್ಲಂಘನೆಯಾಗಿದೆ ಎನ್ನುವ ಒಂದು ಹಂತಕ್ಕೆ ಹೈಕೋರ್ಟ್‌ನವರು ಕೂಡ ಬಂದಿದ್ದಾರೆ. ಆದ್ದರಿಂದ, ದಯಮಾಡಿ ತಾವು ಆ ವಿಷಯವನ್ನೂ ಪ್ರಸ್ತಾಪಿಸಿದರೆ ಒಳ್ಳೆಯದು. ಬಜೆಟ್ಟಿನ ಸೈಜ್ ಇನ್ನೂ ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ. ಏಕೆಂದರೆ, ಇದು ಸಂವಿಧಾನದ ಉಲ್ಲಂಘನೆ ಕೂಡ ಆಗಿದೆ. 1 ರಿಂದ 14ನೇ ವಯಸ್ಸಿನ ಮಕ್ಕಳಿಗೆ ಮುಕ್ತವಾಗಿ ಶಿಕ್ಷಣ ಕೊಡಬೇಕು ಎನ್ನುವುದಿದ್ದರೂ ಕೂಡ, ಅನುದಾನ ಕೊಡದೇ ನಾವು ಅನೇಕ ಶಾಲೆಗಳಿಗೆ ಪರ್ಮಿಷನ್ ಕೊಟ್ಟಿದ್ದೇವೆಲ್ಲಾ, ಅವರಿಗೆಲ್ಲಾ ಅನುದಾನ ಕೊಡಬೇಕು ಎಂದು ಆಗಿದೆ.

ಶ್ರೀ ಬಸವರಾಜ ರಾಯರೆಡ್ಡಿ :– ಪ್ರಾಥಮಿಕ ಶಿಕ್ಷಣಕ್ಕೆ ಇಟ್ಟಿರುವ ಹಣವನ್ನು ರಿವೈಸ್ ಮಾಡಿ, ಅದನ್ನು ಹೆಚ್ಚುವರಿ ಮಾಡಬೇಕೆಂದು ನಾನು ಮಾನ್ಯ ಉಪಮುಖ್ಯ ಮಂತ್ರಿಗಳಲ್ಲಿ ಕೇಳಲು ಇಚ್ಛೆಪಡುತ್ತೇನೆ. ಪ್ರಾಥಮಿಕ ಶಾಲೆಗಳಿಗೆ ಅಗತ್ಯವಿರುವ ಶಾಲಾ ಕೊಠಡಿಗಳನ್ನು ನಿರ್ಮಿಸಲು ನಬಾರ್ಡ್ ಮತ್ತು ಇನ್ನಿತರ ಯೋಜನೆಗಳಲ್ಲಿ ಸಾಕಷ್ಟು ಶಾಲೆಗಳನ್ನು ತೆಗೆದುಕೊಂಡಿದ್ದೀರಿ ಮತ್ತು ಶಾಲಾ ಶಿಕ್ಷಕರ ನೇಮಕಾತಿ ಕೂಡ ಆಗುತ್ತಿದೆ. ಹಿಂದೆ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಆಗುತ್ತಿದ್ದಂಥ ಭ್ರಷ್ಟಾಚಾರವನ್ನು, ಜೆ.ಹೆಚ್.

ಪಟೇಲರ ಸರ್ಕಾರದಲ್ಲಿ ಶಿಕ್ಷಣ ಸಚಿವರಾಗಿದ್ದಂಥ ಗೋವಿಂದೇಗೌಡರು ನಿಲ್ಲಿಸುವಂಥ ಪ್ರಯತ್ನ ಮಾಡಿದರು. ಈಗಲೂ ಸಹ, ಈ ಸರ್ಕಾರದಲ್ಲೂ ಕೂಡ ಒಂದು ಪೈಸೆ ಹಣವನ್ನೂ ಕೊಡದೇ, ಭ್ರಷ್ಟಾಚಾರವಾಗದೇ ಶಿಕ್ಷಕರ ನೇಮಕಾತಿಯಾಗುತ್ತಿದೆ. ಅದನ್ನು ಮುಂದುವರೆಸಿಕೊಂಡು ಹೋಗುತ್ತಿರುವುದಕ್ಕೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಶಿಕ್ಷಕರ ಕೊರತೆ ಬಗ್ಗೆ ತಾವು ದಯವಿಟ್ಟು ಯೋಚನೆ ಮಾಡಿ. 2002–03ನೇ ಸಾಲಿನಲ್ಲಿ 2, 46, 505 ಜನ ಟೀಚರ್ಸ್‌ಗಳಿದ್ದರು. 2003–04ನೇ ಸಾಲಿನಲ್ಲಿ 2, 54, 824 ಜನ ಟೀಚರ್ಸ್‌ಗಳಿದ್ದರು. ಆದರೆ 2004–05ನೇ ಸಾಲಿನಲ್ಲಿ ಸುಮಾರು 2 ಲಕ್ಷದ 40 ಸಾವಿರ ಜನ ಟೀಚರ್ಸ್‌ಗಳಿದ್ದಾರೆ. ಅಂದರೆ, ಕಳೆದ ವರ್ಷಕ್ಕಿಂತ ಈ ವರ್ಷ ಸುಮಾರು 20 ಸಾವಿರ ಜನ ಟೀಚರ್ಸ್ ಕಡಿಮೆ ಇದ್ದಾರೆ. ಕೆಲವರು ನಿವೃತ್ತಿಯಾಗಿರಬಹುದು. ಅಂಥ ಹುದ್ದೆಗಳಿಗೆ ತಾವು ಬೇಗನೆ ರಿಕ್ರೂಟ್‌ಮೆಂಟ್ ಮಾಡಬೇಕಾಗಿತ್ತು. ಈಗ ರೆಕ್ರೂಟ್‌ಮೆಂಟನ್ನು ಪ್ರಾರಂಭ ಮಾಡಿದ್ದೀರಿ. ಅದನ್ನು ತ್ವರಿತವಾಗಿ ಮಾಡಿ, ಕೂಡಲೇ ಅಂದರೆ ಒಂದೆರಡು ತಿಂಗಳುಗಳಲ್ಲಿ ಶಿಕ್ಷಕರನ್ನು ನೇಮಕ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :– ರಾಯರೆಡ್ಡಿಯವರೇ, ಒಂದು ನಿಮಿಷ ಸಿದ್ಧರಾಮಯ್ಯನವರು ಇಲ್ಲಿ ಇರುವುದರಿಂದ ಹೇಳುತ್ತಿದ್ದೇನೆ. ರಿಟೈರ್ ಆದಂಥ ಶಿಕ್ಷಕರ ಜಾಗಕ್ಕೆ ನೇಮಕ ಮಾಡಲು ಮತ್ತೆ ಏಕೆ ಫೈನಾನ್ಸ್ ಡಿಪಾರ್ಟ್‌ಮೆಂಟಿನ ಕನ್‌ಕರೆನ್ಸ್ ಕೇಳಲು ಹೋಗುತ್ತೀರಿ? ನನಗೆ ತಿಳಿದ ಮಟ್ಟಿಗೆ ಅದು ಬೇಕಾಗಿಲ್ಲ. ಅವು ಆಲ್‌ರೆಡಿ ಏಡೆಡ್ ಆಗಿರುತ್ತವೆ ಅಥವಾ ಅದು ಸರ್ಕಾರಿ ಶಾಲೆಯಾಗಿರಬಹುದು. ಶಿಕ್ಷಕರು ರಿಟೈರ್ ಆದಕೂಡಲೇ ಆ ಹುದ್ದೆಗಳಿಗೆ ನೇಮಕ ಮಾಡುವಂಥ ಅಧಿಕಾರವನ್ನು ಆ ಇಲಾಖೆಯವರಿಗೇ ಕೊಡಬೇಕು. ಇಲ್ಲದಿದ್ದರೆ, ಫೈನಾನ್ಸ್ ಬರಬೇಕು ಮತ್ತೊಂದು ಬರಬೇಕು ಎಂದು ಹೇಳಿ ವಿಳಂಬವಾಗುತ್ತದೆ. ಮಾನ್ಯ ರಾಯರೆಡ್ಡಿಯವರು 20 ಸಾವಿರ ಶಿಕ್ಷಕರ ಕೊರತೆ ಇದೆ ಎಂದು ಹೇಳಿದರು. ಆದರೆ ಅದು ಇನ್ನೂ ಹೆಚ್ಚು ಇದೆ. ಹಳ್ಳಿಗಾಡಿನಲ್ಲಿ ಶಾಲೆಗಳನ್ನು ಸುಧಾರಿಸಬೇಕೆಂದು ಹೇಳುತ್ತೇವೆ. ಆದರೆ, ಅಲ್ಲಿ ಶಿಕ್ಷಕರೇ ಇಲ್ಲದಂಥ ಪರಿಸ್ಥಿತಿ ಇದೆ. ಅದಕ್ಕಾಗಿ, ದಯವಿಟ್ಟು ತಾವು ಅದನ್ನು ಕನ್ಸಿಡರ್ ಮಾಡಬೇಕು, ಶಿಕ್ಷಕರು ರಿಟೈರ್ ಆದಹಾಗೆ, ಆ ಹುದ್ದೆಗಳಿಗೆ ಇಲಾಖೆಯವರೇ ನೇರವಾಗಿ ನೇಮಕ ಮಾಡುವಂಥ ಅಧಿಕಾರವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ :– ಅದಕ್ಕಾಗಿ ಒಂದು ಸ್ಕೀಮನ್ನು ತಂದಿದ್ದಾರೆ. ನಿವೃತ್ತರಾಗಿರುವಂಥ ಶಿಕ್ಷಕರಿಗೆ ಒಂದು ದಿವಸಕ್ಕೆ ಒಂದು ನೂರು ರೂಪಾಯಿಗಳ ಸಂಭಾವನೆಯನ್ನು ಕೊಟ್ಟು ನೇಮಕಾತಿ ಮಾಡಿಕೊಳ್ಳಲು ಅಧಿಕಾರ ಕೊಟ್ಟಿದ್ದಾರೆ. ರಾಮಲಿಂಗಾರೆಡ್ಡಿಯವರೇ, If I am right - please correct me. ಪ್ರತಿದಿವಸಕ್ಕೆ

ಒಂದು ನೂರು ರೂಪಾಯಿಗಳ ಸಂಭಾವನೆಯನ್ನು ಕೊಟ್ಟು ರಿಟೈರ್ಡ್ ಟೀಚರ್‌ಗಳನ್ನು ಅಪಾಯಿಂಟ್ ಮಾಡಿಕೊಳ್ಳುವ ಸ್ಕೀಂ ಇದೆಯಲ್ಲವೇ? ಹಾಗೆ ಇದ್ದಲ್ಲಿ ಅಂಥ ಸ್ಕೀಮನ್ನು ತ್ವರಿತವಾಗಿ ಮಾಡಿ. ಈ ಸಲ ಶಾಲಾ ಕೊಠಡಿಗಳನ್ನೇ ಕೊಟ್ಟಿಲ್ಲ ಎಂದು ಮಾನ್ಯ ಸದಸ್ಯರಾದ ಶಿವರಾಜ ಸಜ್ಜನ್‌ರವರು ಹೇಳುತ್ತಿದ್ದರು. ತಾವು ಓದಿಲ್ಲ ಎಂದು ಕಾಣುತ್ತದೆ. ದಯಮಾಡಿ ನೋಡಿ. ಈ ಸಾರಿ ಅತ್ಯಂತ ಹೆಚ್ಚು ಕೊಠಡಿಗಳನ್ನು ಈ ಸರ್ಕಾರ ಸ್ಥಾಪನೆ ಮಾಡಿದೆ. I must congratulate the Finance Minister and Education Minister.

ಅತ್ಯಂತ ಹೆಚ್ಚು ಕಟ್ಟಡಗಳನ್ನು ಕೊಟ್ಟಿದ್ದಾರೆ, ಈ ಸಾರಿ ಬಹಳಷ್ಟು ಕಟ್ಟಡಗಳಾಗುತ್ತಿವೆ. ಕಟ್ಟಡದ ಕೊರತೆ ಇಲ್ಲ, ಕೊರತೆ ಇರುವುದು, ಶಿಕ್ಷಕರ ಕೊರತೆ. ಶಿಕ್ಷಕರ ಕೊರತೆ ಏಕಾಗಿದೆ ಎಂದರೆ ಅದು ರಿಕರಿಂಗ್ ಎಕ್ಸ್‌ಪೆಂಡೀಚರ್, ಇದು ಒನ್ ಟೈಂ ಎಕ್ಸ್‌ಪೆಂಡೀಚರ್. ಹಾಗಾಗಿ ಸರ್ಕಾರಕ್ಕೆ ಕಷ್ಟವಾಗುತ್ತದೆ. ಆದರೂ ಕೂಡ ಅದು ಸರ್ವಶಿಕ್ಷಣ ಅಭಿಯಾನದಲ್ಲಿ ಕೇಂದ್ರ ಸರ್ಕಾರದ ಮನವೊಲಿಸಿ ಹೆಚ್ಚು ಶಿಕ್ಷಕರನ್ನು ನೇಮಕಾತಿ ಮಾಡಲು ಪ್ರಯತ್ನ ಮಾಡಬೇಕಾಗುತ್ತದೆ. ಇನ್ನು, ಕುವೆಂಪು ಮಾದರಿ ಶಾಲೆಗಳನ್ನು ತೆರೆದಿದ್ದಾರೆ. ನನಗೆ ಬಹಳ ಸಂತೋಷವಾಯಿತು. ಆದರೆ ಫರ್‌ಫಾರ್ಮೆನ್ಸ್ ಆಫ್ ಬಜೆಟ್‌ನಲ್ಲಿ ಒಂದು ವಾಕ್ಯವನ್ನು ಸೇರಿಸಿದ್ದೀರಿ. ಅದು ನನಗೆ ಇಷ್ಟವಾಗಲಿಲ್ಲ. It is insult to our school boys.

2004-05ನೇ ಸಾಲಿನಲ್ಲಿ ರಾಷ್ಟ್ರಕವಿ ಕುವೆಂಪುರವರ ಜನ್ಮಶತಮಾನೋತ್ಸವದ ಅಂಗವಾಗಿ ಗ್ರಾಮಾಂತರ ಶಾಲಾ ಮಕ್ಕಳು ನಗರದ ಆಂಗ್ಲ ಮಾಧ್ಯಮ ಶಾಲಾ ವಿದ್ಯಾರ್ಥಿಗಳೊಡನೆ ಸರಿಸಮಾನವಾಗುವ ಸ್ಪರ್ಧೆ ಮಟ್ಟದಲ್ಲಿ ಕಲಿಯಲು ಅನುಕೂಲವಾಗುವಂತೆ ರಾಜ್ಯದಲ್ಲಿ.... ಎಂದು ಇದೆ. ಅಂದರೆ, ನಗರದಲ್ಲಿ ಇಂಗ್ಲೀಷ್ ಸ್ಕೂಲಿನಲ್ಲಿ ಓದುತ್ತಿರುವಂಥವರು ಸುಪೀರಿಯರೇಗಳೇ? ಕನ್ನಡ ಓದಿರುವವರು ಸುಪೀರಿಯರ್ಸ್ ಅಲ್ಲವೇ? It is a very bad language. ಅಂದರೆ, ಇಂಗ್ಲೀಷ್ ಓದಿದಂಥ ಮಕ್ಕಳು ಸುಪೀರಿಯರ್ಸ್.....

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೆ, ಶ್ರೀ ರಾಯರೆಡ್ಡಿಯವರೆ ಒಂದ್ನಿಮಿಷ ಕುಳಿತುಕೊಳ್ಳಿ. ಇದನ್ನು ಮಾಡಿರುವುದು ಇಂಗ್ಲೀಷ್ ಮಾಧ್ಯಮದಲ್ಲಿ ಓದಿಕೊಂಡು ಬಂದವರ ಜೊತೆಯಲ್ಲಿ compete ಮಾಡತಕ್ಕಂಥದ್ದು, ಆ concept ಇಟ್ಟುಕೊಂಡಿರುವುದು ಏಕೆಂದರೆ, Convent ನಲ್ಲಿ ಓದತಕ್ಕಂಥ ಮಕ್ಕಳಿಗೆ ಅಲ್ಲಿ ಏನೇನು facilities provide ಮಾಡಿದ್ದಾರೆ ಅದು Library ಇರಬಹುದು, ಆಟದ ಮೈದಾನ

ಇರಬಹುದು, ಎಲ್ಲಾ subject ಗಳಿಗೆ ಸಂಬಂಧಪಟ್ಟ teachers ಇರಬಹುದು, ಆ ತರಹ ಎಲ್ಲಾ ಸೌಲಭ್ಯಗಳನ್ನು ಕನ್ನಡ ಶಾಲೆಗಳಲ್ಲಿ ಓದತಕ್ಕಂಥ ಎಲ್ಲಾ ಮಕ್ಕಳಿಗೆ ಯಾವುದೇ ಕೊರತೆ ಇಲ್ಲದ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಅದು ಒಂದು ಮಾದರಿ ಕನ್ನಡ ಶಾಲೆ ಆಗಬೇಕೆನ್ನುವ ಉದ್ದೇಶವೇ ಹೊರತು ಅವರು ಇಂಗ್ಲೀಷ್‌ನವರ ತರಹ ಅಲ್ಲ.

ಶ್ರೀ ಬಸವರಾಜ ರಾಯರೆಡ್ಡಿ :- ಉದ್ದೇಶದ ಬಗ್ಗೆ ನಾನು ಹೇಳಲಿಲ್ಲ. Wording ಬಗ್ಗೆ ಹೇಳುತ್ತಿದ್ದೇನೆ. ಉದ್ದೇಶ ಒಳ್ಳೆಯದು. I am happy. ಅವರು ಏನು ಹೇಳುತ್ತಾರೆ, language ಅನ್ನು correct ಮಾಡಿ ಮತ್ತು English ಮಕ್ಕಳು ಬಹಳ superior ಕನ್ನಡ ಓದಿದವರು inferior ಎನ್ನುವ ಭಾವನೆ ಇಲ್ಲಿ ಬಂದಿದೆ. ಇದು ಒಳ್ಳೆಯದಲ್ಲವೆಂದು ನಾನು ಹೇಳಿರುವಂಥದ್ದು.. ನಾನು ಕನ್ನಡ ಮೀಡಿಯಂನಲ್ಲಿ ಓದಿರುವುದು. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಮಾನ್ಯ ರಾಮಲಿಂಗಾರೆಡ್ಡಿಯವರು ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಿ. ಮತ್ತೆ ಇನ್ನೊಂದು ಮಾತು ಹೇಳುತ್ತೇನೆ. ಇಂಥ ಒಳ್ಳೆಯ ಶಾಲೆ ತೆಗೆದಿದ್ದಾರೆ. ಪ್ರತಿಯೊಂದು ತಾಲ್ಲೂಕಿಗೂ ಇಂಥ ಒಂದು ಶಾಲೆ ಆಗಬೇಕು. ಅದರಲ್ಲೂ ವಿಶೇಷವಾಗಿ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಾದ ರಾಯಚೂರು ಮತ್ತು ಕೊಪ್ಪಳ literacy percent ನಲ್ಲಿ very low. ನೀವು ಬೆಂಗಳೂರಿಗೆ ಒಂದು ಕುವೆಂಪು ಸ್ಕೂಲ್, ಕೊಪ್ಪಳಕ್ಕೆ ಒಂದು ಕುವೆಂಪು ಸ್ಕೂಲ್ ಅಂದರೆ ಆಗುವುದಿಲ್ಲ. ದಯವಿಟ್ಟು ಕೊಪ್ಪಳದಲ್ಲೂ ಎಲ್ಲಾ ತಾಲ್ಲೂಕಿಗೆ ಕುವೆಂಪು ಸ್ಕೂಲ್ ಕೊಡಿ, ರಾಯಚೂರಿನಲ್ಲಿ ಕೊಡಿ ಮತ್ತು ಬೇರೆ ಜಿಲ್ಲೆಗಳಿಗೆ ಕುವೆಂಪು ಸ್ಕೂಲ್‌ಗಳನ್ನು ಕೊಡಬೇಕು. ಅದಕ್ಕೆ ನಾನು ಮಾನ್ಯ ಮಂತ್ರಿಗಳನ್ನು ಮತ್ತು ಶ್ರೀ ಸಿದ್ಧರಾಮಯ್ಯನವರನ್ನು ಒತ್ತಾಯ ಮಾಡುತ್ತೇನೆ. ಸಾಕಷ್ಟು ಹಣ ನಿಮ್ಮ ಹತ್ತಿರ ಸರ್ಕಾರದಲ್ಲಿದೆ. ಹೀಗಾಗಿ ಅದರ ಬಗ್ಗೆ ಯೋಚನೆ ಮಾಡಿ. ಇನ್ನೊಂದು, ಈ ವರ್ಷ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. 'Karnataka School Quality Assurance Organization ಇದು ಮಾಡಿರುವುದು ಈ ಶಾಲೆಗಳ ಒಂದು ಗುಣಮಟ್ಟ ಹೆಚ್ಚು ಮಾಡಲಿಕ್ಕೆ ಬಹಳ ಒಳ್ಳೆಯದಾಗಿದೆ. Concept of this organization, ಇದರ ಉದ್ದೇಶವನ್ನು ನಾನು ಓದುತ್ತೇನೆ. ಇದರಲ್ಲಿ ಶಿಕ್ಷಕರು ಸರಿಯಾಗಿ ಇಲ್ಲದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದರ ಬಗ್ಗೆ ಒಂದು ಮಾತೂ ಇಲ್ಲ. ಏಕೆ ಹೇಳುತ್ತೇನೆಂದರೆ, ಇವತ್ತಿನ transfer business ನೋಡಿದಾಗ ನಾಚಿಕೆ ಆಗುತ್ತದೆ. ಈ transfer ವಿಷಯದಲ್ಲಿ ಬಹುತೇಕ ಈ Education Minister ಗೆ ಇರುವಂಥ ಹಿಂಸೆ ಬೇರೆ ಯಾರಿಗೂ ಇರುವುದಿಲ್ಲ. MLA ಗಳು ಬೇರೆ ಬೇರೆ ರೀತಿಯ ಮುಖಾರಿಗಳಿಂದ ಅವರಿಗೆ ಟನ್‌ಗಟ್ಟಲೆ ಕಾಗದ ಪತ್ರಗಳು transfer ಮಾಡಿ

transfer ಮಾಡಿ ಎಂದು ಅವರಿಗೆ ಬರುತ್ತವೆ. ಎಲ್ಲಿಂದ ಮಾಡಬೇಕು? ಬಹಳ ಕಷ್ಟ ಇದೆ. ಅದಕ್ಕೆ ದಯಮಾಡಿ transfer policy ಮಾಡಿ.

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ರಾಯರೆಡ್ಡಿಯವರೆ, ಟನ್‌ಗಟ್ಟಲೆ ಏನು ಬರುತ್ತದೆ?

ಶ್ರೀ ಬಸವರಾಜ ರಾಯರೆಡ್ಡಿ :– ಟನ್‌ಗಟ್ಟಲೆ ಪೇಪರ್ಸ್, ಲೆಟರ್ಸ್ ಬರುತ್ತದೆ. ಮಾನ್ಯ ರಾಮಲಿಂಗಾರೆಡ್ಡಿಯವರಿಗೆ ಆ ಟೀಚರ್ಸ್ ಪಾಪ ಯಾರು ಹಣ ಕೊಡುತ್ತಾರೆ? ದಯವಿಟ್ಟು transfer policy ಮಾಡಿ. ಐದು ವರ್ಷಕ್ಕೊಂದು ಸಲ ಟೀಚರ್ಸ್ ಬೇರೆ ಬೇರೆ ಜಿಲ್ಲೆಗಳಿಗೆ ಟ್ರಾನ್ಸ್‌ಫರ್ ಆಗಲೇಬೇಕೆನ್ನುವುದನ್ನು ಮಾಡಿ. Tenure has to be fixed to the teachers. ಒಬ್ಬ ಟೀಚರ್ 5 ವರ್ಷ ಕೊಪ್ಪಳ ಜಿಲ್ಲೆ, 5 ವರ್ಷ ರಾಯಚೂರು ಜಿಲ್ಲೆ, 5 ವರ್ಷ ಬೆಳಗಾಂ ಜಿಲ್ಲೆ ಎಂದು ಮಾಡಬೇಕು. ಏನಾಗಿದೆ ಎಂದರೆ, ಟೀಚರ್ ಬರೀ ಅವರ ಊರಿನಲ್ಲಿಯೇ ಇರುತ್ತಾರೆ, ಅಲ್ಲಿ ತಾಲ್ಲೂಕಿನಲ್ಲಿರುತ್ತಾರೆ, ಅವರು ತಮ್ಮ ಜಮೀನು ನೋಡಿಕೊಳ್ಳುತ್ತಾರೆ, ಬಡ್ಡಿಗೆ ಸಾಲ ಕೊಡುತ್ತಾರೆ, ಇನ್ನೊಂದು ಊರಿನಲ್ಲಿ ರಾಜಕೀಯ ಮಾಡುತ್ತಾರೆ, ಅದು ನಮ್ಮ ವಿರುದ್ಧವಾಗಿ ಅಥವಾ ಪರವಾಗಿ ಮಾಡುತ್ತಾರೆಂದು ಇಟ್ಟುಕೊಳ್ಳೋಣ. ನಾವು ಅವರನ್ನು ಬಳಸಿಕೊಳ್ಳುತ್ತೇವೆ. ಹೀಗಾಗಿ ಐದು ವರ್ಷಕ್ಕೊಂದು ಸಾರಿ, compulsorily they have to go out of the Districts. ಸುಮ್ಮನೆ transfer ಆಗಿ ಹೋಗುತ್ತಿರಬೇಕು. ನಿಮ್ಮಿಂದ ಜಿ.ಓ.ಕ್ಕಾಗಿ ಅವರು ಕಾಯಬಾರದು. 5 ವರ್ಷ ಆಯಿತೆಂದರೆ ಅವನು ಬೇರೆ ಕಡೆಗೆ ಹೋಗುತ್ತಿರಬೇಕು. ಉದಾಹರಣೆಗೆ ಕೊಪ್ಪಳ ಜಿಲ್ಲೆಯಲ್ಲಿ 5 ವರ್ಷ ಕೆಲಸ ಮಾಡಿದರೆ ಅವರನ್ನು ಗದಗ್‌ಗೆ ಟ್ರಾನ್ಸ್‌ಫರ್ ಮಾಡಿ. ಅಲ್ಲಿ ಗದಗ್ DDPI ಹತ್ತಿರ report ಮಾಡಿಕೊಳ್ಳಬೇಕು ಮತ್ತು ಹಾಗೆಯೇ ಎಲ್ಲಿ ಎಂದು posting ತೆಗೆದುಕೊಂಡು ಹೋಗುತ್ತಿರಬೇಕು. ಕಡ್ಡಾಯವಾಗಿ Primary School ಮತ್ತು upto ಪ್ರೌಢ ಶಾಲೆ ಶಿಕ್ಷಕರಿಗೆ ಇದನ್ನು ಮಾಡಿದರೆ ಉತ್ತಮವಾಗುತ್ತದೆ. ಈ ರೀತಿ ಮಾಡಿದರೆ ನಿಮಗೂ ಮತ್ತು ನಿಮ್ಮ ಅಧಿಕಾರಿಗಳಿಗೆ 3 ತಿಂಗಳು ನೆಮ್ಮದಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆ. ಆ ವಿಚಾರದಲ್ಲಿ ತಾವು transfer policy ಯನ್ನು ಮಾಡಿ ಎಂದು ನಾನು ಒತ್ತಾಯ ಮೂಲಕ ಹೇಳುತ್ತೇನೆ. ಇನ್ನೊಂದು ಅಂಶವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಏಕೆಂದರೆ ತಾವು ಕೊಟ್ಟ ಟೈಮ್ ಮುಗಿದಿದೆ.

ಶ್ರೀ ಎಸ್.ಎಸ್. ಪಾಟೀಲ್ :– ಶ್ರೀ ರಾಯರೆಡ್ಡಿಯವರೆ, ನೀವು ಒಂದು ವಿಷಯವನ್ನು ಹೇಳುತ್ತಿದ್ದಾಗ ಮಾನ್ಯ ಪುಟ್ಟೇಗೌಡರು ಇಲ್ಲಿ ಇರಲಿಲ್ಲ. ಇದು ಟೀಚರ್ಸ್‌ಗೆ ಮಾತ್ರ ಆಗಬೇಕೇ ಅಥವಾ ಎಲ್ಲಾ ನೌಕರರಿಗೂ ಇದು ಆಗಬೇಕೇ? ಬರೀ ಶಿಕ್ಷಕರಿಗೆ ಅಲ್ಲ,

including Secretariat ನಲ್ಲಿ ಇದ್ದವರು ಸೇರಿದಂತೆ ಎಲ್ಲಾ ನೌಕರರಿಗೂ ಇದು ಆಗಬೇಕು. Secretariat ನಲ್ಲಿ ಇದ್ದವರಿಗೂ ಕೂಡ transfer ಮಾಡಬೇಕೆಂದು ಅದಕ್ಕೆ amendment ತರಬೇಕು. Transfer policy ಮಾಡಿ, ಇದು ಎಲ್ಲರಿಗೂ ಅನ್ವಯಿಸುವಂತೆ ಆಗಬೇಕು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ :– ಮಾಡಿ. ಯಾವ MLA ಗಳೂ ಲೆಟರ್ ಕೊಡಬಾರದು ಎಂದು ಮಾಡಿ. ಇಲ್ಲದಿದ್ದರೆ ಏನಿದು ದಂಧೆ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ :– ಮಾನ್ಯ ಉಪಾಧ್ಯಕ್ಷರೆ, ಶ್ರೀ ಬಿ.ಆರ್. ಪಾಟೀಲರ್, ತಾವು ಹೇಳುತ್ತಿದ್ದೀರಲ್ಲಾ. ಇಲ್ಲಿ ಎಷ್ಟು ವಿಪರ್ಯಾಸ ಇದೆ ಎಂದರೆ ಪ್ರೌಢ ಶಿಕ್ಷಣ ನೋಡಿ....

ಶ್ರೀ ಗೋವಿಂದಪ್ಪ ಎಂ. ಕಾರಜೋಳ :– ಮಾನ್ಯ ಉಪಾಧ್ಯಕ್ಷರೆ, ಈ ಶಿಕ್ಷಕರ ವರ್ಗಾವಣೆ ಮತ್ತು ಇನ್ನಿತರ ಕೆಳದರ್ಜೆಯ ನೌಕರರನ್ನು ವರ್ಗಾವಣೆ ಮಾಡುವುದಕ್ಕಿಂತಲೂ ಪೂರ್ವದಲ್ಲಿ ಈ ಸದನದಲ್ಲಿ ಈ ಸೆಕ್ರೆಟರಿಯೇಟ್‌ನಲ್ಲಿ ಇರತಕ್ಕಂಥರೆ ವರ್ಗಾವಣೆಗೆ ಮೊದಲು ಒಂದು ನೀತಿ ಮಾಡಿ. ಸೆಕ್ರೆಟರಿಯೇಟ್‌ನಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಅವರು ಬಂದು ಕೆಲಸಕ್ಕೆ join ಆದರೆಂದರೆ 58 ವರ್ಷವಾಗಿ ಅವರು retirement ಆದಮೇಲೆ ಅವರು ಮನೆಗೆ ಹೋಗುವುದು. ಆದ್ದರಿಂದ ಇವರ transfer ಗೆ ಏನಾದರೂ ಒಂದು policy ಮಾಡುವುದಕ್ಕೆ ಸರ್ಕಾರ ಸಿದ್ಧವಿದೆಯೇ? ಈ ಸದನ ಸಿದ್ಧವಿದೆಯೇ?

ಶ್ರೀ ಬಸವರಾಜ ರಾಯರೆಡ್ಡಿ :– ಪ್ರೌಢ ಶಿಕ್ಷಣದ ಬಗ್ಗೆ ನಾನು ಹೇಳುತ್ತಿದ್ದೇನೆ. ಈ ವರ್ಷ ನಮಗೆ 115 ಪ್ರೌಢ ಶಾಲೆಗಳನ್ನು ಈ ವರ್ಷದ ಆಯವ್ಯಯದಲ್ಲಿ ನಮ್ಮ ಉಪ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಮತ್ತೆ ಶಿಕ್ಷಣ ಮಂತ್ರಿಗಳೂ ಕೂಡ ಬೇರೆ ಬೇರೆ ಸ್ಥಳಗಳನ್ನು ಗುರುತಿಸಿ ಕೊಟ್ಟಿದ್ದಾರೆ. ನಾನು ಅದಕ್ಕೆ ಅಭಿನಂದಿಸುತ್ತೇನೆ. ಇವತ್ತು 115 ಪ್ರೌಢ ಶಾಲೆಗಳು ಸಾಕಾಗುವುದಿಲ್ಲ. ಇವತ್ತು ಜನಸಂಖ್ಯೆಯ ಪ್ರಮಾಣ ಸಾಕಷ್ಟು ಬೆಳೆದಿದೆ. ವಿದ್ಯಾರ್ಥಿಗಳು ಸಾಕಷ್ಟು ಆಗಿದ್ದಾರೆ. ಆ ಆಧಾರದ ಮೇಲೆ ನೋಡಿದರೆ ಕನಿಷ್ಟ ಪಕ್ಷ 500 ಹೊಸ ಪ್ರೌಢ ಶಾಲೆಗಳನ್ನು ಈ ವರ್ಷ ಕೊಡಲೇಬೇಕಾಗಿತ್ತು. ಆದರೆ ಹಣಕಾಸಿನ ಮುಗ್ಗಟ್ಟಿನಿಂದ ತೊಂದರೆ ಇದೆಯೆಂದು ಹೇಳಿದ್ದೀರಿ. ಮಾನ್ಯ Finance Minister ಇಲ್ಲಿಯೇ ಇದ್ದಾರೆ. ಈ VAT introduction ಆದಮೇಲೆ ನಮಗೆ ಹಣಕಾಸು ಕಡಿಮೆಯಾಗುತ್ತಿಲ್ಲವೆಂದು ಅವರು ಬರುವುದಕ್ಕೆ ಮುಂಚೆ ಆಗಲೇ ಹೇಳುತ್ತಿದ್ದೆ. ಈ ಸಾರಿ

ನನಗೆ ತಿಳಿದ ಮಟ್ಟಿಗೆ ಮೂರುವರೆ ಸಾವಿರ ಕೋಟಿ ರೂ.ಗಳಿಗೆ ತಲುಪುತ್ತಿದ್ದೇವೆ. Rs. 3500 crores sales tax for the year 2005-06. ಹೀಗಾಗಿ ಸುಮಾರು 600 ರಿಂದ 700 ಕೋಟಿ ರೂ.ಗಳ target ಗಿಂತ ಹೆಚ್ಚು ಹಣ ನಿಮಗೆ ಬರುತ್ತಿದೆ. ಅದಕ್ಕೆ ತಾವು ಈ ಶಿಕ್ಷಣ, ಕೃಷಿ, ನೀರಾವರಿ ಮತ್ತು ವಿದ್ಯುತ್ ವಲಯಗಳಿಗೆ ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟರೆ ಅನುಕೂಲವಾಗುತ್ತದೆ. ಈ ದಿಶೆಯಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ಮಾನ್ಯ ಹಣಕಾಸು ಮಂತ್ರಿಗಳ ಜೊತೆ ಮಾತನಾಡುತ್ತಾರೆಂದು ನಾನು ಭಾವಿಸಿದ್ದೇನೆ. ನಮ್ಮ ಪ್ರೌಢ ಶಾಲೆಗಳಲ್ಲಿ education system ಹೇಗಿದೆಯೆಂದರೆ, ಅನುದಾನಿತ ಶಾಲೆಗಳಿಗೆ teachers appoint ಮಾಡಲಿಕ್ಕೆ permission ಕೊಡುತ್ತೇವೆ. ಆದರೆ ನಮ್ಮವರಿಗೆ ಕೊಡುವುದಿಲ್ಲ. ಅದಕ್ಕೆ student ratio ಹೇಗಿದೆ ಎನ್ನುವುದನ್ನು ಹೇಳುತ್ತೇನೆ. 2004–05ನೇ ಸಾಲಿನಲ್ಲಿ ನಮ್ಮ ರಾಜ್ಯದಲ್ಲಿ ಒಟ್ಟು 3209 ಶಾಲೆಗಳಿವೆ, students 9 ಲಕ್ಷದ 96 ಸಾವಿರ, ಟೀಚರ್ಸ್ ಕೇವಲ 25 ಸಾವಿರದ 797, ಇದು ಸರ್ಕಾರಿ school ಗಳಿಗೆ ಸಂಬಂಧಪಟ್ಟಂತೆ. ಇನ್ನು grant-in-aid school ಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, 2621 ಶಾಲೆಗಳು, 8 ಲಕ್ಷ ಮಕ್ಕಳು, 3362 ಶಾಲೆಗಳು, 22 ಸಾವಿರ ಟೀಚರ್‌ಗಳು. ಈ ಅನುಪಾತವನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಈ ಅನುಪಾತದಲ್ಲಿ ಗ್ರಾಂಟ್ ಇಲ್ಲದ ಸ್ಕೂಲ್‌ಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಅವರು ಎಷ್ಟಾದರೂ ಮಾಡಿಕೊಳ್ಳಲಿ. ಇಲ್ಲಿ 9 ಲಕ್ಷ ಮಕ್ಕಳಿಗೆ 3200 ಸ್ಕೂಲ್‌ಗಳಿದ್ದು ಕೇವಲ 25791 ಟೀಚರ್ಸ್ ಇದ್ದಾರೆ. grant-in-aid-school ನಲ್ಲಿ 8 ಲಕ್ಷ ಮಕ್ಕಳಿಗೆ 28 ಸಾವಿರ ಟೀಚರ್ಸ್ ಇದ್ದಾರೆ. ಅಂದರೆ 3 ರಿಂದ 4 ಸಾವಿರ ಕಡಿಮೆಯಾಯಿತು. ಈ ratio ಪ್ರಕಾರ ನೋಡಿದರೆ ಸುಮಾರು 5 ಸಾವಿರ ಟೀಚರ್ಸ್ ಕಡಿಮೆಯಾಯಿತು. ಏಕೆ ಈ ರೀತಿ ಅನುಪಾತ ಇದೆ ಎನ್ನುವುದನ್ನು ದಯವಿಟ್ಟು ಯೋಚನೆ ಮಾಡಿ. Grant-in-aid school ಗಳಿಗೆ ಏಕೆ ನೀವು ಹೆಚ್ಚು ಟೀಚರ್ಸ್ ಕೊಟ್ಟಿದ್ದೀರಿ? ಸರ್ಕಾರಿ ಶಾಲೆಗಳಿಗೆ ಏಕೆ ಕಡಿಮೆ ಟೀಚರ್ಸ್ ಕೊಟ್ಟಿದ್ದೀರಿ? ಈ ಬಗ್ಗೆ ತಾವು ಸಂಪೂರ್ಣವಾಗಿ ವಿಚಾರಣೆ ಮಾಡಿ ಈ ಅನುಪಾತವನ್ನು ಸರಿಮಾಡಲಿಕ್ಕೆ ತಾವು ಪ್ರಯತ್ನ ಮಾಡುತ್ತೀರೆಂದು ಹೇಳಿ, ಒಟ್ಟಾರೆ ಶಿಕ್ಷಣ ವಲಯದಲ್ಲಿ ನಮ್ಮ ಮಾನ್ಯ ರಾಮಲಿಂಗಾರೆಡ್ಡಿಯವರು ಹೆಚ್ಚು ಕಾಳಜಿಯನ್ನು ವಹಿಸಿ ಕೆಲಸ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಒಳ್ಳೆಯ ಶಿಕ್ಷಣ ಮಟ್ಟ ಆಗಬೇಕಾಗಿದ್ದರೆ ಶಿಕ್ಷಕರ ಬಗ್ಗೆ ಅವರ ಗುಣಮಟ್ಟದ ಬಗ್ಗೆ ನಿಯಂತ್ರಣ ಆಗಬೇಕು. ನೀವು ಏನು ಹೊಸ organization ಮಾಡಿದ್ದೀರಿ ಅದರಲ್ಲಿ ಶಿಕ್ಷಕರಿಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಒಂದು word ಇಲ್ಲ. ಹೀಗಾಗಿ ಒಳ್ಳೆಯ ಗುಣಮಟ್ಟದ ಶಾಲೆಗಳು ಆಗಬೇಕಾಗಿದ್ದರೆ ತಾವು ಈ ಎಲ್ಲಾ ವಿಚಾರಗಳನ್ನು ಗಮನಿಸಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕೆಂದು ನಾನು ಹೇಳ

ಬಯಸುತ್ತೇನೆ. ಇನ್ನು ಈ ಬಿಸಿಯೂಟದ ಕಾರ್ಯಕ್ರಮ ಇದೊಂದು ಒಳ್ಳೆಯ ಕಾರ್ಯಕ್ರಮವಾಗಿದೆ. ಆದರೆ ಇದರಲ್ಲಿ ಕೆಲವು ನ್ಯೂನತೆಗಳಿರಬಹುದು. ಆದರೆ, ಅದನ್ನು 1 ರಿಂದ 7ನೇ ತರಗತಿಯವರೆಗೆ ಮಾಡಿದ್ದೀರಿ. ಎಸ್‌ಎಸ್‌ಎಲ್‌ಸಿವರೆಗೆ ಮಾಡುತ್ತೇವೆಂದು ಹೇಳಿ ಈ Common Minimum Programme ನಲ್ಲಿ ಹೇಳಿದ್ದೀರಿ. ಆದರೆ, ಇನ್ನೂವರೆಗೆ ಆಗಲಿಲ್ಲ. ಕೊನೇಪಕ್ಷ, ಮುಂದಿನ ವರ್ಷದಿಂದಾದರೂ ಕೂಡ ಎಸ್‌ಎಸ್‌ಎಲ್‌ಸಿವರೆಗೆ ಬಿಸಿಯೂಟ ಕಾರ್ಯಕ್ರಮದ ವಿಸ್ತರಣೆಯನ್ನು ಕೊಟ್ಟ ಮಾತಿನಂತೆ ನೀವು ನಡೆದುಕೊಳ್ಳುತ್ತೀರಿ ಎಂದು ಹೇಳಿ ನಾನು ಬಯಸಿ, ಇವತ್ತು ಶಿಕ್ಷಣ, ಕೃಷಿ ಮತ್ತು ಇನ್ನಿತರೆ ಇಲಾಖೆಗಳ ಮೇಲೆ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ಕೆ.ಎಸ್. ಈಶ್ವರಪ್ಪ :- ಸನ್ಮಾನ್ಯ ಶಿಕ್ಷಣ ಸಚಿವರಿಗೆ ನಾನು ಶಿವಮೊಗ್ಗಕ್ಕೆ ಬಂದಾಗಲೂ ಪ್ರಸ್ತಾಪಿಸಿದ್ದೆ. ಇವತ್ತು ಇಡೀ ರಾಜ್ಯದಲ್ಲಿ ನಿಜಕ್ಕೂ ಕೂಡ ಅನೇಕ ಕೊಠಡಿಗಳನ್ನು ಕೊಡುತ್ತಿದ್ದಾರೆ. ನಾನು ಮೆಚ್ಚುತ್ತಿದ್ದೇನೆ. ಆದರೆ, ಅನೇಕ ಶಾಲೆಗಳಲ್ಲಿ ರಿಪೇರಿಗೆ ಹಣವಿಲ್ಲ. ಜಿಲ್ಲಾ ಪಂಚಾಯತ್‌ನವರನ್ನು ಕೇಳಿದರೂ ಕೂಡ ಅವರು ಇಲ್ಲವೆಂದು ಹೇಳುತ್ತಾರೆ. ನಗರಸಭೆ ಕೇಳಿದರೆ ಇಲ್ಲವೆಂದು ಹೇಳುತ್ತಾರೆ. ಹಾಗಾಗಿ, ಸನ್ಮಾನ್ಯ ಶಿಕ್ಷಣ ಸಚಿವರಿಗೆ, ಇಡೀ ರಾಜ್ಯದಲ್ಲಿ ಈ ರೀತಿ ಸ್ಕೂಲ್ ರಿಪೇರಿಗೆ ಏನಾದರೂ ವಿಶೇಷವಾದ ಅನುದಾನವನ್ನು ಕೊಡುವುದಕ್ಕೆ ಯೋಜನೆ ಇದೆಯೇ? ಅದನ್ನು ಯಾರ ಮುಖಾಂತರ ಕೊಡುತ್ತೀರಿ ಎಂದು ಸ್ಪಷ್ಟ ಮಾಡಿದರೆ.....

ಶ್ರೀ ವಾಟಾಳ್ ನಾಗರಾಜ್ :- ಇಲ್ಲಿ ಅನೇಕ ಶಾಲೆಗಳಲ್ಲಿ ಹೆಂಚು ಇಲ್ಲ, ಗೋಡೆ ಬಿರುಕು ಬಿಟ್ಟಿದೆ, ಕುಡಿಯುವ ನೀರಿಲ್ಲ, ಶೌಚಾಲಯ ಇಲ್ಲ. ಇದು ಪರಿಸ್ಥಿತಿ. ಶಾಲೆಗಳಲ್ಲಿರುವ ಪರಿಸ್ಥಿತಿ. ಗೌಪ್ಯವಾಗಿ ನೋಡಬೇಕು ಕೆಲವು ಹಳ್ಳಿಗಳಲ್ಲಿ ನೋಡಿದರೆ ನಿಮಗೆ ಗೊತ್ತಾಗುತ್ತದೆ. ರಿಪೇರಿ ಬಗ್ಗೆ ಸಮರೋಪಾದಿಯಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ರಿಪೇರಿ ಬಗ್ಗೆ ಅದನ್ನೇ ಯೋಜನೆ ಎಂದು ಮಾಡಿದರೆ ನಿಜಕ್ಕೂ ಅನುಕೂಲವಾಗುತ್ತದೆ. ಕನಿಷ್ಠ ರಿಪೇರಿ ಮಾಡಿ. ಹೊಸ ಕಟ್ಟಡಗಳು ಆಮೇಲೆ ನೋಡಿದರೆ ಆಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ :- ಸನ್ಮಾನ್ಯ ಶಿಕ್ಷಣ ಸಚಿವರು ಇದರ ಬಗ್ಗೆ ಸ್ಪಷ್ಟ ಮಾಡಿದರೆ ಒಳ್ಳೆಯದು ಏಕೆಂದರೆ ಇಡೀ ರಾಜ್ಯದಲ್ಲಿ ಮಳೆಗಾಲ. ಅನೇಕ ಕಡೆ ಶಾಲಾ ಕಟ್ಟಡಗಳು ಬಿದ್ದು ಹೋಗುತ್ತಿದೆ. ಶಾಲೆ ನಡೆಯುತ್ತಿರುವ ಸಂದರ್ಭದಲ್ಲಿ ಬಿದ್ದರೆ ವಿದ್ಯಾರ್ಥಿಗಳು ಸತ್ತೇ ಹೋಗುತ್ತಾರೆ. ಮೊನ್ನೆ ನಮ್ಮ ಶಿವಮೊಗ್ಗದಲ್ಲಿ ಆ ಛಾವಣಿ ಬಿದ್ದು ಸರ್ಕಾರಿ

ಶಾಲೆಯ 4 ಜನ ಮಕ್ಕಳನ್ನು ಆಸ್ಪತ್ರೆಗೆ ಸೇರಿಸಿದ್ದರು. ಪುಣ್ಯಕ್ಕೆ ಸಾಯಲಿಲ್ಲ. ಅದಕ್ಕೋಸ್ಕರ, ಕಡು ಬಡವರ ಮಕ್ಕಳು ಸರ್ಕಾರಿ ಶಾಲೆಗೆ ಹೋಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ಸರ್ಕಾರಿ ಶಾಲೆಗಳು ನರಕ ಇದ್ದಹಾಗೆ. ನರಕವೇ ಅದು.

ಶ್ರೀ ವೈಜನಾಥ್ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ....

ಉಪಾಧ್ಯಕ್ಷರು :- ವೈಜನಾಥ ಪಾಟೀಲರೆ, ಆಮೇಲೆ ಕರೆಯುತ್ತೇನೆ. ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ :- ಮಾನ್ಯ ಸಚಿವರು ಉತ್ತರ ಕೊಟ್ಟರೆ.... ಒಳ್ಳೆಯದು. ಇದರ ಬಗ್ಗೆ ಇಡೀ ರಾಜ್ಯದ ಜನ ನೋಡುತ್ತಿದ್ದಾರೆ.

ಉಪಾಧ್ಯಕ್ಷರು :- ಉತ್ತರ ಕೊಡುತ್ತಾರೆ. ಮನೋಹರ್ ಕಿನೇಕರ್‌ರವರೆ, 5 ನಿಮಿಷದಲ್ಲಿ ನೀವು ಮುಗಿಸಬೇಕು.

ಶ್ರೀ ವೈಜನಾಥ ಪಾಟೀಲ್ :- ನಮಗೆ ಅವಕಾಶ ಕೊಡುತ್ತೀರಾ?

ಉಪಾಧ್ಯಕ್ಷರು :- ಕೊಡುತ್ತೇನೆ. ಕಿನೇಕರ್ ಅವರೆ, ಮಾತನಾಡಿ....

Sri. Manohar Kallappa Kinekar (Uchagaon) :- Mr. Deputy Speaker, while discussing on demand for Agriculture, so many senior leaders have focused on the reality of the Department. While 70% of population is depending on this agriculture Hon'ble Member Mr.Hegde has told this House that only 6.38% provision has been made in our Budget. By this only we can judge how much interest the Government has taken to improve the living conditions of the farmers. Day by day, the financial position of the farmers is going down. What is the real cause for this? Actually, Mr.Hegde has suggested introducing crop pattern. What is happening is, if any crop gets more rates in the market, all will go for the same crop. There will not be any control on the production. The result being, the rates will fall. We had observed this situation regarding sugar cane. Ten years back sugar cane crop has yielded like anything. But now for the last 2-3 years so many sugar factories have closed down, because of shortage of sugar cane.

Therefore, the Government should think of controlling the market by introducing crop pattern.

Secondly, we are giving so many subsidies to the farmers. But still farmers are in debts. In some areas, some farmers are committing suicide. This is because, they could not get proper rate for their yields. Now the system of marketing is with Commission Agents. If any farmer takes his produce in the market, the Commission Agents fix the price. Nobody will think about the cost of production of one quintal of Potato or One quintal of Paddy. On the basis of the availability of particular produce in the market, the rate will be fixed by the Commission Agents and therefore farmers will be at loss. This is the main cause for the plight of farmers today. So we have to think about the cost incurred by the farmers to grow a particular crop and on that basis, can improve their financial position. The Agriculture Department should study the demand, Cost of production etc. though Raitha Kendras. The farmers cannot survive only by giving subsidies to the tractors, power trailers, pesticides and fertilizers. The basic need is to ensure that correct rate is given to the farmers for their produce. Therefore, I request the Government to give reasonable rates to the farmers for their produce eleminating Commission Agents.

Thirdly, we have not thought about the agricultural labourers. In so many villages, agricultural labourers are there. Their daily wages are not fixed. They are getting different daily wages in every area. So, what I suggest to these Raita Kendras is, they should register these agricultural labourers so that we will be able to know how many labourers are there in our State, who depend solely on agriculture and we should also include small and marginal farmers. In service, after retirement, the Govt employees get pension. But these labourers are not getting anything and after 60 years, it is difficult for them to work in the field.

Therefore, like Yashawini, the Government should implement some schemes to give pension to such labourers who have crossed 60 years. There may be lady labourers or gents labourers, but they are also farmers. The main intension of the Government is to help the farmers or agricultural labourers. Therefore, the Government should consider my suggestion to implement a pension scheme for them.

Regarding education also, I want to make few observations. We are giving mid day meals. We are giving free textbooks to the children studying in the Government Schools. We are giving uniform to the children in Government Schools. But at present, what is the quality of the education? Myself and BEO of Belgaum Taluk visited some Government Primary Schools, Kannada and Marathi Medium Schools some 15 days back. When we entered the 7th standard class room all students got and wished us 'Good Morning Sir'. But most of the students in the class room are not knowing the spelling of 'Good Morning'. This is the situation prevailing there. I asked 7th standard student - what is the multiplication 7 x 8 ? Most of the students did not know this simple multiplication. I just asked questions on Social Studies - who is the Prime Minister of India? who is the Chief Minister of Karnataka? I was shocked that majority of the students did not know, who is the Prime Minister and Chief Minister of our State. So, if this is the quality of our education, how can we improve the general knowledge of the students who are the pillars of India? Because of this poor quality and low standard of education, many parents are sending their students to private institutions. Presently, I think the Government is given permission to start unaided schools: but in these private institutions, the teachers are getting less salary than the Government Schools. But still, if we compare the quality of teaching in these private institutions, it is better than the Government Schools. They are

collecting donations to get admission to 1st Standard and Lower K.G. also. This is the situation in Marathi Medium and Kannada Medium private institutions also. Therefore, we should improve the quality of education and teaching by having some control on teachers also. Now the teachers in Government Schools are getting good salaries. If we compare their salaries 10-15 years back, now, teachers are getting maximum benefits. So, while giving all benefits to the teachers, we have also to think about the students. Therefore, I request Mr.Ramalinga Reddy, our Education Minister, who is doing very well regarding buildings, construction of latrines etc. to do something to improve the standard of education in Government Schools. All of us will support him to improve the quality also and that way, we will have to think of providing quality education to the rural students.

In Belgaum District, the students studying in English, Kannada and Marathi Medium in Private institutions are not getting text books. The Hon'ble Minister has replied to my question that Kannada and English Medium books are going to be printed. But what about the Marathi text books? you have not mentioned about it in the answer. Sir, Marathi students are also studying in Karnataka. Therefore, you have to think about them also. You have to make arrangements to supply books for these Marathi, Kannada and English Medium students studying In private institutions. because that is also the responsibility of the Government. In my Constituency, there are only two Government High Schools. There are nearly 67 villages in my constituency and nearly 17 wards of the Belgaum City Corporation come under my constituency. There are about 50-60 High Schools are being run by the private institutions only in my Constituency and most of them i.e., 30-35 High Schools are receiving aid from the Government. But from 1987, the Government has stopped aid to these

schools in rural areas. It is very difficult to run without aid. You might have given the permission on the conditions that it is permanently unaided. But, can it be possible for them to take fee of Rs. 200-250 from the rural students? No. That is not possible. Therefore, to help the rural students? No. That is not possible. Therefore, to help the rural students, you should given aid to these private schools also. Now, the retired teachers are appointed on payment of Rs.100/- daily. Likewise, you have to think of making some arrangement. In my Constituency nearly 20-25 High Schools will be closed if you don't come to their rescue and if that happens, the Government will have to face many problems as the Government cannot start Government Schools immediately in those villages. Some High School buildings are built on donations. Some High Schools are having grounds also. Therefore, we should help them in giving education to our children. I request the Government to give aid to those High Schools functioning in rural areas.

I wanted to speak on many problems that we are facing in the Education Department. But Adhyaksha Saheb has given me less time to speak on these demands. Therefore, I have spoken about some important points. I hope the Government will take action to redress the problems that I had mentioned in my speech. With this, I thank the Chair for giving me an opportunity to speak and conclude.

ಉಪಾಧ್ಯಕ್ಷರು :- ಈಗ ಚರ್ಚೆ ಒಂದು ಗಂಟೆಗೆ ಮುಗಿಯಬೇಕಾಗಿತ್ತು, ಅಧ್ಯಕ್ಷರು ಒಂದು ಗಂಟೆಯೊಳಗೆ ಚರ್ಚೆ ಮುಗಿಸಬೇಕೆಂದು ಹೇಳಿದ್ದಾರೆ.

ಶ್ರೀ ಎಂ.ಟಿ. ಕೃಷ್ಣಪ್ಪ :- ಬೇರೆಯವರಿಗೆಲ್ಲಾ ಅವಕಾಶ ಕೊಡುತ್ತೀರಿ. ನಮಗ್ಯಾಕೆ ಐದ್ಯೆದು ನಿಮಿಷ ಕೊಡುವುದಿಲ್ಲ? ನಮಗೆ ಅವಕಾಶ ಕೊಡಿ.

ಶ್ರೀ ಶಿವಾನಂದ ಎಸ್ ಪಾಟೀಲ್ :- ನಮಗೂ ಸ್ವಲ್ಪ ಅವಕಾಶ ಕೊಡಿ.

ಶ್ರೀ ವೈಜನಾಥ್ ಪಾಟೀಲ್ :- ಕೆಲವರಿಗೆ ಒಂದೊಂದು ತಾಸು ಕೊಡುತ್ತೀರಿ. ನಮಗೆ ಸ್ವಲ್ಪ ಅವಕಾಶ ಕೊಡಿ.

ಉಪಾಧ್ಯಕ್ಷರು :- ಈಗ ಆಯಿತು ಒಂದು ಗಂಟೆ ಬೇಡ ಒಂದೂವರೆ ಗಂಟೆಯ ಮೇಲೆ ಒಂದ್ನಿಮಿಷವಾದರೂ ಯಾರಾದರೂ ಕ್ರಾಸ್ ಮಾಡಿದರೆ ನಾನು ಕ್ಲೋಸ್ ಮಾಡುತ್ತೇನೆ. ಅದಕ್ಕೆ ಬದ್ಧವಾಗಿ ಮಾತನಾಡುವುದಾದರೆ ಮಾತನಾಡಿ. ಮಾನ್ಯ ವೈಜನಾಥ್ ಪಾಟೀಲರೇ, ತಾವು ಮಾತನಾಡಿ, ಅವರು ಬಹಳ ಹೊತ್ತಿನಿಂದ ಮಾತನಾಡಬೇಕೆಂದು ಇಷ್ಟಪಟ್ಟಿದ್ದಾರೆ. ಐದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) :- ಮಾನ್ಯ ಅಧ್ಯಕ್ಷರೆ, ಎಷ್ಟು ಹೊತ್ತು ಆಗುತ್ತದೆ ನೋಡೋಣ ಬೇರೆಯವರಿಗೆ ಒಂದೊಂದು ತಾಸು ಕೊಟ್ಟು ನನಗ್ಯಾಕೆ ಹೀಗೆ ಮಾಡುತ್ತೀರಿ? ದೇಶ ಸ್ವಾತಂತ್ರ್ಯ ಆದಾಗ ದೇಶದ ಜನಸಂಖ್ಯೆ 35 ರಿಂದ 40 ಕೋಟಿಯ ಒಳಗೆ ಇತ್ತು. ಆಗ ಜನಸಂಖ್ಯೆ 35 ರಿಂದ 40 ಕೋಟಿ ಇದ್ದಾಗ ನಾವು ಕಾಳು, ಗೋಧಿ, ಮತ್ತೊಂದು ಹೊರ ದೇಶಗಳಿಂದ ತರಿಸಬೇಕಾಗಿತ್ತು. ಎಷ್ಟೋ ಜನ ಉಪವಾಸ ಇರುತ್ತಿದ್ದರು. ಆದರೆ ಇವತ್ತು ನಮ್ಮ ದೇಶದ ಜನಸಂಖ್ಯೆ ನೂರು ಕೋಟಿಗಿಂತಲೂ ಹೆಚ್ಚಾಗಿದೆ. ನಮ್ಮ ದೇಶದಲ್ಲಿ ರೈತರು ಸಾಕಷ್ಟು ಫೂಡ್‌ಗ್ರೇನ್ಸ್‌ನ್ನು ತಯಾರು ಮಾಡಿದ್ದಾರೆ. ಆದರೆ ದುರ್ದೈವದಿಂದಾಗಿ ಇವತ್ತು ಅವರು ಬಹಳ ಕಷ್ಟಕ್ಕೀಡಾಗಿದ್ದಾರೆ. ಇವತ್ತು ನಮ್ಮ ಪದ್ಧತಿಯಲ್ಲಿ ಎರಡು ನಮೂನೆ ಪ್ರೊಡಕ್ಷನ್ ಇರುತ್ತವೆ. ಒಂದು ಇಂಡಸ್ಟ್ರಿಯಲ್ ಪ್ರೊಡಕ್ಷನ್, ಮತ್ತೊಂದು ಅಗ್ರಿಕಲ್ಚರ್ ಪ್ರೊಡಕ್ಷನ್. ಇಂಡಸ್ಟ್ರಿಯಲ್ ಪ್ರೊಡಕ್ಷನ್‌ಗೆ ಏನಾಗುತ್ತದೆ ಎಂದರೆ ಅದಕ್ಕೆ ರೇಟ್ ಫಿಕ್ಸ್ ಮಾಡುವವರು ಆ ಇಂಡಸ್ಟ್ರಿಯಲಿಸ್ಟ್, ಮನೋಪಾಲಿಸ್ಟ್ ಅವರೇ ಮಾಡುತ್ತಾರೆ. ಇದಕ್ಕೆ ಎಷ್ಟು ಖರ್ಚು ಆಯಿತು ಎಂದು ಲೆಕ್ಕ ಹಾಕಿ ಅದರ ಮೇಲೆ ಬೆಲೆ ಹಾಕಿ ಬಜಾರ್‌ಗೆ ಕಳುಹಿಸುತ್ತಾರೆ; ನಾವು ಹೋಗಿ ಪರ್ಚೇಸ್ ಮಾಡುತ್ತೇವೆ. ಆದರೆ ಅಗ್ರಿಕಲ್ಚರ್ ಪ್ರೊಡಕ್ಷನ್‌ದು ಬೇರೆಯಾಗುತ್ತದೆ. ಅದರಲ್ಲಿ ಇಷ್ಟು ಎಂದು ಗ್ಯಾರಂಟಿ ಇಲ್ಲ. ರೈತ ಫರ್ಟಿಲೈಸರ್, ಇನ್‌ವೆಸ್ಟಿಸೈಡ್ಸ್, ಕೂಲಿ, ಮತ್ತಿತರಗಳಿಗೆ ಏನು ಖರ್ಚು ಮಾಡುತ್ತಾನೆ, ಅಷ್ಟು ಖರ್ಚು ಮಾಡಿದರೂ ಕೂಡ ನಂತರದಲ್ಲಿ ಅದಕ್ಕೆ ಇಂತಿಷ್ಟು ಖರ್ಚು ಆಗಿದೆ ಕಾಸ್ಟ್ ಆಫ್ ಕಲ್ಟಿವೇಷನ್ ಇಷ್ಟು ಆಗಿದೆ, ಕಾಸ್ಟ್ ಆಫ್ ಪ್ರೊಡಕ್ಷನ್ ಇಷ್ಟು ಆಗಿದೆ, ಎಂದು ಅದರ ಮೇಲೆ ನಿಗದಿಪಡಿಸುವುದು ಅವನ ಕೈಯಲ್ಲಿ ಇಲ್ಲ. ಅದೂ ಕೂಡ ಈ ದೇಶದ ಮನೋಪಾಲಿಸ್ಟೇ ಫಿಕ್ಸ್ ಮಾಡುತ್ತಾನೆ, ಬಜಾರ್‌ನಲ್ಲಿ ಹೋಗಿ ಮಾಲನ್ನು ಇಡಬೇಕು, ಹರಾಜು ಮಾಡುತ್ತಾರೆ, ಎಷ್ಟು ಹೇಳುತ್ತಾರೋ ಅಷ್ಟು ಬೆಲೆ ಫಿಕ್ಸ್ ಆಗುತ್ತದೆ. ಆದುದರಿಂದ, ಮೊದಲು ಈ ಪದ್ಧತಿ ಬದಲಾವಣೆಯಾಗಬೇಕಾಗುತ್ತದೆ. ಈ ಪದ್ಧತಿಯನ್ನು ಬದಲಾವಣೆ ಮಾಡಬೇಕಾದರೆ, ಈ

ಅಗ್ರಿಕಲ್ಚರ್ ಪ್ರೊಡಕ್ಷನ್ ಹೇಗೆ ಆಗುತ್ತದೆ ಎಂಬುದನ್ನು ನೋಡಬೇಕು. ಮಳೆ ಹೆಚ್ಚಾಯಿತು ಎಂದರೆ ಬೆಳೆ ಹಾನಿಯಾಗುತ್ತದೆ, ಮಳೆ ಕಡಿಮೆಯಾಯಿತೆಂದರೆ ಆಗಲೂ ಹಾನಿಯಾಗುತ್ತದೆ. ರೈತ ಅವನೇನು ಭೂಮಿಗೆ ಹಾಕುತ್ತಾನೆ ಅದು ಅವನಿಗೆ ವಾಪಸ್ ಬರುವುದಿಲ್ಲ. ಎಷ್ಟೋ ಬೆಳೆ ಸ್ವಲ್ಪ ಬಂತು ಎಂದರೆ ಅದರ ಮೇಲೆ ಬೆಲೆ ಫಿಕ್ಸ್ ಮಾಡುವುದು ಅವನ ಕೈಯಲ್ಲಿ ಇಲ್ಲ. ಆ ದೃಷ್ಟಿಯಿಂದ ಈ ದೇಶದಲ್ಲಿ ಸಬ್ಸಿಡಿ ಕೊಡುವ ಪದ್ಧತಿ ಏನು ಇದೆ, ಇತ್ತೀಚಿನ 10–12 ವರ್ಷಗಳ ಹಿಂದೆ ಅದು ಯಾವುದೇ ಸರ್ಕಾರ ಇರಲಿ, ಈ ಸಬ್ಸಿಡಿ ತೆಗೆಯಬೇಕೆಂದು ಅಮೇರಿಕಾ ಮತ್ತು ಮಲ್ಟಿ ನ್ಯಾಷನಲ್ಸ್ ಅಡ್ವೈಸ್ ಮೇಲೆ ನಮ್ಮ ಸರ್ಕಾರಗಳು ಇಂಪ್ಲಿಮೆಂಟ್ ಮಾಡುತ್ತವೆ. ಅಮೇರಿಕಾದಲ್ಲಿ ಅವರು ರೈತರಿಗೆ ಸಾಕಷ್ಟು ಸಬ್ಸಿಡಿ ಕೊಡುತ್ತಾರೆ. ಆದರೆ ಇಲ್ಲಿ ಹಿಂದೂಸ್ತಾನದ ಸರ್ಕಾರಗಳಿಗೆ ಹೇಳುತ್ತಾರೆ, ನೀವು ಸಬ್ಸಿಡಿ ತೆಗೆದು ಹಾಕಿರಿ ಎಂದರೆ ಅದನ್ನು ನಮ್ಮ ಸರ್ಕಾರಗಳು ಇಂಪ್ಲಿಮೆಂಟ್ ಮಾಡುತ್ತವೆ. ಹೀಗಾಗಿ ಇಲ್ಲಿಯ ರೈತರು ಕಂಗಾಲಾಗುತ್ತಿದ್ದಾರೆ. ಉರಲು ಹಾಕಿಕೊಳ್ಳುತ್ತಿದ್ದಾರೆ. ಇಂಥ ಪರಿಸ್ಥಿತಿ ಬದಲಾವಣೆ ಮಾಡಬೇಕಾದರೆ, ಬೆಲೆ ಏನುಲು ಇದೆ ಇದರ ಪದ್ಧತಿ ಬದಲಾವಣೆ ಮಾಡಬೇಕು. ತೊಗರಿ ಬೇಳೆಯಾಗಲಿ ಮತ್ತೊಂದಾಗಲಿ ಮಾರ್ಕೆಟ್‌ಗೆ ಹೋದ ನಂತರ ಅದಕ್ಕೆ ಸರಿಯಾದ ಬೆಲೆ ಸಿಗಲಿಲ್ಲವೆಂದರೆ ಸರ್ಕಾರ ಮಧ್ಯೆ ಪ್ರವೇಶಿಸಬೇಕು. ಆ ಬೋರ್ಡು ಮುಖಾಂತರವೇ ಎಂಟರ್ ಆಗಬೇಕು. ನನಗೆ ತಿಳಿದಮಟ್ಟಿಗೆ ಟಿಎಪಿಸಿಎಂಎಸ್‌ಗಳು ಇವೆ, ಮಾರ್ಕೆಟಿಂಗ್ ಕಮಿಟಿಗಳು ಇವೆ, ಎಪಿಎಂಸಿಗಳು ಇವೆ, ಅವುಗಳ ಮೂಲಕ ಸರ್ಕಾರ ಮಾರ್ಕೆಟ್ಟಿಗೆ ಎಂಟರ್ ಆಗಬೇಕು, ಏಕೆಂದರೆ ಅವರಿಗೆ ಎಕ್ಸಾಪ್ಲಾಯಿಟೇಷನ್ ಆಗಬಾರದೆಂದು. ಆದರೆ ದುರ್ದೈವದಿಂದ ನಮ್ಮ ಯಾವುದೇ ಸರ್ಕಾರಗಳು ಇದರ ಬಗ್ಗೆ ಅಷ್ಟು ಗಮನ ಹರಿಸಲಿಲ್ಲ. ಈಗ ಬಹಳ ಕೇಳುತ್ತಾರೆಂದು ನಮ್ಮಲ್ಲಿ ತೊಗರೆ ಬೇಳೆ ಬೋರ್ಡು ಎಂದು ಮಾಡಿದರು. ಅದಕ್ಕೆ 10 ಕೋಟಿ ರೂಪಾಯಿ ಕೊಡಲಿಕ್ಕೂ ಎಷ್ಟೋ ಸತ್ಯಾಗ್ರಹ ಮಾಡಬೇಕಾಯಿತು. ಕಾಟನ್ ಕಾರ್ಪೋರೇಷನ್ ಆಫ್ ಇಂಡಿಯಾ ಎಂಬ ಏನು ಇದೆ ಅದಕ್ಕೆ ಹತ್ತ ರೇಟ್ ಎಂದು ಮಾಡಿದರು. ನಮ್ಮ ರಾಯಚೂರಿನಲ್ಲಿ ಅತಿ ಹೆಚ್ಚು ಹತ್ತಿ ಬೆಳೆಯುತ್ತಾರೆ, ಪ್ರತಿವರ್ಷ ನಮ್ಮ ಕಡೆಯಿಂದ ಅಲ್ಲಿಗೆ ಬರುತ್ತಾರೆ. ಆ ಕಡೆ ಸರ್ಕಾರ ವಿಶೇಷವಾದ ಲಕ್ಷ್ಯ ವಹಿಸಿದರೆ ಮಾತ್ರ ರೈತ ಉಳಿಯುತ್ತಾನೆ, ಇವರು ಮಲ್ಟಿನ್ಯಾಷನಲ್ಸ್ ಏನು ಹೇಳುತ್ತಾರೆ ಅದನ್ನು ಕೇಳಿ ಇವರು ಎಕನಾಮಿಕ್ ಪಾಲಿಸಿ ಏನು ಮಾಡುತ್ತಾರೆ, ಬಜೆಟ್‌ಗಳನ್ನು ತಯಾರು ಮಾಡುತ್ತಿದ್ದಾರೆ, ಇದನ್ನು ಬಿಡಬೇಕಾಗುತ್ತದೆ. ರೈತ ಇವತ್ತು ಕಬ್ಬಿನ ಮೇಲೆ 15 ರೂಪಾಯಿ ಡೆವಲೆಪ್‌ಮೆಂಟ್ ಚಾರ್ಜೆಸ್ಸ್ ಎಂದು ಕೊಡುತ್ತಾರೆ.

ಉಪಾಧ್ಯಕ್ಷರು :– ಪಾಟೀಲರೆ, 5 ನಿಮಿಷ ಮುಗಿಯಿತು, ನಮ್ಮ ಪರಿಸ್ಥಿತಿಯನ್ನು ನೀವು ಅರ್ಥಮಾಡಿಕೊಳ್ಳುವುದಿಲ್ಲ. ಏನು ಮಾಡಬೇಕು ಹೇಳಿ? ಡಿಟೇಲ್ ಆಗಿ ಹೋದರೆ ಸಂಜೆ ಆಗುತ್ತದೆ.

ಶ್ರೀ ವೈಜನಾಥ್ ಪಾಟೀಲ್ :– 85 ರೂಪಾಯಿ ಮತ್ತೊಂದಕ್ಕೆ ಬಿಡುತ್ತಾರೆ, ಹೀಗೆ ಸರ್ಕಾರಕ್ಕೆ ನೂರು ರೂಪಾಯಿ ಬಿಡುತ್ತಾರೆ. ಆದರೆ ಯಾವ ಷುಗರ್ ಫ್ಯಾಕ್ಟರಿಯವರು ರೈತರಿಗೆ ಲಾಭ ಕೊಡುತ್ತಾರೋ ಗೊತ್ತಿಲ್ಲ. ಯಾವುದೂ ಕೊಡುವುದಿಲ್ಲ. ಉತ್ತರ ಪ್ರದೇಶದವರೊಬ್ಬರು ಕೇಂದ್ರ ಸರ್ಕಾರದಲ್ಲಿ ಅಗ್ರಿಕಲ್ಚರ್ ಮಿನಿಸ್ಟರ್ಸ್ ಇದ್ದರು. ಅವರು ಸುಮಾರು 15 ಸಾವಿರ ಕೋಟಿ ರೂಪಾಯಿಗಳನ್ನು ತಂದರು. ಈ ಕಡೆಗೆ ನಮ್ಮ ಸರ್ಕಾರಗಳು ಲಕ್ಷ್ಯ ಹಾಕದೇ ಇರುವ ಸಲುವಾಗಿ ಕಬ್ಬು ಬೆಳೆಯುವ ರೈತರು ಹಾಗೂ ಇತರೆ ರೈತರು ಎಲ್ಲಾ ಹಾಳಾಗುತ್ತಿದ್ದಾರೆ. ಆ ದೃಷ್ಟಿಯಿಂದ ರೈತರಿಗೆ ವಿಶೇಷ ಅನುದಾನ ದೊರಕಬೇಕು ವಿಶೇಷ ಫರ್ಟಿಲೈಸರ್ ಮತ್ತೊಂದು ಮತ್ತೊಂದು ಎಂದು ಅದರ ಬೆಲೆ ಇವತ್ತು ಏರುತ್ತಿದೆ. ಇನ್‌ಪೆಸ್ಟಿಸೈಡ್ಸ್ ಬೆಲೆ ಹೆಚ್ಚಾಗುತ್ತಿದೆ, ಆದರೆ ರೈತನ ಕಬ್ಬಿನ ಬೆಲೆ ಅದೇ ಇದೆ. ತೊಗರಿ ಬೇಳೆ ಬೆಲೆ ಅದೇ ಇದೆ. ಇದು ಈ ರೀತಿಯಾಗಿ ಡಿಸ್‌ಪ್ಯಾರಿಟಿ ಆಗುತ್ತಿದೆ. ಇದರಿಂದಾಗಿ ಶೋಷಣೆ ಹೆಚ್ಚಾಗುತ್ತಿದೆ. ಈ ದೃಷ್ಟಿಯಿಂದ ಈ ದೇಶದಲ್ಲಿ ರೈತರು ಉರಲು ಹಾಕಿಕೊಂಡು ಸಾಯುವುದು ಹೆಚ್ಚಾಗುತ್ತಿದೆ. ಇದನ್ನು ತಡೆಯುವುದು ಸಾಧ್ಯವಿಲ್ಲ. ಇದನ್ನು ತಡೆಯಬೇಕಾದರೆ ಸರ್ಕಾರ ವಿಶೇಷ ಲಕ್ಷ್ಯ ಕೊಡಬೇಕಾಗುತ್ತದೆ. ಇವತ್ತು ರೈತರು ಅಂದ ಕೂಡಲೇ ಕೆಲವರ ಮೆಂಟಾಲಿಟಿ ಹೇಗಿದೆ ಅಂದರೆ ಅವರೆಲ್ಲಾ ಲ್ಯಾಂಡ್‌ಲಾರ್ಡ್ಸ್ ಎನ್ನುವ ಯೋಚನೆ ಬರುತ್ತದೆ, ಇವತ್ತು ಲ್ಯಾಂಡ್‌ಲಾರ್ಡ್ಸ್ ಯಾರೂ ಇಲ್ಲ. ನಿಜ ಎಂದರೆ, ಈ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಮತ್ತು ಈ ದೇಶದ ಜನಸಂಖ್ಯೆ ಹೆಚ್ಚಾದ ಮೇಲೆ ನಮ್ಮಲ್ಲಿ ದೊಡ್ಡ ಲ್ಯಾಂಡ್ ಲಾರ್ಡ್ಸ್ ಇಲ್ಲವೇ ಇಲ್ಲ. ಆದರೆ, ಅವರಿಗೆ ಯಾವುದೊಂದು ಲಾಭ ಕೊಡಬೇಕಾದರೆ, ಆತನಿಗೆ ಎಷ್ಟು ಲಾಭ ಆಗುತ್ತದೆ ಎನ್ನತಕ್ಕಂಥದ್ದು ಮತ್ತು ಆತ ಎಷ್ಟು ಗಳಿಸುತ್ತಾನೆ ಎಂಬುದು ಮತ್ತು ಎಷ್ಟು ಶೋಷಣೆ ಮಾಡುತ್ತಾನೆ ಎನ್ನತಕ್ಕಂಥ ರೀತಿಯಲ್ಲಿ ಲೆಕ್ಕ ಹಾಕುತ್ತಾರೆ. ಇವತ್ತಿನ ದಿವಸ ಅವರ ಶೋಷಣೆ ಮಾಡುತ್ತಿದ್ದಾರೆ. ಆದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಒಂದು ಪರಿಸ್ಥಿತಿ ಇವತ್ತು ಇಲ್ಲ. ಇವತ್ತಿನ ದಿವಸ ನೀರಾವರಿ ಪಂಪ್‌ಸೆಟ್‌ಗೆ ಪರ್ಮಿಷನ್ ಬೇಕಾದರೆ ರೈತ ರಾಜ್ಯ ಸರ್ಕಾರವನ್ನು ಕೇಳಬೇಕು. ಇವತ್ತಿನ ದಿವಸ ಎಷ್ಟೋ ಕಡೆ ಅನಧಿಕೃತವಾಗಿ ಐ.ಪಿ.ಸೆಟ್‌ಗಳನ್ನು ಹಾಕಿಕೊಂಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿಯೇ ಇದನ್ನು ನಾವು ನೋಡಿದ್ದೇವೆ. ಐ.ಪಿ.ಸೆಟ್‌ಗೆ ಪರ್ಮಿಷನ್ ತೆಗೆದುಕೊಳ್ಳುವುದಕ್ಕೋಸ್ಕರ ಒಬ್ಬ ರೈತ ರಾಜ್ಯ ಸರ್ಕಾರದವರ ಹತ್ತಿರ ಬರುವುದಕ್ಕೆ ಹೇಗೆ ಸಾಧ್ಯವಿದೆ? ಇದು ಖಂಡಿತ ಸಾಧ್ಯವಾಗುವುದಿಲ್ಲ. ಇವತ್ತಿನ ದಿವಸ ಆಂಧ್ರ ಪ್ರದೇಶದಲ್ಲಿ ಸಿಕ್ಕಾಪಟ್ಟೆ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡುತ್ತಿದ್ದಾರೆ. ಇದನ್ನು ಕೇಳುವುದಕ್ಕೆ ನಮ್ಮ ಸರ್ಕಾರಕ್ಕೆ ಧೈರ್ಯ ಇಲ್ಲ. ಅವರೇನಾದರೂ ಯೋಜನೆಗಳನ್ನು ಪ್ರಾರಂಭ ಮಾಡಿದರೆ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದ ಹತ್ತಿರ ಡೆಲಿಗೇಶನ್ ಹೋಗಿ ಮನವಿ

ಕೊಡತಕ್ಕಂಥದ್ದು ಬಿಟ್ಟರೆ ಇದಕ್ಕಿಂತ ಹೆಚ್ಚು ಏನೂ ಮಾಡುತ್ತಿಲ್ಲ. ಇವತ್ತಿನ ದಿವಸ ನಮ್ಮ ರೈತರಿಗೆ ಶೋಷಣೆ ಆಗುತ್ತಿದೆ. ಆ ಕಡೆ ಸರ್ಕಾರ ಲಕ್ಷ್ಯ ಕೊಡುತ್ತಿಲ್ಲ. ಇಲ್ಲಿರತಕ್ಕಂಥವರಲ್ಲಿ ಹೆಚ್ಚಿನ ಸಂಖ್ಯೆಯವರೆಲ್ಲಾ ಹಳ್ಳಿಗಾಡು ಪ್ರದೇಶಗಳಿಂದ ಆರಿಸಿ ಇಲ್ಲಿಗೆ ಬಂದಿದ್ದೇವೆ. ಆದರೆ, ನಮಗೆ ಶೋಷಣೆ ಮಾಡುವವರು ಮತ್ತು ನಮ್ಮ ಕಂಟ್ರೋಲ್ ಮಾಡುವವರು ಇವತ್ತಿನದಿವಸ ದೊಡ್ಡ ದೊಡ್ಡ ಇಂಡಸ್ಟ್ರಿಯಲಿಸ್ಟ್‌ಗಳು. ಅವರ ಸೇವೆಯನ್ನು ನಾವು ಮಾಡುತ್ತಿದ್ದೇವೆ. ಜನಪ್ರತಿನಿಧಿಗಳಾಗಿದ್ದರೂ ಕೂಡ ಇವತ್ತಿನದಿವಸ ಈ ಒಂದು ವ್ಯವಸ್ಥೆ ಇದೆ. ಇದೊಂದು ಕಡೆಯಾದರೆ, ಮತ್ತೊಂದು ಕಡೆ ಎಂಪ್ಲಾಯ್‌ಮೆಂಟ್ ಪ್ರಶ್ನೆ ಬರುತ್ತದೆ. ಇವತ್ತಿನದಿವಸ 70 ಪರ್ಸೆಂಟ್ ಜನಸಂಖ್ಯೆ ಹಳ್ಳಿಗಳಲ್ಲಿದೆ. ಸರೋಜಿನಿ ಮಹಿಷಿರವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ.

ಉಪಾಧ್ಯಕ್ಷರು :– ಮಾನ್ಯ ವೈಜನಾಥ್ ಪಾಟೀಲರವರೆ, 10 ನಿಮಿಷ ಮೀರಿತು. ನಾನು ನಿಮಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೆ. ಇನ್ನೂ ಆರು ಜನ ಮಾತನಾಡತಕ್ಕಂಥವರು ಇದ್ದಾರೆ. ತಾವು ಬಹಳ ಸೊಗಸಾಗಿ ಮಾತನಾಡುತ್ತಿದ್ದೀರಿ. ಆದ್ದರಿಂದ, ತಾವೇಕೆ 5 ನಿಮಿಷ ಮಾತನಾಡುವುದಕ್ಕೆ ಹೋಗುತ್ತಿದ್ದೀರಿ?

ಶ್ರೀ ವೈಜನಾಥ್ ಪಾಟೀಲ್ :– ಇನ್ನು 5 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

ಉಪಾಧ್ಯಕ್ಷರು :– ಮಾತನಾಡುವವರು ಇನ್ನೂ ಬಹಳ ಜನ ಇದ್ದಾರೆ.

ಶ್ರೀ ವೈಜನಾಥ್ ಪಾಟೀಲ್ :– ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಇಂಟರ್‌ವಿನ್ ಮಾಡುತ್ತಾರೆ. ಏತಕ್ಕೆಂದು ನನಗೆ ಗೊತ್ತಾಗುತ್ತಿಲ್ಲ.

ಉಪಾಧ್ಯಕ್ಷರು :– 1.30 ಗಂಟೆಯೊಳಗೆ ಚರ್ಚೆ ಮುಗಿಯಬೇಕೆಂದು ನಾನು ಮೊದಲೇ ಹೇಳಿದ್ದೇನೆ. ಮತ್ತೆ 1.30 ಗಂಟೆಯಾದನಂತರ ಒಂದು ನಿಮಿಷ ಕೂಡ ಅವಕಾಶ ಕೊಡುವುದಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಆದ್ದರಿಂದ ಬೇಗ ಮಾತನಾಡಿ ಮುಗಿಸಿ.

ಶ್ರೀ ವೈಜನಾಥ್ ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಒಂದೊಂದು ಪಕ್ಷದ ಸದಸ್ಯರು ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ನಾನು ಯಾವುದೇ ಪಕ್ಷಕ್ಕೆ ಸೇರಿಲ್ಲ. ನಾನು ಸ್ವತಂತ್ರನಾಗಿದ್ದೇನೆ. ಅಂದರೆ, ನಾನು ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ ಪಕ್ಷದಿಂದ ನಾನು ಬಂದಿದ್ದೇನೆ. ನನಗೆ ಏಕೆ ಈ ರೀತಿ ಮಾಡುತ್ತೀದ್ದಿರೆಂಬುದು ನನಗೆ ಗೊತ್ತಿಲ್ಲ.

ಉಪಾಧ್ಯಕ್ಷರು :– ಮಾನ್ಯ ವೈಜನಾಥ್ ಪಾಟೀಲ್‌ರವರು ಸೀನಿಯರ್ ಮೆಂಬರ್ಸ್ ಆಗಿದ್ದಾರೆ. ಆದ್ದರಿಂದ, ಎಲ್ಲರೂ ಸೇರಿ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟುಬಿಡಿ.

ಶ್ರೀ ವೈಜನಾಥ್ ಪಾಟೀಲ್ :- ಸರೋಜಿನಿ ಮಹಿಷಿ ವರದಿ ಬಗ್ಗೆ ಈ ಸಭೆಯಲ್ಲಿ ನಾನು ಪ್ರಶ್ನೆ ಕೇಳಿದ್ದೇನೆ. ಮಾನ್ಯ ಸಚಿವರು ಇದಕ್ಕೆ ಉತ್ತರ ಹೇಳಬೇಕಾಗಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ವೈಜನಾಥ್ ಪಾಟೀಲ್‌ರವರು ನನಗೆ ಯಾವುದೇ ಪಕ್ಷ ಇಲ್ಲವೆಂದು ಹೇಳುತ್ತಿದ್ದಾರೆ. ನನಗೆ ಯಾವುದೇ ಪಕ್ಷ ಇಲ್ಲವೇ ಇರುವುದರಿಂದ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಅವರೇ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು :- ಮಾನ್ಯ ಶಿವಾನಂದ ಪಾಟೀಲ್‌ರವರೆ, ನೀವೇ ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ವೈಜನಾಥ್ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಎಂಪ್ಲಾಯ್‌ಮೆಂಟ್‌ಗೆ ಸಂಬಂಧಪಟ್ಟಂತೆ ದೊಡ್ಡ ಬದಲಾವಣೆಯನ್ನೇ ಮಾಡಿದ್ದಾರೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆಯಿತು. ಮತ್ತೆ ಹೈಕೋರ್ಟ್ ಜಡ್ಜ್‌ಮೆಂಟ್ ಕೂಡ ಆಗಿದೆ. ಮಾನ್ಯ ಲೇಬರ್ ಮಿನಿಸ್ಟರ್‌ರವರು ಮತ್ತು ಮಾನ್ಯ ಇಂಡಸ್ಟ್ರೀಸ್ ಮಿನಿಸ್ಟರರವರು ಕೂಡ ಇಲ್ಲಿದ್ದಾರೆ. ಈ ಸಂದರ್ಭದಲ್ಲಿ ಅವರ ಗಮನಕ್ಕೆ ತರುವುದೇನೆಂದರೆ, ಸರ್ಕಾರಿ ಉದ್ಯೋಗಗಳಲ್ಲಿ ಮತ್ತು ಸರ್ಕಾರಿ ಹುದ್ದೆಗಳಲ್ಲಿ ಅಥವಾ ಇಂಡಸ್ಟ್ರೀಸ್‌ನಲ್ಲಿ ಲೋಕಲ್ ಜನರಿಗೆ ಅಂದರೆ ಕರ್ನಾಟಕ ರಾಜ್ಯದ ಜನರಿಗೆ ಅವಕಾಶ ಸಿಗಬೇಕೆಂದು ಡಾ॥ ಸರೋಜಿನಿ ಮಹಿಷಿರವರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ. ಇದನ್ನು ಕೂಡ ಸರ್ಕಾರ ಒಪ್ಪಿಕೊಂಡಿದೆ. ಇದನ್ನು ಒಪ್ಪಿಕೊಂಡಿದ್ದರೂ ಕೂಡ ಇವತ್ತು ಸ್ಥಳೀಯರಿಗೆ ನೌಕರಿ ಸಿಗುತ್ತಿಲ್ಲ. ಬೇರೆ ಬೇರೆ ರಾಜ್ಯದವರಿಗೆ ನೌಕರಿ ಸಿಗುತ್ತಿದೆ. ತಮಿಳುನಾಡು ಮತ್ತು ಬೇರೆ ಬೇರೆ ಕಡೆಯಿಂದ ಬಂದವರಿಗೆ ಇಲ್ಲಿತಕ್ಕಂಥ ಇಂಡಸ್ಟ್ರಿಗಳಲ್ಲಿ ಉದ್ಯೋಗ ಕೊಡುತ್ತಿದ್ದಾರೆ. ಸರ್ಕಾರ ಇಂಡಸ್ಟ್ರಿಯಲಿಸ್ಟ್‌ಗಳನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯ ಇಲ್ಲ. ಆದರೆ ಅವರಿಗೆ ಬೇಕಾಗಿರತಕ್ಕಂಥ ಸವಲತ್ತುಗಳನ್ನು ಕೊಡುತ್ತಿದ್ದಾರೆಷ್ಟೆ. ಇವತ್ತಿನ ದಿವಸ ಇನ್‌ಫೋಸಿಸ್ ಕಂಪನಿಯವರು ಅಥವಾ ಮತ್ತೊಂದು ಕೈಗಾರಿಕೆಯವರು ಎಲ್ಲಿ ರೋಡ್‌ಬೇಕು ಎಂದು ಅಥವಾ ಏನು ಬೇಕೆಂದು ಕೇಳುತ್ತಾರೆಯೋ, ಅವೆಲ್ಲವನ್ನೂ ಸರ್ಕಾರದ ಮಂತ್ರಿಗಳು ಅವರ ಮನೆಗೆ ಹೋಗಿ ಅವರಿಗೆ ಬೇಕಾಗಿರುವ ಸವಲತ್ತುಗಳನ್ನು ಕೊಡುತ್ತಿದ್ದಾರೆ. ನಿಜವಾಗಿಯೂ ಕೂಡ ದುರ್ದೈವದ ಪರಿಸ್ಥಿತಿ ಬಂದಿದೆ. ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನ ಮಾಡಬೇಕು. ಇವತ್ತಿನ ದಿವಸ ನಮ್ಮಲ್ಲಿರತಕ್ಕಂಥ ಎಂಪ್ಲಾಯ್‌ಮೆಂಟ್ ಆಫೀಸ್‌ಗಳಿಗೆ ಬೆಲೆ ಇಲ್ಲ. ಇವತ್ತಿನದ ದಿವಸ ಏನಾಗಿದೆ ಎಂದರೆ, ನೇರವಾಗಿ ಯಾರು ಬೇಕಾದರೂ ಅವರಿಗೆ ಅರ್ಜಿ ಕೊಟ್ಟು ನೌಕರಿಗೆ ಸೇರುತ್ತಿದ್ದಾರೆ. ಎಂಪ್ಲಾಯ್‌ಮೆಂಟ್ ಆಫೀಸಿನ ಅವಶ್ಯಕತೆ ಇಲ್ಲವೆಂದು ಅಲ್ಲಿ ಹೆಸರನ್ನು ರಿಜಿಸ್ಟ್ರರ್ ಮಾಡಿಸುತ್ತಿಲ್ಲ. ಮತ್ತೆ

ಇಂಥವರಿಗೆ ನಾವು ಎಂಪ್ಲಾಯ್‌ಮೆಂಟ್ ಕೊಡುವುದಕ್ಕೂ ಕೊಡುವುದಕ್ಕೂ ಕೂಡ ಆಗುತ್ತಿಲ್ಲ. ಇದಕ್ಕೆಲ್ಲಾ ಒಂದು ವ್ಯವಸ್ಥೆ ಮಾಡಬೇಕು. ಜಡ್ಜ್‌ಮೆಂಟ್ ನೌಕರಿ ಕೊಡಬಾರದೆಂದು ಎಲ್ಲೂ ಕೂಡ ಇಲ್ಲ. ಇವತ್ತಿನ ದಿವಸ ನಮ್ಮ ಅಧಿಕಾರಿಗಳು ತಪ್ಪು ಮಾಹಿತಿಗಳನ್ನು ನೀಡುತ್ತಿದ್ದಾರೆ. ಮತ್ತೆ ನಮ್ಮಲ್ಲಿರತಕ್ಕಂಥ ಎಂಪ್ಲಾಯ್‌ಮೆಂಟ್ ಆಫೀಸ್‌ನ ಅವಶ್ಯಕತೆ ಇಲ್ಲವೆಂದು ಸುತ್ತೋಲೆ ಕಳುಹಿಸಿದ್ದಾರೆ. ಇದರ ಬಗ್ಗೆ ಮಾತನಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಪತ್ರವನ್ನು ಕೊಟ್ಟಿದ್ದು, ಇದರ ಬಗ್ಗೆ ಚರ್ಚೆ ಮಾಡಲು ಒಂದು ಸಭೆಯನ್ನು ಕರೆಯಬೇಕೆಂದು ಕೇಳಿದ್ದೇನೆ. ಆದರೆ, ಅವರು ಇನ್ನೂ ಸಭೆ ಕರೆದಿಲ್ಲ. ಇವತ್ತಿನ ದಿವಸ ಐ.ಎ.ಎಸ್. ಅಧಿಕಾರಿಗಳು ಮಿಸ್ ಲೀಡ್ ಮಾಡುತ್ತಿದ್ದಾರೆ. ಮತ್ತೆ ಇವತ್ತು ಇರತಕ್ಕಂಥ ಎಜ್ಯುಕೇಶನ್ ಸಿಸ್ಟಮ್ ಬಗ್ಗೆ ಹೇಳಬೇಕಾದರೆ, ಇತ್ತೀಚಿಗೆ ಇಂಗ್ಲೀಷ್ ಮತ್ತು ಕನ್ನಡದ ಬಗ್ಗೆ ಇಲ್ಲಿ ಚರ್ಚೆ ಆಗಬೇಕು. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಅನೇಕ ವಿಶ್ವವಿದ್ಯಾಲಯಗಳು ಇವೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಹೇಳುವುದೇನೆಂದರೆ, ಇವತ್ತಿನ ದಿವಸ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ ವಿಶ್ವವಿದ್ಯಾಲಯಗಳು ಇವೆ. ಮತ್ತೆ ಇಲ್ಲಿರುವಂತೆ ಎರಡು ವರ್ಷಗಳ ಪಿ.ಯು.ಸಿ. ಕೋರ್ಸ್ ಕೂಡ ಅಲ್ಲಿದೆ. ಆದರೆ ಅಲ್ಲಿ ಯಾವರೀತಿ ಇದೆ ಅಂದರೆ, ಆಯಾಯ ವಿಶ್ವವಿದ್ಯಾಲಯಗಳಲ್ಲಿಯೇ ಪ್ರತ್ಯೇಕವಾದ ಪಿ.ಯು.ಬೋರ್ಡ್ ಇದೆ. ಆದ್ದರಿಂದ ಇದೇ ರೀತಿಯಾದ ಒಂದು ವ್ಯವಸ್ಥೆಯನ್ನು ಧಾರವಾಡ ಮತ್ತು ಗುಲ್ಬರ್ಗಾ ಬೆಂಗಳೂರು, ಮಂಗಳೂರು ಹಾಗೂ ಇತರೇ ವಿಶ್ವವಿದ್ಯಾಲಯಗಳಲ್ಲಿ ಅವರದೇ ಆದ ಒಂದು ಪಿ.ಯು. ಬೋರ್ಡ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದಕ್ಕೆ ಆರ್ಟಿಕಲ್ 371ರ ಅವಶ್ಯಕತೆ ಇಲ್ಲ. ಈ ರೀತಿಯಾಗಿ ಮಾಡಿದರೆ ಡಿಸ್‌ಪ್ಯಾರಿಟಿ ನಮ್ಮಲ್ಲಿ ಏನು ಬೆಳೆಯುತ್ತಿದೆ ಅದು ಕಡಿಮೆಯಾಗುತ್ತದೆ. ಮೆಡಿಕಲ್ ಎಜ್ಯುಕೇಶನ್ ಅಥವಾ ಮತ್ತೊಂದರ ಬಗ್ಗೆ ಹೇಳುವುದಾದರೆ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಂದ ಆಗಿರುವುದರಿಂದ ಬೆಂಗಳೂರು ಅಲ್ಲದೆ ಬೇರೆ ಕಡೆಗೂ ಕೂಡ ತಮಿಳುನಾಡು ಮತ್ತು ಆಂಧ್ರಪ್ರದೇಶ ಬೇರೆಯವರಲ್ಲಾ ಇಲ್ಲಿಗೆ ಬರುವುದಕ್ಕೆ ಅನುಕೂಲವಾಗಿದೆ. ಏಕೆಂದರೆ, ಇವತ್ತಿನ ದಿವಸ ಎಂಪ್ಲಾಯ್‌ಮೆಂಟ್ ಕಛೇರಿಗಳು ಕಾರ್ಯ ನಿರ್ವಹಿಸುತ್ತಿದ್ದರೆ ಬೇರೆ ಕಡೆಯಿಂದ ಇಲ್ಲಿಗೆ ಬರುವವರ ಅಡ್ರೆಸ್ ಕರೆಕ್ಟ್ ಆಗಿ ಇಲ್ಲಿ ಕೊಡಬೇಕಾಗಿತ್ತು. ಇದರಿಂದ ಅವರು ಎಲ್ಲಿಂದ ಬಂದಿದ್ದಾರೆಂದು ಗೊತ್ತಾಗುತ್ತಿತ್ತು. ತಾಲ್ಲೂಕು ಮಟ್ಟದಲ್ಲಿಯೂ ಕೂಡ ಎಂಪ್ಲಾಯ್‌ಮೆಂಟ್ ಆಫೀಸ್ ಪ್ರಾರಂಭ ಮಾಡತಕ್ಕಂಥ ಅವಶ್ಯಕತೆ ಇದೆ. ಇವತ್ತಿನ ದಿವಸ ಜಿಲ್ಲಾ ಮಟ್ಟದಲ್ಲಿ ಇರತಕ್ಕಂಥ ಎಂಪ್ಲಾಯ್‌ಮೆಂಟ್ ಕಛೇರಿಯನ್ನು ತೆಗೆದು ಬಿಟ್ಟಿದ್ದೀರಿ. ಈ ಒಂದು ದೃಷ್ಟಿಯಿಂದ ಇವತ್ತಿನ ದಿವಸ ಎಜ್ಯುಕೇಶನ್ ಸಿಸ್ಟಮ್‌ನಲ್ಲಿ ಇಂಗ್ಲೀಷ್, ಕನ್ನಡ ಎಂದು ಜಗಳ ನಡೆಯುತ್ತಿದೆ. ನಮ್ಮ ದೇಶದಲ್ಲಿ ಕನ್ನಡ

ಮತ್ತು ತೆಲುಗು ಮಾತನಾಡತಕ್ಕಂಥವರನ್ನು ಬಿಡಿ. ಇವತ್ತು ಇಡೀ ಜಗತ್ತಿನಲ್ಲಿ ಕೇವಲ 60 ಕೋಟಿ ಜನ ಮಾತ್ರ ಇಂಗ್ಲೀಷ್ ಮಾತನಾಡತಕ್ಕಂಥವರು ಇದ್ದಾರೆ. ನಮ್ಮ ದೇಶದಲ್ಲಿ ಹಿಂದಿ ಮಾತನಾಡತಕ್ಕಂಥವರು ಸುಮಾರು 45 ಕೋಟಿ ಜನರಿದ್ದಾರೆ. ಇವತ್ತಿನ ದಿವಸ ಕನ್ನಡ, ತೆಲುಗು, ಮತ್ತು ಬೇರೆ ಭಾಷೆಗಳನ್ನು ಬಿಟ್ಟು ಬಿಡಿ. ಆದರೂ ಕೂಡ ನಮ್ಮಲ್ಲಿ ಇಂಗ್ಲೀಷ್ ಕಲಿಯತಕ್ಕಂಥದ್ದು ಒಂದು ಫ್ಯಾಷನ್ ಇದೆ. ಪ್ರತಿಯೊಬ್ಬರೂ ವೈಟ್ ಸ್ಕಾಲರ್ ಆಗಬೇಕೆಂದು ಇದ್ದಾರೆ. ಮತ್ತೆ ಈಗ ದಲಿತ ಸಂಘಟನೆಗಳು ಪ್ರಚಾರ ಹುಟ್ಟು ಹಾಕಿದ್ದಾರೆ. ಅದು ಹಿಂದೆ ನಾವು ಮುಂದೆ ಹೋಗುತ್ತೇವೆಂದು ಹೇಳುತ್ತಾರೆ. ಇವತ್ತು ಜರ್ಮನ್‌ನಲ್ಲಿ ಇಂಗ್ಲೀಷ್ ಇಲ್ಲ. ಆದರೂ ಕೂಡ ಅವರು ಎಲ್ಲಾ ಕಡೆ ಕಾಂಪಿಟ್ ಮಾಡುತ್ತಿದ್ದಾರೆ. ಫ್ರಾನ್ಸ್‌ನಲ್ಲಿ ಇಂಗ್ಲೀಷ್ ಕಲಿಯುತ್ತಾರೆ. ಆದರೆ ಅವರು ಮಾತನಾಡುವುದಿಲ್ಲ. ಮತ್ತೆ ಇವರೂ ಕೂಡ ಕಾಂಪಿಟ್ ಮಾಡುತ್ತಾರೆ. ಮತ್ತೆ ಇವರು ಇಂಗ್ಲೀಷ್‌ನಲ್ಲಿ ಮಾತನಾಡಿದರೆ ಅವರಿಗೆ ಉತ್ತರ ಕೊಡುವುದಿಲ್ಲ. ಆದರೆ, ನಮ್ಮ ದೇಶದಲ್ಲಿ ಇದೊಂದು ಹೊಸ ಫ್ಯಾಷನ್ ಆಗಿದೆ.... ತರ್ಡ್ ವರ್ಲ್ಡ್ ಎಂದು ನಾವೇನು ಹೇಳುತ್ತೇವೆ... ಇವತ್ತಿನ ದಿವಸ ಕನ್ನಡದಲ್ಲಿ ಐ.ಎ.ಎಸ್. ಪಾಸ್ ಆಗಿದ್ದರೂ ಕೂಡ ನೌಕರಿ ಸಿಗುತ್ತಿಲ್ಲ. ಒಟ್ಟಿನಲ್ಲಿ ನಾವು ಮೆಂಟಲಿ ಗುಲಾಮರಾಗಿದ್ದೇವೆ. ನಮ್ಮಲ್ಲಿ ಸ್ಲೇವರಿ ಮೆಂಟಾಲಿಟಿ ತಯಾರಾಗಿದೆ.

ಉಪಾಧ್ಯಕ್ಷರು :- ಮಾನ್ಯ ವೈಜನಾಥ್ ಪಾಟೀಲರವರೆ, ಇನ್ನೂ ಬೇರೆಯವರು ಮಾತನಾಡುವವರು ಇದ್ದಾರೆ. ಇನ್ನೂ ಆರು ಜನ ಮಾತನಾಡಬೇಕಾಗಿದೆ. 1.30 ಗಂಟೆಗೆ ಒಳಗೆ ಮುಗಿಸಬೇಕೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ವೈಜನಾಥ್ ಪಾಟೀಲ್ :- ನಾನು ಆರ್ಟಿಕಲ್ 371ರ ಬಗ್ಗೆ ಈಗ ಕೇಳುತ್ತಿಲ್ಲ. ಆರ್ಟಿಕಲ್ 371ರ ಬಗ್ಗೆ ಚರ್ಚೆ ಮಾಡುವುದಕ್ಕೆ ಟೈಂ ಕೊಟ್ಟಿದ್ದಾರೆ. ಅವತ್ತು ನಾನು ಇದರ ಬಗ್ಗೆ ಮಾತನಾಡುತ್ತೇವೆ. ಮತ್ತೆ ಇವತ್ತಿನ ದಿವಸ ಇರುವ ಶಿಕ್ಷಣದ ಪದ್ಧತಿ ಬಗ್ಗೆ ಮತ್ತೊಂದು ಸಲಹೆ ಮಾಡಬೇಕಾಗಿದೆ. ಇಂಗ್ಲೀಷ್ ಮತ್ತು ಕನ್ನಡದ ಬಗ್ಗೆ ಅನಂತರ ಮಾತನಾಡಬೇಕಾಗುತ್ತದೆ. ಒಟ್ಟಿನಲ್ಲಿ ಈ ಪದ್ಧತಿಯನ್ನು ಬದಲಾವಣೆ ಮಾಡಬೇಕಾಗುತ್ತದೆ. ಈ ದೇಶದಲ್ಲಿ ಎಲ್ಲದಕ್ಕಿಂತ ಹೆಚ್ಚಾಗಿ ಹೆಚ್ಚಿನ ಎಂಪ್ಲಾಯ್‌ಮೆಂಟ್ ಕೊಡತಕ್ಕಂಥದ್ದು ರೈತರು. ಮೊನ್ನೆ ದಿವಸ ಉತ್ತರ ಕರ್ನಾಟಕದ ಕೆಲವು ಕಡೆ ಮಳೆ ಬಂತು. ಮಳೆ ಬಂದ ಮರುದಿವಸವೇ ಎಲ್ಲಾ ಕಡೆ ಕೃಷಿ ಕಾರ್ಯಗಳು ಪ್ರಾರಂಭವಾದವು. ಇವತ್ತಿನ ದಿವಸ ಯಾವ ಸರ್ಕಾರ ಇಷ್ಟೊಂದು ಎಂಪ್ಲಾಯ್‌ಮೆಂಟ್ ಕೊಡುತ್ತದೆ ಹೇಳಿ? ಆ ದೃಷ್ಟಿಯಿಂದ ಎಲ್ಲದಕ್ಕಿಂತ ಹೆಚ್ಚಾಗಿ ರೈತರಿಗೆ ಎಂಪ್ಲಾಯ್‌ಮೆಂಟ್ ಕೊಡುತ್ತಾರೆ. ಆದ್ದರಿಂದ ಅವರ ಹಿತದೃಷ್ಟಿಯಿಂದ ಸರ್ಕಾರಗಳು ಕೆಲಸ ಮಾಡಬೇಕಾಗುತ್ತದೆ. ತಾವು ಸಮಯವಾಗಿದೆಯೆಂದು ಬಹಳ ಹೇಳುತ್ತಿದ್ದೀರಿ.

ಬಹಳ ಮಂದಿ ಊಟಕ್ಕೆ ಹೋದಂತೆ ಕಾಣುತ್ತದೆ. ಆ ದೃಷ್ಟಿಯಿಂದ ತಾವೇನು ನನಗೆ ಮಾತನಾಡಲು ಸಯಮ ಕೊಟ್ಟಿರಿ ಅದಕ್ಕೆ ಧನ್ಯವಾದಗಳು. ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ರೋಷನ್‌ಬೇಗ್ (ಜಯಮಹಲ್) :– ಮಾನ್ಯ ಉಪಾಧ್ಯಕ್ಷರೆ, ಶಿಕ್ಷಣ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 4200 ಉರ್ದು ಶಾಲೆಗಳು ಇವೆ. ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಗೊತ್ತಿರಬೇಕು. ಇದೇ ಸದನದಲ್ಲಿ ಮಾನ್ಯ ಅಜೀಜ್‌ಸೇಠ್‌ರವರು ಸುಮಾರು ಇಪ್ಪತ್ತು ವರ್ಷಗಳಿಂದ ಬಡಿದುಕೊಳ್ಳುತ್ತಿದ್ದರು. ಅವರು ಹೇಳುತ್ತಿದ್ದರು ಕನ್ನಡ ಮೇಷ್ಟ್ರುಗಳನ್ನು ಕೊಡಿ ಎಂದು. ಆದರೆ ಇವತ್ತಿಗೂ ಕೂಡ ಇನ್ನೂ ಎಷ್ಟೋ ಅಲ್ಪಸಂಖ್ಯಾತ ಸ್ಕೂಲುಗಳಲ್ಲಿ ಕನ್ನಡ ಮೇಷ್ಟ್ರುಗಳು ಇಲ್ಲ. ತಾವು ಕನ್ನಡ ಕನ್ನಡ ಎಂದು ಹೇಳುತ್ತೀರಿ, ನಮ್ಮ ಮಕ್ಕಳು ಕನ್ನಡ ಕಲಿಯಬೇಕು, ನಮ್ಮ ಮಕ್ಕಳಿಗೆ ಬೇಂದ್ರೆಯವರ ವಿಚಾರವೇನು? ಕುವೆಂಪುರವರ ವಿಚಾರವೇನು? ಇದೆಲ್ಲಾ ನಮ್ಮ ಮಕ್ಕಳಿಗೆ ಗೊತ್ತಾಗುವುದು ಬೇಡವೆ? ನಾನು ಎಷ್ಟೋ ಸಲ ಬಡಿದುಕೊಂಡಿದ್ದೇನೆ, ಕನ್ನಡ ಮೇಷ್ಟ್ರುಗಳನ್ನು ಕೊಡಿ ಎಂದು,' ಇನ್ನೂ ಕನ್ನಡ ಮೇಷ್ಟ್ರುಗಳು ನಮ್ಮ ಉರ್ದು ಶಾಲೆಗಳಲ್ಲಿ ಇಲ್ಲ. ಒಂದು ಕಡೆ ನಾಯಕರುಗಳೆಲ್ಲಾ ಕರೆ ಕೊಡುತ್ತಾರೆ, ಏನೋ ಒಂದು ಫ್ಯಾಶನ್ ಆಗಿಬಿಟ್ಟಿದೆ, ಎಲ್ಲಾ ಭಾಷಣದಲ್ಲಿ Minority should join the main stream ಅಲ್ಪಸಂಖ್ಯಾತರು ಮೈನ್ ಸ್ಟ್ರೀಮ್‌ಗೆ ಬರಬೇಕೆಂದು ಹೇಳುತ್ತಾರೆ. ಆ ಮುಖ್ಯವಾಣಿಯ ಯಾವ ವಾಣಿಯಾ? ಯಾವ ಸ್ಟ್ರೀಮ್? ಯಾವ ಗಟ್ಟರ್ ಎಂದು ನನಗೆ ಗೊತ್ತಿಲ್ಲ. ನಾಲ್ಕು ಸಾವಿರ ಉರ್ದು ಶಾಲೆಗಳು ಕರ್ನಾಟಕದಲ್ಲಿವೆ. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಏನಿದೆ? ಟಾಯ್ಲೇಟ್‌ಗಳು ಇಲ್ಲ. ಹೈಸ್ಕೂಲ್‌ನಲ್ಲಿ ಟಾಯ್ಲೇಟ್ ಇಲ್ಲವೆಂದರೆ ನನ್ನ ಮಗಳನ್ನು ಆ ಶಾಲೆಗೆ ಕಳುಹಿಸಲು ಆಗುತ್ತದೆಯೆ? ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಸರ್ವ ಶಿಕ್ಷಣ ಅಭಿಯಾನದಲ್ಲಿ ಈ ವರ್ಷದಲ್ಲಿ ಸುಮಾರು 18 ಸಾವಿರ ಕೋಟಿ ರೂಪಾಯಿಗಳ ಹಣ ಕೇಂದ್ರ ಸರ್ಕಾರದವರ ಹತ್ತಿರ ಇದೆ. ಆ 18 ಸಾವಿರ ಕೋಟಿ ರೂಪಾಯಿಗಳಲ್ಲಿ ಸುಮಾರು ಐದುಸಾವಿರ ಕೋಟಿ ರೂಪಾಯಿಗಳನ್ನು ಮಿಡ್ಡೇಮೀಲ್ಸ್‌ಗೆ ಮತ್ತು 13 ಸಾವಿರ ಕೋಟಿ ರೂಪಾಯಿಗಳನ್ನು ಇಡೀ ದೇಶಕ್ಕೆ ಹಂಚಿದ್ದಾರೆ. ನಡೆಯಿರಿ ನಾವೆಲ್ಲಾ ನಿಮ್ಮ ಜೊತೆ ಡೆಲ್ಲಿಗೆ ಬರುತ್ತೇವೆ, ಒಂದು ಡೆಲಿಗೇಷನ್‌ನ್ನೆ ಕರೆದುಕೊಂಡು ಹೋಗಿ, ನಮ್ಮ ಜೊತೆಗೆ ಮಾನ್ಯ ವಾಟಾಳ್‌ನಾಗರಾಜ್‌ರವರೂ ಬರುತ್ತಾರೆ, all party delegation ಕರೆದುಕೊಂಡು ಹೋಗಿ. ಸರ್ವ ಶಿಕ್ಷಣ ಅಭಿಯಾನದ ಪಾಲನ್ನು ಸ್ವಲ್ಪ ಹೆಚ್ಚಾಗಿ ನಮ್ಮ ರಾಜ್ಯಕ್ಕೆ ತೆಗೆದುಕೊಳ್ಳಿ, ಅದರಲ್ಲಿ ಮೈನಾರಿಟೀಸ್ ಪ್ಯಾಕೇಜ್ ಎಂದು ಮಾಡಿ ನಮ್ಮ ಸ್ಕೂಲ್‌ಗಳನ್ನು ಏನಾದರೂ ಇಂಪ್ರೂವ್‌ಮೆಂಟ್ ಮಾಡಿ. ಇಲ್ಲದಿದ್ದರೆ ನೀವು ಮೈನ್

ಸ್ಟ್ರೀಮ್‌ಗೆ ಬನ್ನಿ ಎಂದು election ನಲ್ಲಿ ಒಂದು ಚಾಕೋಲೇಟ್ ಕೊಟ್ಟುಬಿಡುವುದು. ಜಬ್ಬಾರ್‌ಖಾನ್‌ಗೆ ಒಂದು ಮಂತ್ರಿ ಮಾಡಿ ಅವರಿಗೆ ಒಂದು ಮೈನಾರಿಟಿ ಪೋರ್ಟ್‌ಫೋಲಿಯೊ, ಇನ್ನೊಬ್ಬನಿಗೆ ನಾಮಕಾವಸ್ಥೆಗೆ ಮಿನಿಸ್ಟ್ರರ್ ಮಾಡಿಬಿಟ್ಟು ಓ ಓ ನಾವು ಮಾಡಿದ್ದೇವೆಂದು ಹೇಳುವುದು. ಅದು ನಮಗೆಲ್ಲಾ ಬೇಡ ಸ್ವಾಮಿ. ನಮ್ಮ ಮಕ್ಕಳಿಗೆ ಸ್ಕೂಲ್‌ನಲ್ಲಿ education ಕೊಡಿ. ಅಂಗನವಾಡಿಗಳು ಇಲ್ಲ. ನಮ್ಮ ಮಕ್ಕಳು ಅಂಗನವಾಡಿಗೆ ಹೋಗುವುದು ಬೇಡವೆ? ನಮಗೆ ನಾಲ್ಕು ಸಾವಿರ ಅಂಗನವಾಡಿ ಶಾಲೆಗಳು ಬೇಕಾಗುತ್ತದೆ. ಸುಮಾರು ನಾಲ್ಕು ಸಾವಿರ ಉರ್ದು ಶಾಲೆಗಳು ಇದ್ದಾವೆ, ಆದರೆ ನಮ್ಮ ಹತ್ತಿರ ಅಂಗನವಾಡಿ ಸ್ಕೂಲ್‌ಗಳು ಇಲ್ಲ.

ಶ್ರೀ ಡಿ.ಟಿ. ಜಯಕುಮಾರ್ :- ತಾವು ಆವಾಗ ಮಂತ್ರಿಯಾಗಿದ್ದಿರಲ್ಲಾ, ಆಗ ಕೇಳಬೇಕಾಗಿತ್ತು.

ಶ್ರೀ ಆರ್. ರೋಷನ್‌ಬೇಗ್ :- ಆಗ ನಾವು ಕೇಳಿದರೆ, ಮಾನ್ಯ ಜಯಕುಮಾರ್‌ರವರೆ, ನೀವೂ ಕೂಡ ನಮ್ಮ ಜೊತೆ ಮಂತ್ರಿಯಾಗಿದ್ದೀರಿ, ನೀವೂ ಇದನ್ನು ಲಘುವಾಗಿ ಕೇಳಬೇಡಿ ನಾನೂ ಮಂತ್ರಿಯಾಗಿದ್ದೆ ಎಂದು, ನಾನು ಕೇಳಿದರೆ ದುಡ್ಡಿಲ್ಲ ದುಡ್ಡಿಲ್ಲವೆಂದು ಹೇಳುತ್ತಾರೆ. ಅಲ್ಪಸಂಖ್ಯಾತರ ಸ್ಕೂಲ್‌ಗೆ ದುಡ್ಡಿಲ್ಲ, ನಾನು ಈಗ ಮನವಿ ಮಾಡಿಕೊಳ್ಳುತ್ತಿರುವುದೇನೆಂದರೆ, ಸರ್ವ ಶಿಕ್ಷಣ ಅಭಿಯಾನದಲ್ಲಿ ಕೇಂದ್ರ ಸರ್ಕಾರದಿಂದ ಬಂದ ಹಣ ನಿಮ್ಮ ಹತ್ತಿರ ಇದೆ. ಆ ಹಣವನ್ನು ನಮಗೆ ಕೊಡಿ, ನಮಗೇನೂ ಸ್ಪೆಶಲ್ ಆಗಿ ಕೊಡಬೇಡಿ. ಅದರಲ್ಲಿ ಒಂದು ಪ್ಯಾಕೇಜ್ ಮಾಡಿ. ನಾಲ್ಕು ಸಾವಿರ ಅಂಗನವಾಡಿ ಸ್ಕೂಲ್ಸ್, ಈ ನಾಲ್ಕು ಸಾವಿರ ಉರ್ದು ಸ್ಕೂಲ್ಸ್‌ಗಳಲ್ಲಿ ಟಾಯ್ಲೆಟ್ಸ್, ಶೌಚಾಲಯಗಳು, ಇನ್‌ಫ್ರಾಸ್ಟ್ರಕ್ಚರ್ಸ್, ಕಾಂಪೌಂಡ್, electricity ಅನುಕೂಲ ಮಾಡಿಕೊಡಿ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಸನ್ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಈಗ ಚರ್ಚೆ ಮುಕ್ತಾಯವಾಯಿತು.

(ಗೊಂದಲ)

ಉಪಾಧ್ಯಕ್ಷರು :- ನಾನು ಆಗಲೇ ಹೇಳಿದ್ದೇನಲ್ಲಾ, ಒಂದೂವರೆ ಗಂಟೆಗೆ ಚರ್ಚೆ ಮುಕ್ತಾಯವಾಗುತ್ತದೆಂದು.

(ಗೊಂದಲ)

ಮಾನ್ಯ ಸದಸ್ಯರೊಬ್ಬರು :- ಮಾನ್ಯ ಉಪಾಧ್ಯಕ್ಷರೆ, ಪ್ರೌಢ ಶಾಲೆಗಳಿಗೆ ಇವತ್ತಿಗೂ ಶೌಚಾಲಯಗಳು ಇಲ್ಲ.

ಶ್ರೀ ಎಸ್. ಶಿವಾನಂದ ಪಾಟೀಲ್ :– ಒಂದು ಐದೈದು ನಿಮಿಷ ಮಾತನಾಡಲು ಅವಕಾಶ ಕೊಡಿ.

ಉಪಾಧ್ಯಕ್ಷರು :– ಇನ್ನು ಅರ್ಧ ಗಂಟೆ. ಶಿವಾನಂದ ಪಾಟೀಲರೆ ಮಾತನಾಡಿ. ಅರ್ಧ ಗಂಟೆ ಎಂದರೆ ತಮಗಲ್ಲ, ತಮಗೆ ಐದು ನಿಮಿಷ.

ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) :– ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ 2005–06ನೇ ಸಾಲಿನ ಆಯವ್ಯಯದ ಮೇಲೆ ಬೆಂಬಲ ವ್ಯಕ್ತಪಡಿಸುತ್ತಾ, ಕೆಲವು ಸಲಹೆಗಳನ್ನು ನಾನು ಮಾನ್ಯ ಕೃಷಿ ಸಚಿವರಿಗೆ ಹಾಗೂ ತೋಟಗಾರಿಕಾ ಸಚಿವರಿಗೆ ಕೊಡಲು ಬಯಸುತ್ತೇನೆ. ಕೃಷಿ ಮತ್ತು ತೋಟಗಾರಿಕಾ ಸಚಿವರಿಬ್ಬರೂ ಇಲ್ಲಿ ಇಲ್ಲ.

ಉಪಾಧ್ಯಕ್ಷರು :– ತಾವು ಹೇಳಿ. ಮಂತ್ರಿಗಳು ಇದ್ದಾರೆ. ಡಿ.ಸಿ.ಎಂ ಇದ್ಧಾರೆ, ಮಂತ್ರಿಗಳು ಇದ್ದಾರೆ, ತಾವು ಮಾತನಾಡಿ, ರೆಕಾರ್ಡ್ ಆಗುತ್ತದೆ.

ಶ್ರೀ ಶಿವಾನಂದ ಪಾಟೀಲ್ :– ಅವರಿದ್ದರೆ ಸರಿಯಾಗುತ್ತಿತ್ತು ಅವರನ್ನು ಕರೆಸಿ. ಅವರ ಇಲಾಖೆಯ ಮೇಲೆ ಬೇಡಿಕೆ ಇದೆ.

ಶ್ರೀ ಬಸವರಾಜಯ್ಯ ರೆಡ್ಡಿ :– ಮಾನ್ಯ ಉಪಾಧ್ಯಕ್ಷರೆ, ಅವರ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯಾಗುತ್ತಿರುವಾಗ ಸಂಬಂಧಪಟ್ಟ ಮಂತ್ರಿಗಳು ಇರದಿದ್ದರೆ ಅದು ಅರ್ಥಹೀನವಲ್ಲವೆ?

ಉಪಾಧ್ಯಕ್ಷರು :– ಒಂದೂವರೆ ಗಂಟೆಗೆ ರಿಪ್ಲೈ ಕೊಡಬೇಕಾಗಿದೆ.

ಶ್ರೀ ಬಸವರಾಜರಾಯರೆಡ್ಡಿ :– ಹಾಗಾದರೆ ಮುಂದಕ್ಕೆ ಹಾಕಿ.

ಉಪಾಧ್ಯಕ್ಷರು :– ಮೊದಲಯೇ ಇದು ತರ್ಕವಾಗಿದೆ. ಒಂದು ಗಂಟೆಗೆ ಚರ್ಚೆ ಕ್ಲೋಸ್ ಎಂದು ಅವರು ಹೇಳಿದ್ದಾರೆ. ಅವರು ಕೌನ್ಸಿನಲ್ಲೇನೋ ಉತ್ತರ ಕೊಡುವುದು ಇದೆಯೆಂದು ಈಗ ಹೋಗಿದ್ದಾರೆ. ಅದು ಹೇಗೆ ಮಾಡಲು ಆಗುತ್ತದೆ? ಮಾತನಾಡಿ, ಮಿನಿಸ್ಟ್ರರ್‌ಗಳು ಬೇರೆಯವರಿದ್ದಾರೆ, ರೆಕಾರ್ಡ್ ಆಗುತ್ತಿದೆ, ಮಾತನಾಡಿ, ಅವರು ಬರೆದುಕೊಂಡು ಹೇಳುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ :– ಅವರ ಬೇಡಿಕೆಗಳ ಬಗ್ಗೆ ಚರ್ಚೆ ಇದ್ದಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲವೆಂದರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ :– ಇದು ಸರಿಯಾದುದಲ್ಲ. ದಯಮಾಡಿ ಅವರನ್ನು ಕರೆಸಿ.

ಶ್ರೀ ಶಿವಾನಂದ ಪಾಟೀಲ್ :- ಒಬ್ಬರೂ ಇಲ್ಲವಲ್ಲಾ? ಅವರದ್ದೂ ಏನಾದರೂ ಬೇಡಿಕೆ ಇದೆಯೆ?

ಉಪಾಧ್ಯಕ್ಷರು :- ನೀವು ಪ್ರಾರಂಭಮಾಡಿ. ಕರೆಸೋಣ.

ಶ್ರೀ ಎಸ್. ಶಿವಾನಂದ ಪಾಟೀಲ್ :- ಇವತ್ತಿನ ದಿವಸ ಈ ದೇಶ ಏನಾದರೂ ಸಮೃದ್ಧಿಯಾಗಬೇಕಾದರೆ....

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ಪ್ರತಿ ದಿನ ಮಂತ್ರಿಗಳು ಇಲ್ಲ ಮಂತ್ರಿಗಳು ಇಲ್ಲವೆಂದು ಯಾರ ಮುಂದೆ ಈ ಗೋಳನ್ನು ಹೇಳಿಕೊಳ್ಳುವುದು? ನನಗೆ ಅರ್ಥವಾಗುತ್ತಿಲ್ಲ. ಸಂಬಂಧಪಟ್ಟ ಬೇಡಿಕೆ ಇರುವಾಗ ಅವರು ಗಂಭೀರವಾಗಿ ಕುಳಿತುಕೊಂಡು....

ಉಪಾಧ್ಯಕ್ಷರು :- ಈಗ ಎರಡು ನಿಮಿಷದಲ್ಲಿ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ಅದು ಸಮಜಾಯಿಷಿಯಲ್ಲ. ಎರಡು ನಿಮಿಷ ಹೋಗಿದ್ದಾರೆ. ಬರ್ತಾರೆ, ಎರಡು ನಿಮಿಷ, ಕುಳಿತುಕೊಳ್ಳುತಾರೆ ಅದಲ್ಲ, ತಮಗೆ ದಯಮಾಡಿ ಹೇಳುತ್ತಿದ್ದೇವೆ, ಆ ಬೇಡಿಕೆಗಳಿಗೆ ಸಂಬಂಧಪಟ್ಟ ಸಚಿವರುಗಳು ಇಲ್ಲಿ ಇರಬೇಕು. ಆ ಬೇಡಿಕೆಯ ಬಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿ ಬೆಳಕು ಚೆಲ್ಲುತ್ತಾರೆ. ಅವರ ಇಲಾಖೆಯ ಬಗ್ಗೆ ಅನೇಕ ವಿಚಾರಗಳು ಚರ್ಚೆಯಾಗುತ್ತದೆ. ಯಾರೋ ಬರೆದುಕೊಂಡು ಎನ್ನುವುದಕ್ಕಿಂತ ಹೆಚ್ಚಾಗಿ ನಾನು ಮಾತನಾಡುವುದನ್ನು ಸಚಿವರು ಕೇಳಿದಾಗ ಅವರಿಗೆ ಉತ್ತರ ಕೊಡುವುದಕ್ಕೊಂದು ಶಕ್ತಿ ಬರುತ್ತದೆ. ಸ್ಫೂರ್ತಿ ಬರುತ್ತದೆ. ಅದನ್ನು ಬಿಟ್ಟು ಇಲ್ಲಿ ಹೊರಗಡೆ ಹೋಗಿ ನಾವು ಹೇಳಿ ಎಂದರೆ ಇದು ಗೋಳಿದು, ಇದು ಒಂದು ತರಹ ಗೋಳು. ಈ ಪದವನ್ನು ನಾನು ಏಕೆ ಉಪಯೋಗಿಸುತ್ತೇನೆಂದರೆ, ಇದು ಒಳ್ಳೆಯದಲ್ಲ. ಒಳ್ಳೆಯ ಸೂಚನೆಯಲ್ಲ. ಕೋಣನ ಮುಂದೆ ಕಿಂದರಿ ಬಾರಿಸಿದಂತೆ. ಎಷ್ಟು ಸಾರಿ ನಾವು ಇವರ ಮುಂದೆ ಕೇಳುತ್ತಿದ್ದೇನೆ, ಬೇಡುತ್ತಿದ್ದೇವೆ, ಗೋಳು, ಗೋಳು, ಗೋಳು.

ಶ್ರೀ ಬಸವರಾಜ ರಾಯರೆಡ್ಡಿ :- ಕೋಣಗಳೇ ಇಲ್ಲವಲ್ಲಾ ಕಿಂದರಿಯನ್ನು ಎಲ್ಲಿ ಬಾರಿಸುತ್ತೀರಿ?

ಶ್ರೀ ವಾಟಾಳ್ ನಾಗರಾಜ್ :- ಆಗಲಿ. ನಿಮ್ಮನ್ನು ನಾವು ಕೋಣ ಎಂದೇ ಕರೆಯುತ್ತೇವೆ. ನಿಮ್ಮ ಗುಂಪನ್ನು ನಾವು ಕೋಣ ಎಂದು ಕರೆಯುತ್ತೇವೆ. ನಾವು ಕಿಂದರಿಯನ್ನು ಬಾರಿಸುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ :- ಇಲ್ಲಿ ಕೋಣಗಳೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಿಮ್ಮನ್ನು ಕೋಣ ಎಂದು ಕರೆಯುತ್ತೇವೆ. ಮಾನ್ಯ ಸದಸ್ಯರು ಆ ಕಡೆಯವರೆಲ್ಲಾ ಎಮ್ಮೆಗಳು ಈ ಕಡೆಯವರೆಲ್ಲಾ ಕೋಣಗಳು!

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ತಾವು ಹೇಳಿದಂತೆ ನಾನೂ ಕೂಡ ಮಾನ್ಯ ಮಂತ್ರಿಗಳ ಪರವಾಗಿ ಮಾತನಾಡುತ್ತೇನೆಂದು ಅಲ್ಲ. ತಾವು ಅವರಿಗೆ ಒಂದು ಗಂಟೆಗೆ ನಿಮ್ಮ ಉತ್ತರ ಚಾಲು ಮಾಡಬೇಕೆಂದು ಹೇಳಿದ್ದೀರಿ. ಆ ಕಾರಣದಿಂದ ಅವರಿಬ್ಬರೂ ಇಲ್ಲಿದ್ದಾರೆ. ನಾನು ನೋಡಿದ್ದೇನೆ. ಅವರು ಅಧಿಕಾರಿಗಳನ್ನು ಕೂರಿಸಿಕೊಂಡು ಉತ್ತರ ತಯಾರು ಮಾಡಿಕೊಳ್ಳಲು ಹತ್ತಿದ್ದಾರೆ. ನಾನು ನೋಡಿದ್ದು ಇದು. ನಾನೂ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ ಮಾನ್ಯ ರಾಯರೆಡ್ಡಿಯವರೆ. ಮಂತ್ರಿಗಳು ಇಲ್ಲಿ ಸುಮ್ಮನೆ ಏನೋ ಒಂದು ಉತ್ತರವನ್ನು ಕೊಡಲು ಆಗುವುದಿಲ್ಲ ಉತ್ತರ ತಯಾರು ಮಾಡಿಕೊಂಡು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು :- ಮಾನ್ಯ ಪಾಟೀಲರು ಹೇಳಿದ್ದು ಸರಿಯೆ?

ಶ್ರೀ ವಾಟಾಳ್ ನಾಗರಾಜ್ :- ಇಬ್ಬರೂ ಏನು ತಯಾರು ಮಾಡುತ್ತಿದ್ದಾರೆ? ಏನು ತಯಾರು ಮಾಡುವುದು? ಉತ್ತರವನ್ನು ಎಲ್ಲಿ ತಯಾರು ಮಾಡುವುದು? ನನಗೆ ಅರ್ಥವಾಗಲಿಲ್ಲ? ಇಲ್ಲಿ ನಮ್ಮ ಭಾಷಣವನ್ನೇ ಕೇಳದೆ ಉತ್ತರವನ್ನೇನು ತಯಾರು ಮಾಡುವುದು? ಪಾಟೀಲರೆ, ದಯವಿಟ್ಟು.....

ಶ್ರೀ ಎಸ್.ಎಸ್. ಪಾಟೀಲ್ :- ನಾನು ಮಂತ್ರಿಗಳನ್ನು ರಕ್ಷಣೆ ಮಾಡಿಕೊಳ್ಳುತ್ತೇನೆಂದಲ್ಲ. ನಾನೂ ಕೂಡ ಅಲ್ಲಿಂದ ಮಾತನಾಡಿದ್ದೇನೆ. ನಾನೂ ಕೂಡ ಮಂತ್ರಿಯಾಗಿ ಇಲ್ಲಿ ಕೆಲಸ ಮಾಡಿದ್ದೇನೆ. ಉತ್ತರ ಕೊಡುವುದು ಸುಮ್ಮನೆ ಆಗುವುದಿಲ್ಲ. ಉತ್ತರ ತಯಾರುಮಾಡಿಕೊಳ್ಳಲು ಹತ್ತಿದ್ದಾರೆ, ನಾನು ಇಬ್ಬರೂ ಮಂತ್ರಿಗಳನ್ನು ನೋಡಿ ಬಂದಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ :- ಸದಸ್ಯರ ಡಿಮ್ಯಾಂಡ್ ಏನೆಂದು ಕೇಳಬೇಕಲ್ಲಾ? ಸದಸ್ಯರ ಆಕಾಂಕ್ಷೆ ಏನಿದೆ ಎಂದು ಕೇಳಬೇಕಲ್ಲಾ?

ಶ್ರೀ ಎಸ್.ಎಸ್. ಪಾಟೀಲ್ :– ತಾವೆಲ್ಲಾ ಮಾತನಾಡಿದ್ದಕ್ಕೆ ವಿರೋಧ ಪಕ್ಷದವರೆಲ್ಲಾ ಮಾತನಾಡಿದ್ದಕ್ಕೆ ಉತ್ತರ ಕೊಡಬೇಕಾಗುತ್ತದೆ. ಸುಮ್ಮನೆ ಏನೋ ಒಂದು ಹೇಳಿದರೆ ಆಗುವುದಿಲ್ಲ. ಚೆನ್ನಾಗಿ ತಯಾರು ಮಾಡಿಕೊಂಡು ಬಂದು ಇಲ್ಲಿ ಹೇಳಬೇಕಾಗುತ್ತದೆ.

ಶ್ರೀ ಗೋವಿಂದ ಮಕಟಪ್ಪ ಕಾರಜೋಳ :– ಸದಸ್ಯರ ಪ್ರಶ್ನೆ ಕೇಳಲಾರದೆ ಹೇಗೆ, ಉತ್ತರವನ್ನು ಯಾವ ರೀತಿ ತಯಾರು ಮಾಡುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್ :– ಕೇಳದಿದ್ದರೆ ಇನ್ನೂ ಕೇಳೋಣವಂತೆ.

ಶ್ರೀ ಗೋವಿಂದ ಮಕಟಪ್ಪ ಕಾರಜೋಳ :– ಸದಸ್ಯರ ಡಿಮ್ಯಾಂಡ್ ಕೇಳಿಸಿಕೊಳ್ಳಲಾರದೆ ಯಾವ ರೀತಿ ಉತ್ತರ ಕೊಡುತ್ತಾರೆ?

ಶ್ರೀ ಎಸ್.ಎಸ್. ಪಾಟೀಲ್ :– ಸೀನಿಯರ್ ಮೆಂಬರ್ಸ್ ಎಲ್ಲಾ ಮಾತನಾಡಿದ್ದಾರೆ. ಅದಕ್ಕೆ ಅವರು ಸರಿಯಾದ ಉತ್ತರವನ್ನು ಕೊಡಬೇಕಲ್ಲಾ?

ಶ್ರೀ ಗೋವಿಂದ ಮಕಟಪ್ಪ ಕಾರಜೋಳ :– ಸದಸ್ಯರ ಚರ್ಚೆಯನ್ನೇ ನೀವು ಕೇಳಲಾರದೆ ಉತ್ತರವನ್ನು ಹೇಗೆ ಕೊಡುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್ :– ಇಲ್ಲಿ ಏನಾಗಿದೆ ಎಂದರೆ ಮಾನ್ಯ ಅಧ್ಯಕ್ಷರು ಮಾನ್ಯ ಸದಸ್ಯರಿಗೆ ಮಾತನಾಡಲು ಮತ್ತಷ್ಟು ಟೈಮ್ ಕೊಟ್ಟರು. ಆ ಕಾರಣದಿಂದ ಅದು ಹಾಗಾಗಿದೆ.

ಶ್ರೀ ಸಿ.ಟಿ. ರವಿ :– ಮಾನ್ಯ ಪಾಟೀಲರು ವಕೀಲರಿದ್ದಂತೆ. ಯಾರೇ ಕ್ಲೈಯಂಟ್ಸ್ ಬಂದರೂ ಅವರ ಪರ ವಕಾಲತ್ತು ವಹಿಸಬೇಕಾಗುತ್ತದೆ. ಅವರು ಈಗ ಆ ಕಡೆ ಕುಳಿತಿದ್ದಾರೆ, ಆ ಕಡೆ ವಕಾಲತ್ತು ವಹಿಸುತ್ತಿದ್ದಾರೆ. ವಕೀಲರ ಕೆಲಸ ಮಾಡುತ್ತಿದ್ದಾರೆ. ನೀವು ಹಿರಿಯರಿದ್ದೀರಿ, ನೀವು ಹೀಗೇಕೆ ಮಾಡಲು ಹತ್ತಿದ್ದೀರಿ?

ಶ್ರೀ ಬಸವರಾಜ ರಾಯರೆಡ್ಡಿ :– ಅವರಿಬ್ಬರೂ ಲಾ ಓದಿಲ್ಲ. ಮಾನ್ಯ ವಾಟಾಳ್‌ರವರೂ ಲಾ ಓದಿಲ್ಲ, ಮಾನ್ಯ ಎಸ್.ಎಸ್. ಪಾಟೀಲರೂ ಲಾ ಓದಿಲ್ಲ.

ಶ್ರೀ ಸಿ.ಎನ್. ನಾಡಗೌಡ :– ಮಾನ್ಯ ಉಪಾಧ್ಯಕ್ಷರೆ, ಮಧ್ಯಾಹ್ನ ಈಗ ಊಟಕ್ಕೆ ಬಿಡಿ, ಊಟದ ನಂತರ ಅರ್ಧಗಂಟೆಯ ಕಾಲ ಇದರ ಬಗ್ಗೆ ಚರ್ಚೆಯಾಗಲಿ.

ಉಪಾಧ್ಯಕ್ಷರು :– ಮಾನ್ಯ ನಾಡಗೌಡರೆ, ಪ್ರಾರಂಭವಾಗಿರುವಂತಹ ಚರ್ಚೆ ಒಂದು ಗಂಟೆಗೆ ಮುಗಿಯಬೇಕಾಗಿತ್ತು. ನೀವೆಲ್ಲರೂ ಕೇಳಿದ ತಕ್ಷಣ ಇನ್ನೂ ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಮಾನ್ಯ ಸಚಿವರು 1–15 ಗಂಟೆಯುವರೆಗೆ ಇದ್ದರು. ಈಗ ಅವರು ಹೊರಗಡೆ ಹೋಗಿದ್ದಾರೆ. ಈಗ 1–30ಗೆ

ಉತ್ತರ ಪ್ರಾರಂಭವಾಗಬೇಕೆಂದು ನಾವು ಹೇಳಿದ್ದೇವೆ. ಒತ್ತಾಯದ ಮೇಲೆ ಅವಕಾಶ ಕೊಡಿ ಎಂದು ನಿಂತುಕೊಂಡಿದ್ದೀರಿ. ತಾವು ಮಾತನಾಡಲು ನಾನು ಮಾಡಿದ್ದೇನೆ. ತಾವು ಮಾತನಾಡಬೇಕಾದರೆ ಮಂತ್ರಿ ಬೇಕು ಅಂದರೆ ಅವರು ಎಲ್ಲಿಂದ ಬರುತ್ತಾರೆ? ಅವರು ಈಗ ಬರುತ್ತಾರೆ. ಮಾನ್ಯ ಶಿವಾನಂದ ಪಾಟೀಲ್‌ರವರೇ, ತಾವು ಮಾತನಾಡಿ.

ಶ್ರೀ ಶಿವಾನಂದ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಈ ದೇಶ ಸಂವೃದ್ಧಿಯಾಗಬೇಕಾದರೆ....

ಶ್ರೀ ಬಸವರಾಜ ರಾಯರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಪ್ರಾಮುಖ್ಯವಾದುದು.

ಶ್ರೀ ಶಿವಾನಂದ ಪಾಟೀಲ್ :- ಹೋಗಲಿ ಬಿಡಪ್ಪಾ ಏನು ಅದು ಪ್ರಾಮುಖ್ಯವಾದುದು.

ಶ್ರೀ ಬಸವರಾಜ ರಾಯರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುವುದು ಹೇಗೆ?

ಉಪಾಧ್ಯಕ್ಷರು :- ನಿಮ್ಮ ಪ್ರಶ್ನೆಗಳನ್ನು ಹಾಕಬೇಕಾದಾಗ ಮಂತ್ರಿಗಳಿದ್ದರು.

Sri Basavaraj Rayareddi :- My serious objection is about the House itself.

ನಾನು ಏಕೆ ಹೇಳುತ್ತೇನೆ ಎಂದರೆ ತಾವು ದಯಮಾಡಿ ಕೇಳಬೇಕು. ಇಲ್ಲಿ ಏನಾಗಿದೆ ಎಂದರೆ.....

ಉಪಾಧ್ಯಕ್ಷರು :- ಈಗ 1-30 ಗಂಟೆಯಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ :- ನಾನು ಮಾತನಾಡುವುದು ಹೇಗೆ? ಮಾನ್ಯ ಉಪಾಧ್ಯಕ್ಷರೆ, ತಾವು ದಯಮಾಡಿ ಕೇಳಬೇಕು. ಬೇಡಿಕೆಗಳ ಮೇಲೆ ಇಲ್ಲಿ ಚರ್ಚೆ ಮಂಡನೆಯಾಗಿದೆ. ಕೇವಲ ಅನ್ಯುಯಲ್ ರಿಪೋರ್ಟನ್ನು ಕೊಡುತ್ತಾರೆ. ಎರಡು ಅಥವಾ ಮೂರು ಇಲಾಖೆ ಅವರ ಪರಫಾರ್ಮೆನ್ಸ್ ಆಫ್ ದಿ ಇಯರ್, ಈ ವರ್ಷದ ಪರ್‌ಫಾರ್ಮೆನ್ಸ್ ಏನು ಮಾಡುತ್ತೇವೆಂಬುದನ್ನು ಬಿಟ್ಟರೆ ಬೇರೆ ಯಾವ ಇಲಾಖೆಗಳದ್ದೂ ಕೊಡಲಿಲ್ಲ. ಹೀಗಾದರೆ ಸದಸ್ಯರು ಹೇಗೆ ಮಾತನಾಡುವುದಕ್ಕಾಗುತ್ತದೆ? ಅನ್ಯೂಯಲ್ ರಿಪೋರ್ಟ್ ಲಾಸ್ಟ್ ಇಯರದ್ದು ಕೊಡುತ್ತೀರಿ, ಈ ವರ್ಷ ಏನು ಕೆಲಸ ಮಾಡುತ್ತೇವೆ ಎಂದು ಇಲಾಖೆಗಳ ಬಗ್ಗೆ ಯಾರಿಗೂ ಕೊಟ್ಟಿಲ್ಲ. ಒಬ್ಬ ಸದಸ್ಯರಿಗೂ ಕೂಡ ಕೊಟ್ಟಿಲ್ಲ. ನಾವು ಬೆಗ್ಗರ್ಸ್ ಹಾಗೆ ಅಲ್ಲಿಗೆ ಹೋಗಬೇಕು. ಇಲಾಖೆ ಇಲಾಖೆಗಳಿಗೆ ಅಡ್ಡಾಡಿ ಹೋಗಿ

ನಾವು ಪರ್‌ಫಾರ್ಮೆನ್ಸ್ ಆಫ್ ದಿ ಡಿಪಾರ್ಟ್‌ಮೆಂಟ್ ತರಬೇಕೆಂದರೆ ನಾವು ಹೇಗೆ ಮಾತನಾಡುವುದು? ಇದಕ್ಕೆ ಯಾರು ಜವಾಬ್ದಾರರು?

ಉಪಾಧ್ಯಕ್ಷರು :- ಮಾನ್ಯ ಶಿವಾನಂದ ಪಾಟೀಲ್‌ರವರು ಮಾತನಾಡುವುದಕ್ಕೆ ಒಪ್ಪಿಕೊಂಡಿದ್ದಾರೆ.

Sri Basavaraj Rayareddi :- It is most irresponsible. Departments are most irresponsible.

ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಪರ್‌ಫಾರ್ಮೆನ್ಸ್ ಆಫ್ ದಿ ಡಿಪಾರ್ಟ್‌ಮೆಂಟ್ ಬಗ್ಗೆ ಈ ವರ್ಷ ಕೊಡದೇ ಇದ್ದರೆ ನಾವು ಏನು ಮಾಡುವುದು? ಇಲಾಖೆಯ ಪರ್‌ಫಾರ್ಮೆನ್ಸ್ ಬಜೆಟನ್ನು ಕೊಡುವುದು ಬೇಡವೇ? ಒಂದು ಇಲಾಖೆಯ ಬಗ್ಗೆಯೂ ಕೂಡ ಕೊಟ್ಟಿರುವುದಿಲ್ಲ. ದಯಮಾಡಿ ಅವರನ್ನು ಕರೆಸಿ, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು :- ಆಯಿತು.

ಶ್ರೀ ಬಸವರಾಜ ರಾಯರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ತಾವು ರೂಲಿಂಗ್ ಮಾಡಬೇಕಾಗುತ್ತದೆ. ಇದು ಬಹಳ ಸೀರಿಯಸ್ಸಾದ ಮಾತಾಗಿದೆ.

ಉಪಾಧ್ಯಕ್ಷರು :- ಆಯಿತು, ತಾವು ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ :- ಹಾಗಾದರೆ ನಾನು ಇದರ ಬಗ್ಗೆ ಪ್ರಿವಿಲೇಜ್ ಮೋಷನ್ನನ್ನು ಮೂವ್ ಮಾಡುತ್ತೇನೆ.

ಉಪಾಧ್ಯಕ್ಷರು :- ಮೂವ್ ಮಾಡಿ.

ಶ್ರೀ ಶಿವಾನಂದ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ,......

ಶ್ರೀ ಬಸವರಾಜ ರಾಯರೆಡ್ಡಿ :- ಅಲ್ಲಾ ಹಾಗಲ್ಲಾ, ಇಲಾಖೆಯವರು ಮಾಹಿತಿಯನ್ನು ಕೊಡದೇ ಇದ್ದರೆ ನಾವು ಸದಸ್ಯರುಗಳು ಏನು ಮಾಡುವುದು? ತಾವು ಇದರ ಬಗ್ಗೆ ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು :- ನೀವು ಹೇಳಿರುವುದನ್ನು ನಾವು ಕೇಳಿಸಿಕೊಂಡಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ :- ತಾವು ನನ್ನ ಅಬ್ಜಕ್ಷನ್ನನ್ನು ದಯಮಾಡಿ ಅರ್ಥಮಾಡಿಕೊಳ್ಳಿ.

ಉಪಾಧ್ಯಕ್ಷರು :- ಮಾನ್ಯ ರೆಡ್ಡಿಯವರೆ, ತಾವು ಇಲ್ಲಿರುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕು. ಮಾನ್ಯ ಅಧ್ಯಕ್ಷರು ಪೀಠದಲ್ಲಿ ಕುಳಿತಿದ್ದಾಗಲೇ ಅದನ್ನು 12 ಗಂಟೆಗೆ ಕ್ಲೋಸ್ ಮಾಡಿದ್ದಾರೆ. ಮಂತ್ರಿಗಳು ಉತ್ತರ ಕೊಡುವುದಕ್ಕೆ ರೆಡಿ ಇದ್ದಾರೆ. ಒಂದು ಗಂಟೆಗೆ ಉತ್ತರ ಕೊಡುವ ಬಗ್ಗೆ ನಾವು ಚಾಲೂ ಮಾಡಿದ್ದೇವೆ. ಸದಸ್ಯರೆಲ್ಲರೂ ಎದ್ದು ಅರ್ಧಗಂಟೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದರು. ನಾವು 1-30 ಗಂಟೆಯ ತನಕ ಸಮಯವನ್ನು ಕೊಟ್ಟಿದ್ದೇವೆ. ಪ್ರತಿಯೊಬ್ಬರಿಗೂ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆ. ಆ ಸಂದರ್ಭದಲ್ಲಿ ಕೌನ್ಸಿಲ್‌ನಲ್ಲಿ ಪ್ರಶ್ನೆ ಇದೆ ಎಂದು ಅಗ್ರಿಕಲ್ಚರ್ ಮಂತ್ರಿಗಳು ಹೋಗಿದ್ದಾರೆ. ಮಾನ್ಯ ರಾಮಲಿಂಗಾರೆಡ್ಡಿಯವರು ಇಲ್ಲಿ ಇದ್ದಾರೆ. 10 ನಿಮಿಷ ಹೊರಗಡೆ ಹೋಗಬಾರದೇ? ಆ ಪ್ರಶ್ನೆಯನ್ನು ಏತಕ್ಕಾಗಿ ದೊಡ್ಡದಾಗಿ ಮಾಡುತ್ತೀರಿ?

Sri Basavaraj Rayareddi :- Departments are irresponsible. ಹಾಗಾದರೆ ಈ ಇಲಾಖೆಯ ಬೇಜವಾಬ್ದಾರಿಯತನವನ್ನು ತಾವು ಒಪ್ಪಿಕೊಳ್ಳುತ್ತೀರಿ ಅಂದ ಹಾಗೆ ಆಯಿತಲ್ಲಾ.

(ಗೊಂದಲ)

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :- ಅವರು ಭಾಷಣವನ್ನು ಮಾಡಿ ಮುಗಿಸಿದ್ದಾರೆ. ಈಗ ಪರ್‌ಫಾರ್ಮೆನ್ಸ್ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಶಿವಾನಂದ ಪಾಟೀಲ್ :- ರಾಯಚೂರು ಮತ್ತು ಗುಲ್ಬರ್ಗಾದವರನ್ನು ಬಿಡಿಸುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಿಲ್ಲ.

Sri Basavaraj Rayareddi :- Sir, it is a verious objection I am raising. understand. It is a very serious objection.

ಸದಸ್ಯರುಗಳು ಮಾತನಾಡುವುದಾದರೂ ಹೇಗೆ? ಸುಮ್ಮನೆ ಖಾಲಿ ಹರಟೆ ಹೊಡೆದುಕೊಂಡು ಹೋಗುವುದೆಲ್ಲ?

ಶ್ರೀ ಶಿವಾನಂದ ಪಾಟೀಲ್ :- ಈಗ ವೈಜನಾಥ್ ಪಾಟೀಲ್‌ರವರೂ ಕೂಡ ಮಾತನಾಡುತ್ತಿದ್ದರು, ಈಗ ಇವರು ಶುರು ಮಾಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಸಬ್ಜೆಕ್ಟ್ ಕಮಿಟಿ ಏನು ಇದ್ದವು, ಆ ಕಮಿಟಿಯವರಿಗೆ ಏನೇನು ಕೊಡುತ್ತಿದ್ದರೋ ಅದನ್ನು ಅವರು ಇಲ್ಲಿ ಕೊಡಲಿಲ್ಲ.

ಉಪಾಧ್ಯಕ್ಷರು :- ಈಗ ಮಂತ್ರಿಗಳು ನೋಟ್ ಮಾಡಿಕೊಂಡಿದ್ದಾರೆ. ಅವರು ಬಂದ ಮೇಲೆ ಹೇಳುತ್ತಾರೆ.

(ಗೊಂದಲ)

ಉಪಾಧ್ಯಕ್ಷರು :– ಫರ್‌ಫಾರ್ಮೆನ್ಸ್ ಬಜೆಟ್‌ನ ಬಗ್ಗೆ ಕೊಡುತ್ತಾರಲ್ಲಾ,

(ಗೊಂದಲ)

ಶ್ರೀ ಶಿವಾನಂದ ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಅವರನ್ನು ಎರಡು ನಿಮಿಷ ಕೂರಿಸಿ.

ಉಪಾಧ್ಯಕ್ಷರು :– ಮಧ್ಯದಲ್ಲಿ ತಾವು ಈ ತರಹ ಮಾಡಿದರೆ ಹೇಗೆ? ಮಾನ್ಯ ರಾಯರೆಡ್ಡಿಯವರೇ, ತಾವು ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ :– ಸುಮ್ಮನೆ ಹೋದ ವರ್ಷದ್ದು ಕೈಬಿಟ್ಟಿದ್ದಾರೆ.

ಶ್ರೀ ಶಿವಾನಂದ ಪಾಟೀಲ್ :– ಮಾನ್ಯ ಎಸ್.ಎಸ್. ಪಾಟೀಲ್‌ರವರೆ...

ಶ್ರೀ ಬಸವರಾಜ ರಾಯರೆಡ್ಡಿ :– ನಮಗೆ ನೀವು ಮಾಹಿತಿಯನ್ನೇ ಕೊಡದೆ ಇದ್ದರೆ ಇಲಾಖೆಯ ಬಗ್ಗೆ ನಾವು ಮಾತನಾಡುವುದಾದರೂ ಹೇಗೆ? ಏನು ಪ್ರಯೋಜನ, ಇಲ್ಲಿ ಹರಟೆ ಹೊಡೆಯುವುದಕ್ಕೆ ಬಂದಿದ್ದೇವೆಯೆ? ವಿಧಾನಸಭೆ ಹರಟೆ ಕೇಂದ್ರ ಆಗಬಾರದು. ಸಬ್ಜೆಕ್ಟ್ ಬಗ್ಗೆ ಮಾಹಿತಿಯನ್ನು ಕೊಡುವುದು ಬೇಡವೇ?

ಉಪಾಧ್ಯಕ್ಷರು :– ಮಾನ್ಯ ರಾಯರೆಡ್ಡಿಯವರೇ, ಆಯಿತು, ತಾವು ಕುಳಿತುಕೊಳ್ಳಿ. ಮಾನ್ಯ ಶಿವಾನಂದ ಪಾಟೀಲ್‌ರವರೆ, ತಾವು ಮಾತನಾಡಿ.

ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ) :– ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಬೆಂಗಳೂರಿನಲ್ಲಿ ಐ.ಟಿ.ರೆವಲ್ಯೂಷನ್ ಆದರೆ ಸಂವೃದ್ಧಿಯಾಗುತ್ತದೆಂಬ ಮಾತನ್ನು ನಾನು ತತ್ವಶಃ ಒಪ್ಪುವುದಿಲ್ಲ. ಇವತ್ತು ಏನಾದರೂ ಈ ದೇಶ, ಈ ರಾಜ್ಯ ಸಂವೃದ್ಧಿಯಾಗಬೇಕಾದರೆ ಕೃಷಿಗೆ ನಾವು ಆದ್ಯತೆಯನ್ನು ಕೊಡಬೇಕು. ಕೃಷಿ ಕ್ರಾಂತಿಯನ್ನು ಈಗಾಗಲೇ ನಾವು ಮಾಡಿದ್ದೇವೆ. ಆದರೆ ಇತ್ತೀಚಿನ ದಿನಮಾನಗಳಲ್ಲಿ ಕೃಷಿಗೆ ಬರತಕ್ಕಂತಹ ನಿರಂತರ ಸರ್ಕಾರಗಳು ಒತ್ತನ್ನು ಕೊಡತಕ್ಕಂಥದ್ದನ್ನು ನಾವು ನೋಡಿದರೆ ನಮಗೂ ಸ್ವಲ್ಪ ಮನಸ್ಸಿಗೆ ನೋವಾಗುತ್ತದೆ. ಮಾನ್ಯ ಕೃಷಿ ಸಚಿವರು ಒಂದು ಆರ್ಥಿಕ ಸಮೀಕ್ಷೆಯ ವರದಿಯನ್ನು ಕೊಟ್ಟಿದ್ದಾರೆ. ಇವತ್ತು ಎಕಾನಾಮಿಕ್ ಸರ್ವೆ ರಿಪೋರ್ಟನ್ನು ಅವರೇ ಕೊಟ್ಟಿದ್ದಾರೆ. ಅವರು ಇದ್ದರೆ ಒಳ್ಳೆಯದಾಗುತ್ತಿತ್ತು. 2004–05ನೇ ಸಾಲಿನ ಆರ್ಥಿಕ ಸಮೀಕ್ಷೆಯ ವರದಿಯನ್ನು ಅವರೇ ಕೊಟ್ಟಿದ್ದಾರೆ. ಇವತ್ತು ಅವರೇ ಒಪ್ಪಿಕೊಳ್ಳುತ್ತಾರೆ. 2002–03, 2003–04 ಮತ್ತು ಈ ಎರಡು ವರ್ಷಗಳಲ್ಲಿ ಕೃಷಿ ಉತ್ಪತ್ತಿಯನ್ನು ನಾವು

ಸಾಧಿಸಿಯೇ ತೀರುತ್ತೇವೆ ಎಂದು ಏನು ಒಂದು ಗುರಿಯನ್ನು ಇಟ್ಟುಕೊಂಡಿದ್ದರೋ ಅದರ ಸಮೀಪ ಕೂಡ ಮುಟ್ಟತಕ್ಕಂಥ ಸಾಧನೆ ಇಲಾಖೆಗೆ ಆಗಿಲ್ಲವೆಂದು ಒಂದು ಈ ಆರ್ಥಿಕ ಸಮೀಕ್ಷೆಯನ್ನು ನೋಡಿದರೆ ಗೊತ್ತಾಗುತ್ತದೆ ಹಾಗೂ ಅದರಿಂದ ಸ್ವಲ್ಪ ನೋವಾಗುತ್ತದೆ. ಇವತ್ತು ನಾನು ಕೃಷಿ ಸಚಿವರನ್ನು ಕೇಳಬೇಕಾಗುತ್ತದೆ. ಒಂದು ಕಡೆ ನಾವು ಹೇಳುತ್ತೇವೆ, ಬೃಹತ್ ನೀರಾವರಿಯಲ್ಲಿ ಇಷ್ಟೊಂದು ನೀರಾವರಿಯನ್ನು ನಾವು ಸಾಧಿಸಿದ್ದೇವೆ ಎಂದು ಇವತ್ತು 20 ಸಾವಿರ ಕೋಟಿ ರೂಪಾಯಿಗಳು ಇವತ್ತು ನಾವು ಬೃಹತ್ ನೀರಾವರಿ ಯೋಜನೆಗಳ ಮೇಲೆ ವ್ಯಯ ಮಾಡಿದ್ದೇವೆ. ಅದರ ಜೊತೆಗೆ ಮಧ್ಯಮ ನೀರಾವರಿ ಇರಬಹುದು, ಮೈನರ್ ಇರಿಗೇಷನ್ ಇರಬಹುದು, ಈ ಮೂರನ್ನೂ ನಾವು ಗಣನೆಗೆ ತೆಗೆದುಕೊಂಡರೆ, ನೀರಾವರಿ ಮೇಲೆ ನಾವು ವ್ಯಯ ಮಾಡತಕ್ಕಂತಹ ಇಷ್ಟೊಂದು ಹಣ ಇವತ್ತು ವ್ಯಯ ಆದರೂ ಕೂಡ ಏನು ಒಂದು ವಾರ್ಷಿಕ ಗುರಿ ಇದೆ 106 ಲಕ್ಷ ಟನ್‌ನ್ನು ಮುಟ್ಟತಕ್ಕಂಥದ್ದು ಕಳೆದ 4–5 ವರ್ಷಗಳಿಂದ ಸರ್ಕಾರಕ್ಕೆ ಆಗಿಲ್ಲವೆಂಬುದನ್ನು ಬಹಳ ನೋವಿನಿಂದ ನಾನು ಹೇಳಬೇಕಾಗುತ್ತದೆ. ಇವತ್ತು ವಿಶೇಷವಾಗಿ ಕೃಷಿಯಲ್ಲಿ ಏನಾದರೂ ರೈತನಿಗೆ ಅನಾಹುತವಾದರೆ ಅವನ ಪರಿಸ್ಥಿತಿ ಏನು ಎಂಬುದನ್ನು ನಾವು ಯೋಚನೆ ಮಾಡಬೇಕು ಇವತ್ತು ನಾವು ಹೇಳುತ್ತೇವೆ ಔದ್ಯೋಗಿಕರಲ್ಲಿ ಏನಾದರೂ ತೊಂದರೆ ಆದರೆ ಇಂಡಸ್ಟ್ರಿಯಲಿಸ್ಟ್ ಒಬ್ಬ ಬಿ.ಐ.ಎಫ್.ಆರ್. ಮುಂದೆ ಹೋಗುತ್ತಾನೆ, ಅಥವಾ ಬ್ಯಾಂಕ್ ಅವನು ಇಟ್ಟಿರುವಂತಹ ಮೊತ್ತವನ್ನು ಎನ್.ಪಿ.ಎ. ಮಾಡಿ ಕೈತೊಳೆದುಕೊಳ್ಳುತ್ತದೆ. ಆದರೆ ರೈತನ ಗೋಳನ್ನು ಕೇಳತಕ್ಕಂತಹ ಸರ್ಕಾರಗಳು ಬಹಳ ವಿರಳ. ಆದರೆ ಇವತ್ತು ಈ ಸಮ್ಮಿಶ್ರ ಸರ್ಕಾರಕ್ಕೆ ವಿಶೇಷವಾಗಿ ನಾನು ಕೃತಜ್ಞತೆಯನ್ನು ಹೇಳುತ್ತೇನೆ. ಇವರು ಸ್ವಲ್ಪಮಟ್ಟಿಗಾದರೂ ರೈತರ ಗೋಳನ್ನು ಕೇಳತಕ್ಕಂತಹ ದಿಸೆಯಲ್ಲಿ ಸಾಗಿದೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಅದರಲ್ಲಿ ವಿಶೇಷವಾಗಿ ಸನ್ಮಾನ್ಯ ಉಪಮುಖ್ಯಮಂತ್ರಿಗಳು ಕೃಷಿ ಬಡ್ಡಿಯನ್ನು ಮನ್ನಾ ಮಾಡುವುದರಲ್ಲಿ ಜೊತೆಗೆ ಕಡಿಮೆ ಬಡ್ಡಿ ದರದಲ್ಲಿ ಹಣವನ್ನು ಕೊಡುವಂತಹ ವಿಷಯದಲ್ಲಿ ಬಹಳ ಮಹತ್ತರವಾದಂತಹ ಪಾತ್ರವನ್ನು ವಹಿಸಿದ್ದಾರೆಂದು ನಾನು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಆದರೆ ಒಂದು ಮಾತನ್ನು ನಾನು ಸನ್ಮಾನ್ಯ ಉಪಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ, ಅದೇನೆಂದರೆ, ಅವರು ಏನು ಕೃಷಿ ಬಡ್ಡಿಯಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದಾರೆ, ಅದನ್ನು ಕೇವಲ ಕೆಲವೇ ಜನರಿಗೆ ಕೊಟ್ಟಿರುತ್ತಾರೆ. ಅದರಲ್ಲಿ ವಿಶೇಷವಾಗಿ ಯಾರು ವಿಲಿಫುಲಿ ಡಿಫಾಲ್ಟರ್ಸ್ ಇದ್ದಾರೆ ಅವರಿಗೆ ಮಾತ್ರ ಈ ಲಾಭ ತಟ್ಟಿದೆ. ಯಾರು ನಿಜವಾಗಿಯೂ ಕೃಷಿ ಬಡ್ಡಿಯನ್ನು ಮತ್ತು ಅಸಲನ್ನು ಕಟ್ಟುತ್ತಾರೆ ಅಂತಹವರಿಗೆ ಅವರ ಯೋಜನೆಯಿಂದ ಯಾವುದೇ ಲಾಭ ತಪ್ಪಿಲ್ಲ. ತಾವು 20ನೇ ತಾರೀಖಿನೊಳಗಾಗಿ ನಿರ್ಣಯ ಕೈಗೊಳ್ಳುತ್ತೇನೆಂದು ಹೇಳಿದ್ದೀರಿ, ಅದನ್ನೂ

ಕೂಡ ನಾವು ಬಹಳ ಆತುರತೆಯಿಂದ ಕಾಯುತ್ತಿದ್ದೇವೆ. ಇಷ್ಟು ವಿಷಯವನ್ನು ನಾನು ಅವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಜಗದೀಶ್ ಶೆಟ್ಟರ್‌ರವರ ಒಂದು ಸ್ಟಾರ್ಡ್ ಕೊಶ್ಚನ್‌ಗೆ ಮೊನ್ನೆ ಉತ್ತರ ಬಂದಿದೆ. ನನಗೆ ಅದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. 2004–05ನೇ ಸಾಲಿನಲ್ಲಿ 104 ಜನ ರೈತರು ಆತ್ಮಾಹುತಿ ಮಾಡಿಕೊಂಡಿದ್ದಾರೆ. ಇದನ್ನು ನೋಡಿದರೆ ರೈತರ ಗೋಳು ಹೇಗಿದೆ ಎನ್ನತಕ್ಕಂಥದ್ದು ನಮ್ಮ ಮನಸ್ಸಿಗೆ ಸ್ವಲ್ಪ ನೋವಾಗುವಂತಹ ಸಂಗತಿಯಾಗುತ್ತದೆ. ಅದರಲ್ಲಿ ವಿಶೇಷವಾಗಿ ಹಾಸನ ಜಿಲ್ಲೆಯಲ್ಲಿಯೇ 21 ಮಂದಿ ರೈತಾಪಿ ಜನರು ಮರಣಕ್ಕೆ ಈಡಾಗಿದ್ದಾರೆ ಎಂಬುದನ್ನು ನೋಡಿದರೆ ಸ್ವಲ್ಪ ನನ್ನ ಮನಸ್ಸಿಗೆ ನೋವಾಗಿದೆ. ಸರ್ಕಾರ ಈ ದಿಸೆಯಲ್ಲಿ ಏನೇ ಮಾಡಿದರೂ ಈಗ ಮಾಡಿರುವಂತಹದ್ದು ಬಹಳ ಕಡಿಮೆ ಎನ್ನುವಂತಹ ಭಾವನೆ ತಾಳಬೇಕೆಂದು ಸರ್ಕಾರಕ್ಕೆ ತಿಳಿಸಲು ಇಚ್ಛೆಪಡುತ್ತೇನೆ. ಇವತ್ತು ಕೃಷಿ ಸಚಿವರು ಇದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಕಳೆದ 4–5 ವರ್ಷಗಳಿಂದ ಇರತಕ್ಕಂತಹ ಬರಗಾಲ ಈ ವರ್ಷ ಇವತ್ತಿಗೂ ಕೂಡ ಮುಂದುವರಿದಿದೆ ಎಂದು ನಾನು ಹೇಳಬೇಕಾಗುತ್ತದೆ. ಅದನ್ನು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಈಗ ಅವರು ಕೊಟ್ಟಿರುವಂತಹ ಎಕಾನಾಮಿಕ್ ಸರ್ವೆಯಲ್ಲಿ ನೋಡಬೇಕಾದರೆ ಇವತ್ತು ಏನು ಮುಂಗಾರು ಬೆಳೆಗೆ ಒಂದು ಗುರಿಯನ್ನು ಹಾಕಿಕೊಂಡಿದ್ದಾರೆ, ನಾವು 70 ಲಕ್ಷ ಟನ್ ಆಹಾರಧಾನ್ಯವನ್ನು ಉತ್ಪಾದನೆ ಮಾಡುತ್ತೇವೆಂದು, ಅದು ಇವತ್ತು 14 ಲಕ್ಷ ಟನ್ ಈಗಾಗಲೇ ಆಗುವುದಿಲ್ಲವೆಂಬ ನಿರ್ಣಯವನ್ನು ಅವರೇ ತಾಳಿದ್ದಾರೆ. ಪುನಃ ಸರ್ವೆ ಮಾಡಿದರೆ ನನಗೆ ಅನ್ನಿಸುತ್ತದೆ, ಪ್ರಾಯಶಃ ಇವತ್ತು ಅವರು ಕೊಟ್ಟಿರುವಂತಹ 70 ಲಕ್ಷ ಟನ್ ಇರತ್ತಕಂತಹ ಗುರಿಯನ್ನು ಕೇವಲ 35 ಲಕ್ಷ ಟನ್‌ಗೆ ಮುಟ್ಟಿದರೆ ಅವರ ಸಾಧನೆಯೆಂದು ನಾನು ಭಾವಿಸುತ್ತೇನೆ. ಏಕೆಂದರೆ ಅಂತಹ ಒಂದು ಹವಾಮಾನ ಈಗಾಗಲೇ ಉತ್ತರ ಕರ್ನಾಟಕದಲ್ಲಿ ಕಾಣುತ್ತಿದೆ. ನಿಮಗೆ ಗೊತ್ತಿರಬಹುದು, ಗುಲಬರ್ಗಾ ಜಿಲ್ಲೆಯ ಎಲ್ಲಾ ಶಾಸಕರು ವಿಶೇಷವಾಗಿ ಗುಲಬರ್ಗಾದಲ್ಲಿ ಬರಗಾಲದ ಛಾಯೆ ಕಾಣುತ್ತಿದೆಯೆಂದು ಸರ್ಕಾರದ ಗಮನಕ್ಕೆ ತರಲಿಕ್ಕೆ ಪ್ರಯತ್ನಪಟ್ಟಿದ್ದು ಇವತ್ತಿಗೂ ನಮ್ಮ ಮನಸ್ಸಿನಲ್ಲಿದೆ. ಅದರಲ್ಲೂ ವಿಶೇಷವಾಗಿ ಕೃಷಿ ಸಚಿವರಿಂದ ಒಂದು ಆಶ್ವಾಸನೆಯನ್ನು ಬಯಸುತ್ತೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಸನ್ಮಾನ್ಯ ಬೈರೇಗೌಡರನ್ನು ಇವತ್ತು ನಾವು ನೆನಪಸಿಕೊಳ್ಳಬೇಕು. ರಾಜ್ಯಕ್ಕೆ ಒಂದು ಕೃಷಿನೀತಿಯನ್ನು ತಂದುಕೊಡುವುದರಲ್ಲಿ ಅವರು ಬಹಳ ಮಹತ್ತರವಾದ ಪಾತ್ರವನ್ನು ವಹಿಸಿದ್ದರು. ಅವರು ಕೃಷಿ ನೀತಿಯನ್ನು ತರುವುದರ ಜೊತೆಗೆ ಕರ್ನಾಟಕದಲ್ಲಿರತಕ್ಕಂತಹ ಎರಡೂ ಕೃಷಿ ವಿಶ್ವವಿದ್ಯಾಲಯಗಳಿಂದ ಹೊರಹೊಮ್ಮತಕ್ಕಂತಹ ಕೃಷಿ ಪದವೀಧರರನ್ನು ನೇಮಕಾತಿ ಮಾಡುವುದರಲ್ಲಿ ವಿಶೇಷವಾದ ಮುತುವರ್ಜಿಯನ್ನು ಅವರು ವಹಿಸಿದ್ದರು. ಇವತ್ತು

ಮಾನ್ಯ ಅಲಂಗೂರ್ ಶ್ರೀನಿವಾಸ್‌ರವರು ಇದ್ದಾರೆ, ಇವತ್ತಿನ ದಿವಸ ಈ ರಾಜ್ಯದಲ್ಲಿ ಯಾರು ಗ್ರಾಮ ಸೇವಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ, ಅವರಿಗೆ ಯಾವುದೇ ರೀತಿಯ ವಿಷಯ ನೈಪುಣ್ಯತೆಯಿಲ್ಲ, ಯಾವುದೋ ಓಬಿರಾಯನ ಕಾಲದಲ್ಲಿ ಅವರನ್ನು ಗ್ರಾಮ ಸೇವಕರನ್ನಾಗಿ ನೇಮಕ ಮಾಡಲಾಗಿತ್ತು. ಅವರಿಗೆ ಮಣ್ಣು, ಔಷಧ, ಗೊಬ್ಬರ, ಬೆಳೆ ಇವುಗಳ ಬಗ್ಗೆ ಸರಿಯಾಗಿ ಗೊತ್ತಿಲ್ಲ. ಅವರ ಜಾಗಗಳಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಕೃಷಿ ಪದವೀಧರರನ್ನು ನೇಮಕಾತಿ ಮಾಡಿಕೊಳ್ಳಬೇಕೆಂಬ ಉದ್ದೇಶ, ಧ್ಯೇಯವನ್ನು ಶ್ರೀಮಾನ್ ಬೈರೇಗೌಡರು ಹೊಂದಿದ್ದರು. ಈ ಕೃಷಿ ಗ್ರಾಮಸೇವಕರನ್ನು ತೆಗೆದು ಬಿ.ಎಸ್.ಸಿ, ಎಂ.ಎಸ್.ಸಿ. ಕೃಷಿ ಪದವೀಧರರನ್ನು ಕನಿಷ್ಠ ಮೂರು ಅಥವಾ ಎರಡು ಹೋಬಳಿಗಳಿಗೆ ಒಬ್ಬೊಬ್ಬರನ್ನು ನೇಮಕಾತಿ ಮಾಡಬೇಕೆಂಬ ಉದ್ದೇಶವನ್ನು ಮಾನ್ಯ ಬೈರೇಗೌಡರು ಹೊಂದಿದ್ದರು. ಆ ದಿಶೆಯಲ್ಲಿ ತಾವು ಸಚಿವರಾಗಲಿ ಕೃಷಿ ತೋಟಗಾರಿಕಾ ಸಚಿವರಾಗಲಿ ಪ್ರಯತ್ನಪಡುತ್ತೀರಾ ಎಂದು ನಾನು ತಮ್ಮಲ್ಲಿ ಕೇಳಲಿಕ್ಕೆ ಇಷ್ಟಪಡುತ್ತೇನೆ. ಜೊತೆಗೆ ಮಾನ್ಯ ಬೈರೇಗೌಡರಿಗೆ ಇನ್ನೊಂದು ಕಲ್ಪನೆಯಿತ್ತು. ಕೃಷಿ ಹಾಗೂ ತೋಟಗಾರಿಕೆ ಇವೆರಡೂ ಒಂದೇ ಇಲಾಖೆ ಆದರೆ ಒಳ್ಳೆಯದು ಎಂದು. ಆದರೆ 1994ರಿಂದ ವಿಶೇಷವಾಗಿ ಹಾರ್ಟಿಕಲ್ಚರ್‌ಗೆ ಒತ್ತನ್ನು ಕೊಡಬೇಕೆನ್ನುವ ಉದ್ದೇಶದಿಂದ ಈ ತೋಟಗಾರಿಕೆ ಇಲಾಖೆಯನ್ನು ಪ್ರತ್ಯೇಕಪಡಿಸಿರುವಿರಿ. ಆದರೆ ಇವತ್ತು ರೈತ ವೈಜ್ಞಾನಿಕವಾಗಿ ಯಾವುದೇ ಬೆಳೆಯನ್ನು ಬೆಳೆಯಬೇಕಾದರೆ ಮಣ್ಣು, ಮತ್ತು ನೀರನ್ನು ಪರೀಕ್ಷೆ ಮಾಡಬೇಕಾದರೆ, ಪೆಸ್ಟಿಸೈಡ್ಸ್ ಅನ್ನು ಹೊಡೆಯಬೇಕಾದರೆ, ಗೊಬ್ಬರ ಕೊಡಬೇಕಾದರೆ ಒಂದು ಲ್ಯಾಬೋರೇಟರಿಗೆ ಹೋಗುವಂತಹ ಅವಕಾಶ ಈ ರಾಜ್ಯದಲ್ಲಿ ಇದುವರೆಗೆ ಅವನಿಗೆ ಸಿಕ್ಕಿಲ್ಲ. ಇಡೀ ಜಿಲ್ಲೆಯಲ್ಲಿ ಎಲ್ಲಾದರೂ ಒಂದು ಲ್ಯೊಬೋರೇಟರಿ ಇರುತ್ತದೆ, ಅದೂ ಕೂಡ ಮುಚ್ಚಿದೆಯೇ ಅಥವಾ ತೆಗೆದಿದೆಯೇ ಎನ್ನುವುದು ನಿಮಗೆ ಗೊತ್ತಿರುತ್ತದೆ. ನೀವು ಸರ್ವೆ ಮಾಡಿ ನೋಡಿದರೆ ನಿಮಗೆ ಗೊತ್ತಾಗುತ್ತದೆ, ಈ ರಾಜ್ಯದಲ್ಲಿರುವಂತಹ ಬಹುತೇಕ ಮಣ್ಣು, ನೀರುಗಳನ್ನು ಟೆಸ್ಟ್ ಮಾಡಲಿಕ್ಕೆ ಇರುವ ಬಹುತೇಕ ಲ್ಯಾಬೊರೇಟರಿಗಳನ್ನು ಮುಚ್ಚಲಾಗಿದೆ. ಹೀಗೆ ನಿಷ್ಕ್ರಿಯೆ ಆಗಿರುವಂತಹ ಈ ಲ್ಯಾಬೋರೇಟರಿಗಳನ್ನು ತಾವಿಬ್ಬರೂ ಸೇರಿ ಇವತ್ತು ಅಗ್ರಿಕಲ್ಚರ್‌ಗೆ, ಹಾರ್ಟಿಕಲ್ಚರ್‌ಗೆ ಎಂದು ಬೇರೆ ಬೇರ ಎನ್ನುವಂತಹ ವಿಚಾರವಿಲ್ಲ, ಅವುಗಳನ್ನು ಬೆರೆಸಿ ಒಂದು ಒಳ್ಳೆಯ ಲ್ಯಾಬೊರೇಟರಿ ಮಾಡಬೇಕು. ಇವತ್ತು ನಾವು ಒಬ್ಬ ವೈದ್ಯನಲ್ಲಿಗೆ ಹೋದರೆ ಒಬ್ಬ ಮನುಷ್ಯನಿಗೆ ಏನೇನು ಔಷಧಿ ಕೊಡಬೇಕೆಂಬ ಬಗ್ಗೆ ಒಂದು ಪ್ರಿಸ್ಕ್ರಿಪ್ಷನ್ ಹೇಗೆ ಕೊಡುತ್ತಾನೆ, ಹಾಗೆ ಎರಡು ಇಲಾಖೆಗಳನ್ನು ಬೆರೆಸಿ ಒಂದು ಮಾಡರ್ನ್ ಲ್ಯಾಬೋರೇಟರಿಯನ್ನು ತಯಾರಿಸುವ ಪ್ರಯತ್ನವನ್ನು ಮಾಡುವಿರಾ ಎಂದು ನಾನು ತಮ್ಮ ಮೂಲಕ ಸಚಿವರಲ್ಲಿ ಕೇಳಲಿಚ್ಛಿಸುತ್ತೇನೆ. ಕೃಷಿ ಸಚಿವರು ಇದ್ದರೆ ಒಳ್ಳೆಯದಾಗುತ್ತಿತ್ತು, ಇವತ್ತು ಅವರು ಎರಡು

ಹುದ್ದೆಗಳನ್ನು ನಿರ್ವಹಿಸುತ್ತಿದ್ದಾರೆ. ಅವರು ಆರ್ಗಾನಿಕ್ ಮ್ಯಾನ್ಯುರ್ ಕಡೆಗೆ ಹೋಗುತ್ತಾರೆಯೇ ಅಥವಾ ಇನ್‌ಆರ್ಗಾಮಿಕ್ ಮ್ಯಾನ್ಯುರ್ ಕಡೆಗೆ ಹೋಗುತ್ತಾರೆಯೇ ಎಂಬ ದ್ವಂದ್ವದಲ್ಲಿ ನಾವಿದ್ದೇವೆ. ಅವರು ಯಾವಕಡೆಗೆ ಹೋಗುತ್ತಾರೆಂಬುದು ನಮಗೂ ಗೊತ್ತಾಗುತ್ತಿಲ್ಲ. ಅದರ ಬಗ್ಗೆ ತೋಟಗಾರಿಕಾ ಸಚಿವರಿಗೇನಾದರೂ ಗೊತ್ತಿದ್ದು ನಮಗೆ ಹೇಳಿದರೆ ಒಳ್ಳೆಯದಾಗುತ್ತದೆ. ಏಕೆಂದರೆ ಇವತ್ತು ಅವರ ಎರಡು ಆರ್ಥಿಕ ಸಮೀಕ್ಷೆಗಳನ್ನು ನೋಡಿದರೂ ಕೂಡ 16 ಲಕ್ಷ ಟನ್‌ನಷ್ಟು ಇನ್‌ಆರ್ಗಾಮಿಕ್ ಮ್ಯಾನ್ಯುರ್ಸ್ ಅನ್ನು ಕೊಡಬೇಕೆಂಬ ಗುರಿಯನ್ನು ಹೊಂದಿದ್ದಾರೆ. ಆದರೆ ಕಳೆದ ನಾಲ್ಕೈದು ವರ್ಷಗಳ ವರದಿಯನ್ನು ತೆಗೆದು ನೋಡಿದರೆ 10 ಲಕ್ಷ ಟನ್‌ಗಿಂತ ಹೆಚ್ಚು ಗೊಬ್ಬರವನ್ನು ಒಂದು ಸಾರಿಯೂ ಉಪಯೋಗಿಸಿರುವುದು ನಮ್ಮ ಕಣ್ಣಿಗೆ ಗೋಚರಿಸುತ್ತಿಲ್ಲ, ಜೊತೆಗೆ ಸಾವಯವ ಕೃಷಿ ಬಗ್ಗೆ ಮಾನ್ಯ ಹೆಚ್.ಕೆ.ಪಾಟೀಲರು ಬಹಳಷ್ಟು ಮಾತನಾಡಿದ್ದಾರೆ, ಹಿಂದಿನ ಸರ್ಕಾರ ಕೂಡ ಬಹಳಷ್ಟು ಮಾತನಾಡಿದೆ. ಆದರೆ ಇವತ್ತು ಸಾವಯವ ಕೃಷಿಗೆ ತಾವು ಕೊಡುವ ಒತ್ತು ನೋಡಿದರೆ ಯಾವುದೇ ರೈತಾಪಿ ಜನಕ್ಕೆ ಇದರಿಂದ ಸಹಾಯವಾಗುತ್ತದೆಂದು ಕಾಣಿಸುತ್ತಿಲ್ಲ. ಅದಕ್ಕಾಗಿ ನಾನು ಇವತ್ತು ಸನ್ಮಾನ್ಯ ಕೃಷಿ ಸಚಿವರಲ್ಲಿ ಕೇಳಿಕೊಳ್ಳುವುದಿಷ್ಟೆ, ಇವತ್ತು ರಾಜ್ಯದಲ್ಲಿ ತಾವೇ ಹಾಕಿಕೊಂಡಿರುವ ಗುರಿಯಂತೆ ರೈತರು 70 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯನ್ನು ಮಾಡಿದ್ದಾರೆ. ಇವತ್ತು ರೈತನ ಕೈಗೆ ಎಷ್ಟು ಬೆಳೆ ಬರುತ್ತವೆಂಬ ಬಗ್ಗೆ ನಿರ್ದಿಷ್ಟವಾದ ವರದಿಯನ್ನು ಈ ಸಭೆಗೆ ಕೊಡಬೇಕು. ಏಕೆಂದರೆ 4 ವರ್ಷಗಳಲ್ಲಿ ಇದ್ದಂತಹ ಬರಗಾಲ ಪುನಃ ಈ ವರ್ಷ ಕೂಡ ಪ್ರಾರಂಭವಾಗಿದೆಯನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆ ಗುರಿಯನ್ನು ಅವರು ಮುಟ್ಟುತ್ತಾರೋ ಇಲ್ಲವೋ ಎಂಬ ವಿಚಾರವನ್ನು ಸರ್ಕಾರ ಈ ಸಭೆಗೆ ತಿಳಿಸಬೇಕು ಎಂದು ನಾನು ತಮ್ಮ ಮುಖಾಂತರ ಕೇಳಲಿಚ್ಛಿಸುತ್ತೇನೆ. ಇನ್ನೊಂದು ವಿಚಾರವೇನೆಂದರೆ, ಕಳೆದ ಎರಡು – ಮೂರು ವರ್ಷಗಳಿಂದ ಆವರ್ತ ನಿಧಿಯನ್ನು ಸೃಷ್ಟಿ ಮಾಡುತ್ತಾ ಬಂದಿದ್ದಾರೆ. ಹೋದ ಸಾರಿ 2003–2004ರಲ್ಲಿ ಮುನ್ನೂರು ಕೋಟಿ ಆವರ್ತ ನಿಧಿಯನ್ನು ಸೃಷ್ಟಿ ಮಾಡಿದ್ದೇವೆಂದು ಹೇಳಿದರು. ಆದರೆ ಅದರಲ್ಲಿ 10 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಅದೇ ರೀತಿ 2002–2003ರಲ್ಲಿ ಸಹ 300 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ಸೃಷ್ಟಿ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಅದರಿಂದ ಈ ರಾಜ್ಯದ ರೈತರಿಗೆ ಲಾಭ ಸಿಕ್ಕಿದ್ದು ಕೇವಲ 10 ಕೋಟಿ ರೂಪಾಯಿಗಳಷ್ಟು ಮಾತ್ರ, ಹಾಗಿದ್ದಲ್ಲಿ ಈ ಆವರ್ತ ನಿಧಿಯನ್ನು ಸೃಷ್ಟಿ ಮಾಡುವಂತಹ ಉದ್ದೇಶವೇನು? ಇವರು ರೈತರಿಗೆ ಕೊಡದೇ ಇರುವಂತಹ ಆವರ್ತ ನಿಧಿಯನ್ನು ಸೃಷ್ಟಿ ಮಾಡಿದರೆ ಅದು ಆವರ್ತ ನಿಧಿಯೆನ್ನಿಸಿಕೊಳ್ಳುವುದಿಲ್ಲ. ಈ ವಿಚಾರದಲ್ಲಿ ಸರ್ಕಾರದ ನಿಲುವೇನು ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳಬೇಕು. ಮತ್ತೊಂದು ಪ್ರಾಮುಖ್ಯವಾದ ಒಂದು ವಿಚಾರವನ್ನು

ನಾನು ಮಾನ್ಯ ತೋಟಗಾರಿಕೆ ಸಚಿವರಲ್ಲಿ ವಿನಂತಿಸುತ್ತೇನೆ. ಈ ತೋಟಗಾರಿಕೆ ಇಲಾಖೆಗೆ ಯಾವ ಉದ್ದೇಶದಿಂದ ಸರ್ಕಾರ ಒತ್ತು ಕೊಡಬೇಕೆನ್ನುವ ದೃಷ್ಟಿಯಿಂದ ಸೃಷ್ಟಿ ಮಾಡಿತ್ತು ಆ ಉದ್ದೇಶ ಸಫಲವಾಗುತ್ತಿಲ್ಲ. ಆ ಬಗ್ಗೆ ಅವರ ಇಲಾಖಾ ವರದಿಯನ್ನು ಅವರು ತರಿಸಿಕೊಂಡು ನೋಡಲಿ. 1998 ರಿಂದ 2004 ರವರೆಗೆ ತೋಟಗಾರಿಕೆ ಇಲಾಖೆಗೆ ಆಯವ್ಯಯದಲ್ಲಿ ಕೊಡುವ ಹಣ ಗಣನೀಯವಾಗಿ ಕಡಿಮೆಯಾಗುತ್ತಿದೆಯೇ ವಿನಹ ಹೆಚ್ಚಾಗಿಲ್ಲ. 2002–2003ರಲ್ಲಿ ವಿಶೇಷವಾಗಿ ಈ ಸದನ ತೋಟಗಾರಿಕೆ ಇಲಾಖೆಗೆ ಕೊಡುತ್ತಿರುವ ಹಣವನ್ನು ದ್ವಿಗುಣಗೊಳಿಸಬೇಕು ಅಥವಾ ಮೂರು ಪಟ್ಟು ಹೆಚ್ಚಿಗೆ ಮಾಡಬೇಕೆಂದು ಒಂದು ರೆಸಲ್ಯೂಷನ್ ಸಹ ಮೂವ್ ಮಾಡಿತ್ತು. ಆ ದಿಶೆಯಲ್ಲಿ ಸರ್ಕಾರ ಇನ್ನೂ ಕಾರ್ಯೋನ್ಮುಖವಾಗಿಲ್ಲವೆಂಬುದು ನಮಗೆ ನೋವಿನಿಂದ ನಾನು ಹೇಳಬೇಕಾಗಿದೆ. 2001 ರಿಂದ 2004 ರವರೆಗೆ ಕನಿಷ್ಠ ಪಕ್ಷ ನಲವತ್ತು ಸಾವಿರ ಕೋಟಿ ರೂಪಾಯಿಯಷ್ಟು ತೋಟಗಾರಿಕೆ ಬೆಳೆ ಹಾನಿಯಾಗಿದೆ ಎಂಬ ಅಂದಾಜು ನಮ್ಮಲ್ಲಿದೆ. ಅದು ತೆಂಗು, ಅಡಕೆ, ದಾಳಿಂಬೆ, ಗೋಡಂಬಿ, ದ್ರಾಕ್ಷಿ ಇರಬಹುದು, ಆ ಅಂದಾಜನ್ನು ಒಂದು ಸಮೀಕ್ಷೆ ಮಾಡಿ ಈ ಸದನಕ್ಕೆ ಮಾಹಿತಿಯನ್ನು ಕೊಡಬೇಕು. 2001–2005 ರವರೆಗೆ ಎಷ್ಟು ಬೆಳೆಗಳ ಹಾನಿಯಾಗಿದೆ ಎಂಬ ಮಾಹಿತಿಯನ್ನಾದರೂ ಸರ್ಕಾರ ಕೊಡಲಿ, ಆ ತೋಟಗಾರಿಕೆ ಇಲಾಖೆಯಲ್ಲಿ ಹಾನಿಯಾಗಿರುವ ಬೆಳೆಗಳಿಗೆ ನೀವೇನಾದರೂ ಹಣವನ್ನು ಕೊಟ್ಟು ಪುನರ್‌ಜೀವನ ಕೊಡುವಿರೆಂಬ ವಿಚಾರ ನಮ್ಮ ಮನಸ್ಸಿನಲ್ಲಿತ್ತು. ಆದರೆ ನನಗೆ ಆಶ್ಚರ್ಯವಾಗುತ್ತದೆ, ಎಕನಾಮಿಕ್ ಸರ್ವೆಯಲ್ಲಿ ನಿಮ್ಮ ತೋಟಗಾರಿಕ ಇಲಾಖೆಯವರು ಒಂದು ವರದಿಯನ್ನು ಕೊಟ್ಟಿದ್ದಾರೆ, ಅದನ್ನು ಓದುತ್ತೇನೆ. 2001–02 ರಿಂದ ಸತತವಾಗಿ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಮಳೆಯ ಅಭಾವದಿಂದ ತೀವ್ರ ಬರದ ಪರಿಸ್ಥಿತಿ ಉಂಟಾಗಿದೆ. ಇದಕ್ಕಾಗಿ ತೋಟಗಾರಿಕೆ ಬೆಳೆಗಳಿಗೆ ಹಾನಿಯುಂಟಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರ ವಿಶೇಷ ಪ್ಯಾಕೇಜ್ ಎಂದು ಐವತ್ತು ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆಗೊಳಿಸಿದೆ. ಇದು ಯಾವುದಕ್ಕೂ ಸಾಕಾಗುವುದಿಲ್ಲ. ಹಾಗಾಗಿ ದಯಮಾಡಿ ತಾವು ಈ ವಿಚಾರದಲ್ಲಿ ತಮ್ಮ ನಿಲುವೇನು ಎಂಬುದನ್ನು ಸ್ಪಷ್ಟಪಡಿಸಬೇಕು. ಕೊನೆಯದಾಗಿ ಫುಡ್ ಪ್ರೋಸೆಸಿಂಗ್ ಪಾರ್ಕ್ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಈ ರಾಜ್ಯದಲ್ಲಿ 5 ಫುಡ್ ಪ್ರೋಸೆಸಿಂಗ್ ಪಾರ್ಕ್‌ಗಳು ಬಂದಿವೆ. ಆದರೆ ಅದು ಎಲ್ಲಿ ಬರಬೇಕಾಗಿತ್ತು ಅಲ್ಲಿ ಬಂದಿಲ್ಲ, ಎಲ್ಲಿ ಬರಬಾರದಾಗಿತ್ತು ಅಲ್ಲಿ ಬಂದಿವೆ, ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿ ಒಂದು ಫುಡ್ ಪ್ರೋಸೆಸಿಂಗ್ ಪಾರ್ಕ್ ಬಂದಿದೆ, ಜೇವರ್ಗಿಗೊಂದು ಫುಡ್ ಪ್ರೋಸೆಸಿಂಗ್ ಪಾರ್ಕ್ ಹೋಗಿದೆ. ಇಡೀ ರಾಜ್ಯದಲ್ಲಿ ಅತೀ ಹೆಚ್ಚು ಬೆಳೆಗಳನ್ನು ಬೆಳೆಯುವ ಬಿಜಾಪುರ ಜಿಲ್ಲೆಯಲ್ಲಿ ಫುಡ್ ಪ್ರೋಸೆಸಿಂಗ್ ಪಾರ್ಕ್ ಬರಲಿಲ್ಲ, ಇದರಿಂದ ನಮಗೆ ಆಶ್ಚರ್ಯವಾಗುತ್ತದೆ. ನೀವು ನಿಮ್ಮ ಇಲಾಖೆಯ ಅಧಿಕಾರಿಗಳು ರಾಜ್ಯದಲ್ಲಿ ಆಗುತ್ತಿರುವ ತಾರತಮ್ಯದ ಕಡೆಗೆ

ಸ್ವಲ್ಪ ಒತ್ತು ಕೊಟ್ಟು ನೋಡಿದರೆ ಭವಿಷ್ಯದ ದಿಮಾನದಲ್ಲಿ ಬರುವ ತಪ್ಪನ್ನು ತಾವು ತಿದ್ದಿಕೊಳ್ಳಬಹುದೆಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತಂದು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

2) ಗಮನ ಸೆಳೆಯುವ ಸೂಚನೆ

ವಿಷಯ: ಮೌಂಟ್ ಎವರೆಸ್ಟ್ ಏರಿ ಕಣ್ಮರೆಯಾಗಿರುವ ವಾಯುದಳದ ಅಧಿಕಾರಿ ಶ್ರೀ ಎಸ್.ಎಸ್.ಚೈತನ್ಯ ಅವರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :- ಮಾನ್ಯ ಉಪಾಧ್ಯಕ್ಷರೆ, ಹಿಮಾಲಯ ಪರ್ವತನ್ನೇರಿ ಕಣ್ಮರೆಯಾದಂತಹ ವಾಯುದಳದ ಅಧಿಕಾರಿ ಶ್ರೀ ಎಸ್.ಎಸ್. ಚೈತನ್ಯರವರ ಬಗ್ಗೆ ಬಹಳ ಪ್ರಾಮುಖ್ಯವಾದ ವಿಚಾರವನ್ನು ನಾನು ಮತ್ತು ಈಶ್ವರಪ್ಪನವರು ಸದನದ ಗಮನಕ್ಕೆ ತರುತ್ತಿದ್ದೇನೆ.

ಮಾನ್ಯ ಸದಸ್ಯರು :- ನಮಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ, ಎರಡು ದಿವಸಗಳಿಂದ ನಾವು ಕಾಯುತ್ತಿದ್ದೇವೆ. ನಮಗೆ ನಮ್ಮ ಭಾಗದ ಸಮಸ್ಯೆಗಳನ್ನು ಹೇಳಲಿಕ್ಕೆ ಅವಕಾಶವನ್ನು ಕೊಡಬೇಕು.

ಉಪಾಧ್ಯಕ್ಷರು :- ಈಗ ಅದನ್ನು ಮುಗಿಸಿಬಿಡಿ. 3.00 ಗಂಟೆಗೆ ಬೇಡಿಕೆಗಳ ಮೇಲೆ ಬೇಕಾದಷ್ಟು ಚರ್ಚೆಯಿದೆ. ಆಗ ಚರ್ಚಿಸೋಣ.

ಶ್ರೀ ವಾಟಾಳ್ ನಾಗರಾಜ್ :- ಒಂದು ನಿಮಿಷ. ಈಗ ಹಿಮಾಲಯ ಪರ್ವತವನ್ನು ಏರಿ ಕಣ್ಮರೆಯಾಗಿರುವ ವಾಯುದಳದ ಅಧಿಕಾರಿ ಶ್ರೀ ಎಸ್.ಎಸ್.ಚೈತನ್ಯರವರ ಬಗ್ಗೆ ಈಗ ತನಿಖೆಯನ್ನು ಕೈಬಿಟ್ಟಿದ್ದಾರೆ. ವಾಯುದಳದವರು ಕೇಂದ್ರ ಸರ್ಕಾರನವರು ಎಲ್ಲರೂ ತನಿಖೆಯನ್ನು ಕೈಬಿಟ್ಟಿದ್ದಾರೆ. ಚೈತನ್ಯ ಕನ್ನಡದ ಒಬ್ಬ ವೀರ. ಅವರು ಹಿಮಾಲಯ ಪರ್ವತವನ್ನು ಏರಿ ಕನ್ನಡ ಧ್ವಜವನ್ನು ಅಲ್ಲಿ ಹಾರಿಸಿ ಸಿರಿಗನ್ನಡಂ ಗಲ್ಗೆ ಎಂಧು ಬರೆದು, ನಮ್ಮ ರಾಜ್ಯಕ್ಕೆ ಕೀರ್ತಿಯನ್ನು ತಂದಂತಹ ಒಬ್ಬ ಅಧಿಕಾರಿ. ಈ ಅಧಿಕಾರಿಯ ಬಗ್ಗೆ ಈಗ ಸಂಪೂರ್ಣವಾಗಿ ತನಿಖೆಯನ್ನು ಮುಚ್ಚಿಟ್ಟಿದ್ದಾರೆ. ಅವರ ಉಡುಪುಗಳನ್ನು ತಂದು ಮನೆಗೆ ಕೊಟ್ಟಿದ್ದಾರೆ. ಇದು ಸರಿಯಾದ ವಿಚಾರವಲ್ಲ. ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಯವರು ಕೂಡಲೇ ಕೇಂದ್ರ ಸರ್ಕಾರದ ದಂಡಿನ ಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು, ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು, ಮಾತನಾಡಿ ಮತ್ತೆ ತನಿಖೆಯನ್ನು ಆರಂಭ ಮಾಡಬೇಕು. ಇದರ ಜೊತೆಗೆ ಅವರ ಸಂಸಾರಕ್ಕೆ ಕನಿಷ್ಟ 25 ಲಕ್ಷ ರೂಪಾಯಿಗಳ ಪರಿಹಾರವನ್ನು ಕರ್ನಾಟಕ ಸರ್ಕಾರ ಕೊಡಬೇಕು. ಮತ್ತು